TIGHT BINDING BOOK

brown book

THE BOOK WAS DRENCHED

TEXT LITE WITHIN THE BOOK ONLY

UNIVERSAL LIBRARY
OU_198429
UNIVERSAL LIBRARY

ಪ್ರಕಾಶಕಃ—
ಶ್ರೀ. ಮಾಧವ ಹರೀಪಂತ ಚಿಟಣೀಸ
ಅಥಣಿ

ಮುದ್ರಕಃ—
ಮ. ರಾ. ಸಿ. ವ್ಹಿ. ಅಣೆಪ್ಪನವರ
ಶ್ರೀ ಮುರಘೇಂದ್ರ
ಪ್ರೇಸ್ ವಿಜಾಪೂರ.

॥ ಶ್ರೀ ॥

# ಯಶೋಮಂದಿರ.

ಆತ್ಮವಿಶ್ವಾಸವನ್ನು ಬೆಳೆಸುವದೇ

ಇದರ

ಮುಖ್ಯ ಧ್ಯೇಯವು.

ಲೇಖಕರು:—

ಮಾಧವ ಹರಿಪಂತ ಚಿಟಣೀಸ.

ಪ್ರಥಮಾವೃತ್ತಿ ಪ್ರತಿ ೧೦೦೦

ಬೆಲೆ ೬ ಆಣೆ

ಈ ಪುಸ್ತಕದ ಎಲ್ಲ ಬಾಧ್ಯತೆಯು ಲೇಖಕರ ಕಡೆಗೆ ಇರುತ್ತದೆ.

# ಯಶೋಮಂದಿರ.

## ಆತ್ಮವಿಶ್ವಾಸವನ್ನು ಬೆಳಿಸುವದೇ ಇದರ ಮುಖ್ಯಧ್ಯೇಯವು.

## ವಿಷಯಾನುಕ್ರಮಣಿಕಾ.

೧ ನೀತಿಸಂಗ್ರಹ
೨ ದುಡ್ಡು
೩ ದುರ್ಜನರ ದುರ್ವರ್ತನವು
೪ ವಿದ್ಯಾರ್ಥಿಗಳು ನೆನಪಿನಲ್ಲಿಡತಕ್ಕ ಸಂಗತಿಗಳು
೫ ಪರದೇಶಿಯಾದ ಪುರುಷೋತ್ತಮನು
೬ ಕರ್ಮಸಾಗರದಲ್ಲಿ ಮುಳುಗಿದ ಕಾಳಿದಾಸನು
೭ ಚಳಿಗಾಲದ ಚಂದವಾದ ನೋಟವು
೮ ಆಲಸ್ಯರಾಯನ ಆಳುವಿಕೆ
೯ ವಿಮಲೆಯ ವೀರತನ
೧೦ ಪರನಿಂದೆಯೇ ಪಾಪದ ಮಡವು.
೧೧ ಸ್ವಾವಲಂಬಿಯಾದ ಸದಾಶಿವನು
೧೨ ಸಜ್ಜನರ ಸಂದೇಶವು
೧೩ ಯೋಗ್ಯದಿಂದ ವೆಚ್ಚಮಾಡುವದೇ ವೈಭವದ ತಳಹದಿಯು
೧೪ ವಿನೋದ ಸಾಗರ

# ಮುನ್ನುಡಿ.

ಪ್ರಿಯ ವಾಚಕರೇ, ನನಗೆ ಚಿಕ್ಕಂದಿನ ಹಿಡಿದು ನಿಬಂಧ ಕಥೆ ಮುಂತಾದವುಗಳನ್ನು ಬರೆಯುವ ಚಟವು ಹೆಚ್ಚು. ಆದ್ದರಿಂದ ಶಕ್ಯವಿದ್ದಷ್ಟು ಪ್ರಯತ್ನ ಮಾಡಿ ಒಂದು ಚಿಕ್ಕಪುಸ್ತಕವನ್ನು ಬರೆದು, ಮುದ್ರಿಸಬೇಕೆಂದು ಸಂಕಲ್ಪ ಮಾಡಿದ್ದೆನು. ಈ ಸಂಕಲ್ಪವು ವಿದ್ಯಾದೇವತೆಯಾದ ಶ್ರೀ ಶಾರದಾ ಮಾತೆಯ ಕೃಪೆಯಿಂದ ಇಂದಿಗೆ ಪೂರ್ಣವಾಯಿತು. ನಾನು ಕೇವಲ ಈ ಪುಸ್ತಕವನ್ನು "ಮೋಫತ ವಾಚನಾಲಯ, ಗೋರಕ್ಷಣ ಸಂಸ್ಥೆ ಶಿಕ್ಷಣಾಲಯ, ಮುಂತಾದ ಪವಿತ್ರವಾದ ಸಂಸ್ಥೆಗಳ ಸಹಾಯಕ್ಕಾಗಿ ಮತ್ತು ನನ್ನ ಪರಮ ಪೂಜ್ಯ ಅಬಚಿಯವರ ಜ್ಯೇಷ್ಠ ಪುತ್ರರಾದ ಕೈ ವಾ ಶೇಷೋಪಂತ ವೆಂಕಾಜೀ ಕುಲಕರ್ಣಿ ಸಪ್ತಸಾಗರ ಇವರ ಸ್ಮರಣಾರ್ಥವಾಗಿ" ಬರೆದಿರುವೆನು.

ಈ ಪುಸ್ತಕದಿಂದ ಮಾರಿಬಂದ ಹಣವನ್ನು ನನ್ನ ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳದೆ. ಮೇಲೆ ಬರೆದ ಸಂಸ್ಥೆಗಳ ಸಹಾಯಕ್ಕಾಗಿಯೇ ಉಪಯೋಗ ಮಾಡತಕ್ಕದ್ದಿರುತ್ತದೆ.

ಈ ಪುಸ್ತಕವನ್ನು ಬರೆದು ಮುಗಿಸಿ ಮುದ್ರಿಸುವ ದೆಶೆಯಿಂದಾ ಇಲ್ಲಿಯ "ಶ್ರೀ ಸಿದ್ಧೇಶ್ವರ ಮೋಫತ ವಾಚನಾಲಯದ ಸೆಕ್ರೆಟರಿಗಳಾದ ಶ್ರೀ. ನಾ. ವೆ ದೇಶಮುಖ ಇವರ ಮತವನ್ನು ಕೇಳಿದೆನು. ಇದಕ್ಕೆ ಅವರು ಉತ್ತಮವಾದ ಅಭಿಪ್ರಾಯವನ್ನು ಕೊಟ್ಟರು. ಅದರಿಂದ ನನಗೆ ಬಹಳೇ ಸಂತೋಷವಾಯಿತು.

ಆ ಮೇಲೆ ಇದನ್ನು ಮುದ್ರಿಸುವ ದೆಶೆಯಿಂದಾ ವಿಜಾಪೂರಕ್ಕೆ ಹೋಗಿ ಅಲ್ಲಿಯ “ಶ್ರೀ ಮುರಘೇಂದ್ರ ಪ್ರೆಸ್ಸದ ಮಾಲಕರಿಗೆ ಭೆಟ್ಟಿಯಾದೆನು ಅವರಾಗಲೂ ನನ್ನ ವಿನಂತಿಗೆ ಮಾನಕೊಟ್ಟು ಯೋಗ್ಯ ಖರ್ಚಿನಲ್ಲಿ ತಯಾರಿಸಿ ಕೊಡುತ್ತೇನೆಂದು ಹೇಳಿ, ಈ ಪವಿತ್ರವಾದ [illegible] [illegible]ವೆಂದು ತಿಳಿದು ಬಹು ಪರಿಶ್ರಮದಿಂದ ಮಾಡಿಕೊಟ್ಟರು.

ಶ್ರೀ ನಾ. ವೆ. ದೇಶಮುಖ ಇವರ ಉತ್ತಮವಾದ ಅಭಿಪ್ರಾಯದಿಂದ ಮತ್ತು ಶ್ರೀ ಮುರಘೇಂದ್ರ ಪ್ರೆಸ್ಸಿನ ಮಾಲಕರ ಪ್ರೇಮದಿಂದ ನನ್ನ ಚಿಕ್ಕ ಮನೋರಥವು ಈಡೇರಿತು ಅದ್ದರಿಂದ ಈ ಉಭಯತರ ಆಭಾರವನ್ನು ಎಷ್ಟು ಮನ್ನಿಸಿದರೂ ಕಡಿಮೆಯೇ ಸರಿ.

ವಾಚಕರೇ ನಾನು ಈ ಪುಸ್ತಕವನ್ನು ನನ್ನ ಅಲ್ಪಬುದ್ಧಿಗೆ ತಿಳಿದಷ್ಟು ಬರೆದದ್ದರಿಂದ ಇದರಲ್ಲಿ ಏನಾದರೂ ತಮಗೆ ತಪ್ಪು ತಡಿಗಳು ಕಂಡು ಬಂದಲ್ಲಿ ಕ್ಷಮಿಸಿ, ಹಂಸಕ್ಷೀರ ನ್ಯಾಯದಂತೆ ವರ್ತಿಸಬೇಕೆಂದು ಬೇಡಿಕೊಳ್ಳುವೆನು. ಮತ್ತು ದ್ವಿತಿಯಾವೃತ್ತಿಯನ್ನು ತೆಗೆಯುವದಕ್ಕೆ ಸಹಾಯ ಮಾಡಿರೆಂದು ಆಶಿಸಿ, ಈ ಮುನ್ನುಡಿಯನ್ನು ಮುಗಿಸುತ್ತೇನೆ

ಅಥಣಿ ತಮ್ಮ

ಮಾಧವ ಹರೀಪಂತ ಚಿಟಣೀಸ

# ನೀತಿ ಸಂಗ್ರಹ.

೧ ಸಜ್ಜನರಿಗೆ ಪೀಡಿಸುವ ಮತ್ತು ಅವರ ನಿಂದೆಯನ್ನು ಮಾಡುವ ಮನುಷ್ಯರು ಯಾವಾಗಲೂ ಅಧೋಗತಿಯ ರಾಜ್ಯದಲ್ಲಿಯೇ ವಾಸ ಮಾಡುವರು.

೨ ಯಾವ ಮನುಷ್ಯನು ಪ್ರತಿಯೊಂದು ಕಾರ್ಯವನ್ನು ನಿಯಮಿತ ಕಾಲದಿಂದ ಮಾಡುವದಿಲ್ಲವೋ ಆ ಮನುಷ್ಯನ ಆಯುಷ್ಯಕಾಲವೂ ನಿಯಮಿತ ಮರ್ಯಾದೆಯಿಂದ ಉಳಿಯುವದಿಲ್ಲ.

೩ ಪರಸ್ತ್ರೀಯನ್ನು ಕೇವಲ ಕೆಟ್ಟಕಣ್ಣಿನಿಂದ ನೋಡುವವನು ನಿಜವಾದ ಹೊಲೆಯನು.

೪ ನರಪಶುಗಳ ನಿಂದೆಗೆ ಲಕ್ಷ್ಯ ಕೊಡದವನೇ ನಿಜವಾದ ವೀರನು.

೫ ನೀಚ ಜನರಿಗೆ ಬೇಕಾದಷ್ಟು ಗಂಡಾಂತರಗಳು ಬಂದಾಗ್ಯೂ ಅವರಿಗೆ ಯಾವ ರೀತಿಯಿಂದಲೂ ಸಹಾಯ ಮಾಡದವರೇ ನಿಜವಾದ ಜಾಣರು.

೬ ನರಾಧಮರು ಮರಣ ಹೊಂದಿದರೆ ನೀವು ತಿಲಮಾತ್ರವಾದರೂ ಶೋಕಮಾಡಬೇಡಿರಿ.

೭ ನೀವು ಕೈಕೊಂಡಿರುವ ಸದುದ್ಯೋಗವನ್ನು ನಾಶಮಾಡುವದರ ಸಲುವಾಗಿ ನೀಚರು ಯಾವಾಗಲೂ ಕಂಕಣಬದ್ಧರಾಗಿರುತ್ತಾರೆ. ಆದರೆ ಅವರು ನಿಮ್ಮ ಕಾರ್ಯದ ಸಲುವಾಗಿ ಎಷ್ಟೇ ಪಾಂಚಜನ್ಯವನ್ನು ಹೊಡೆದರೂ ಅದರ ಕಡೆಗೆ ನೀವು ಲಕ್ಷವನ್ನೇ

ಕೊಡಬೇಡಿರಿ. ನಿಮ್ಮ ಕಾರ್ಯವನ್ನು ಒಳ್ಳೇ ಹುರುಪಿನಿಂದಾ ಕೊನೆಗಾಣಿಸಿರಿ.

೮ ಅನಾಥರಿಗೆ ತನು, ಮನ, ಧನದಿಂದ ತಮಗೆ ಶಕ್ಯವಿದ್ದಷ್ಟು ಯಾರು ಸಹಾಯ ಮಾಡುವರೋ, ಮತ್ತು ಅವರನ್ನು ಗತಿಗೆ ಹಚ್ಚುವರೋ ಅವರೇ ಈ ಜಗತ್ತಿನಲ್ಲಿ ಪೂಜ್ಯರು.

೯ ಅನಾಥರನ್ನು ನೋಡಿ ಯಾವ ಶ್ರೀಮಂತನಿಗೆ ಮತ್ತು ವಿದ್ವಾನನಿಗೆ ಕನಿಕರವು ಹುಟ್ಟುವದಿಲ್ಲವೋ ಅಂಥವರ ಶ್ರೀಮಂತಿಕೆಗೆ ಮತ್ತು ವಿದ್ವತ್ತಿಗೆ ಧಿಃಕಾರವಿರಲಿ.

೧೦ ನಿಂದೆಯನ್ನು ಮಾಡುವ ವಿಪ್ರರಿಗೆ ಅನ್ನದಾನವನ್ನು ಮತ್ತು ದ್ರವ್ಯದಾನವನ್ನು ಮಾಡುವದಕ್ಕಿಂತ ಬಡ ಅಂತ್ಯಜರಿಗೆ ಮಾಡುವದು ಒಳ್ಳೇ ಲೇಸಾದದ್ದು ಮತ್ತು ಪವಿತ್ರವಾದದ್ದು.

೧೧ ಪ್ರತಿಯೊಬ್ಬರೂ ತಮ್ಮ ಮನಸ್ಸನ್ನು ನಿರ್ಮಲವಾಗಿ ಇಟ್ಟುಕೊಳ್ಳಬೇಕು. ಅಂದರೇನೇ ಅವರಿಗೆ ನಿಜವಾದ ಸೌಖ್ಯವು ಲಭಿಸುವದು.

೧೨ ರತ್ನಾಕರನು ಸಕಲರಿಗೂ ದರ್ಶನವನ್ನು ಕೊಡುವ ದೇವನು. ಆದ್ದರಿಂದ ಅವನನ್ನು ಪ್ರತಿನಿತ್ಯದಲ್ಲಿಯೂ ಪೂಜಿಸಿರಿ.

೧೩ ಆಕಳು ಭೂಲೋಕದ ದೇವತೆಯು. ಆದ್ದರಿಂದ ಎಲ್ಲರು ತಮಗೆ ಶಕ್ಯವಿದ್ದಷ್ಟು ಆ ಭೂಲೋಕದ ದೇವತೆಯ ಸೇವೆಯನ್ನು ತಪ್ಪದೆ ಮಾಡುತ್ತಾ ಹೋದಲ್ಲಿ, ಚಿರಕಾಲ ಸೌಖ್ಯವು ಲಭಿಸುವದು

೧೪ ಯಾವ ಮನುಷ್ಯನಿಗೆ ಯಾವಾಗಲೂ ಹಣದ ಹೊರತಾಗಿ ೨ ನೇ ಪದಾರ್ಥವೇ ಕಾಣುವದಿಲ್ಲವೋ ಅವನು ಈ ಜಗತ್ತಿನಲ್ಲಿಯ ಮೊದಲನೇ ತರಗತಿಯ ಪರಮನೀಚನು.

೧೫ ನಮ್ಮಲ್ಲಿ ನೂರಾಎಂಟು ಜಾತಿ ಪಂಗಡಗಳು ತುಂಬಿದ್ದರಿಂದ ಮತ್ತು ದುರಭಿಮಾನದ ಸಾಮ್ರಾಜ್ಯವು ಪಸರಿಸಿದ್ದರಿಂದ ನಾವು ಮಾಡುವ ಯಾವತ್ತೂ ಕಾರ್ಯಗಳು ರಸಾತಳಕ್ಕೆ ಇಳಿಯುತ್ತಿವೆ. ಅಂದ ಬಳಿಕ ನಮ್ಮ ಉತ್ಕರ್ಷವು ಎಂದಾದರೂ ಆದೀತೆ? ಛೇ! ಎಂದೂ ಇಲ್ಲ.

೧೬ ಯಾವನು ಅನ್ಯಾಯದಿಂದ ವರ್ತಿಸುವನೋ ಅವನೇ ನಿಜವಾದ ನರಪಶುವು.

೧೭ ಎಲ್ಲಿಯ ವರೆಗೆ ಪರನಿಂದೆಯನ್ನು ಮಾಡುವ, ಜನ ಹಾವಳಿಯು ಕಡಿಮೆಯಾಗುವದಿಲ್ಲವೋ ಅಲ್ಲಿಯ ವರೆಗೆ ನಮ್ಮ ಸುಧಾರಣೆಯಾಗಲಾರದು.

೧೮ ನಿಜವಾದ ಜಾಣರು ತಮ್ಮ ಕರ್ತವ್ಯಗಳನ್ನು ಕೊನೆಗಾಣಿಸುವಾಗ ದುರ್ಜನರ ನಿಂದೆ ಸ್ತುತಿಗಳ ಕಡೆಗೆ ಎಂದೂ ಲಕ್ಷ್ಯಕೊಡುವದಿಲ್ಲ.

೧೯ ಪ್ರಸಂಗಬಿದ್ದಲ್ಲಿ ಹಮಾಲಿಯನ್ನಾದರೂ ಮಾಡಿ ಉದರ ನಿರ್ವಾಹವನ್ನು ಸಾಗಿಸಿರಿ. ಆದರೆ ಜನರು ಹೆಸರಿಟ್ಟಾರು ಅಪಮಾನವಾದೀತು ಎಂಬ ಒಣ ದುರಭಿಮಾನಕ್ಕೆ ಬಿದ್ದು ಸಂಕಟಕ್ಕೆ ಒಳಗಾಗಬೇಡಿರಿ. ಜನರೇನು ಹೆಸರಿಟ್ಟಾರು ಆದರೆ ಅವರೇನು ನಿಮ್ಮ ಉದರ ನಿರ್ವಾಹವನ್ನು ಸಾಗಿಸುವರೋ? ಎಂದೂ ಇಲ್ಲ.

೨೦ ಉಗಿಬಂಡಿಯು ತನ್ನ ಇಚ್ಛಿತಸ್ಥಳಕ್ಕೆ ಮುಟ್ಟುವದ ಸಲುವಾಗಿ ವೇಳೆಗೆ ಸರಿಯಾಗಿ ಯಾವ ದಾರಿಯನ್ನು ನೋಡದೆ, ಹ್ಯಾಗೆ ಸಾಗಿಸುವದೋ ಅದರಂತೆಯೇ ನೀವು ಮಾಡತಕ್ಕ ಯೋಗ್ಯವಾದ ಕರ್ತವ್ಯಗಳನ್ನು ವೇಳೆಗೆ ಸರಿಯಾಗಿ ಮಾಡುತ್ತ ಹೋಗಿರಿ. ಈ ವೇಳೆಗೆ ನೀವು ನೀಚರ ನಿಂದೆಸ್ತುತಿಗಳ ಕಡೆಗೆ ಲಕ್ಷ್ಯ ಕೊಡಬೇಡಿರಿ.

೨೧ ಪ್ರತಿನಿತ್ಯದಲ್ಲಿಯೂ ಸಾಧು ಸತ್ಪುರುಷರ ಮತ್ತು ಪರಾಕ್ರಮಶಾಲಿಗಳ ಭಾವಚಿತ್ರದ ದರ್ಶನವನ್ನು ತೆಗೆದುಕೊಂಡು ನಿಮ್ಮ ಉದ್ಯೋಗಕ್ಕೆ ಆರಂಭಿಸಿರಿ

೨೨ "ಸೇರಿಗೆ ಸವ್ವಾ ಸೇರ" ಎಂಬ ನ್ಯಾಯದಂತೆ ನಿಮಗೆ ಯಾವ ಜನರು ಹ್ಯಾಗೆ ಗಂಟು ಬೀಳುವರೋ ಹಾಗೆಯೇ ವರ್ತಿಸಿರಿ. ನಿಷ್ಕಾರಣವಾಗಿ ಅವರ ಸ್ತುತಿಯನ್ನು ಮಾಡಬೇಡಿರಿ ಮತ್ತು ನಿಮ್ಮನ್ನು ನೀವು ಹೊಗಳಿಕೊಳ್ಳಬೇಡಿರಿ.

೨೩ ಸಾರಾಸಾರ ವಿಚಾರ ಮಾಡದೆ ಪುಕ್ಕಟೆಯಾದ ಬಾಯಿಯಿರುತ್ತದೆಂದು, ಮನಬಂದಂತೆ ಜನರಿಗೆ ಹೆಸರಿಡಬೇಡಿರಿ.

೨೪ ಹೇಮಂತ ಋತುವಿನಲ್ಲಿ ನದಿಯ ನೀರು ಯಾವ ಪ್ರಕಾರವಾಗಿ ಅತ್ಯಂತ ನಿರ್ಮಲವಿರುತ್ತದೆಯೋ ಅದರಂತೆಯೇ ಸಜ್ಜನರ ಹೃದಯವು ಯಾವಾಗಲೂ ನಿರ್ಮಲವಿರುತ್ತದೆ. ಅಂದ ಬಳಿಕ ನಾವಾದರೂ ಮೇಲೆ ಬರೆದಂತೆ ಆಗಲಿಕ್ಕೆ ಯತ್ನಿಸತಕ್ಕದ್ದು.

೨೫ ನೀಚತನದಿಂದ ಆಯುಷ್ಯವನ್ನು ಕಳೆದು ಕಾಶೀಯಾತ್ರೆಯನ್ನು ಮಾಡುವದಕ್ಕಿಂತ ಸರಳತನದಿಂದ ವರ್ತಿಸಿ ತನ್ನಿಂದ ಕೈಲಾದ ಮಟ್ಟಿಗೆ ಅನಾಥರಿಗೆ ತನು, ಮನ, ಧನದಿಂದ ಸಹಾಯ ಮಾಡುತ್ತ ಆಯುಷ್ಯವನ್ನು ಕಳೆಯುವದೇ ಶ್ರೇಯಸ್ಕರವಾದದ್ದು.

೨೬ ಪ್ರಸಂಗಬಿದ್ದಲ್ಲಿ ಮನೆಯವರಿಗಾಗಲೀ ಅಥವಾ ಇತರರಿಗಾಗಲೀ ನಿಮಗೆ ಶಕ್ಯವಿದ್ದಷ್ಟರ ಮಟ್ಟಿಗೆ ಸಹಾಯ ಮಾಡಿರಿ. ಅಂದರೆ ನಿಮಗೂ ಅವರು, ಸಹಾಯ ಮಾಡುವರು. ಆದರೆ ಅವರ ಕೂಡ ಯಾವ ವ್ಯವಹಾರವನ್ನು ಪಾಲುಗಾರಿಕೆಯಿಂದ ಮಾಡಬೇಡಿರಿ. ಯಾಕಂದರೆ, ಅದು ಕಡೆತನಕಾ ಸುಸೂತ್ರವಾಗಿ ಸಾಗೀತೆಂಬ ನಿಯಮವಿಲ್ಲ.

೨೭ ಮನುಷ್ಯನಿಗೆ ಸಾಲವೆಂದರೆ ಹಿರೀ ಬೇನೆಯುಕಿಂತಲೂ ಭಯಂಕರವಾದದ್ದು. ಆದ್ದರಿಂದ ಇದರ ವಿಷಯಕ್ಕೆ ಎಷ್ಟು ಎಚ್ಚರಿಕೆಯಿಂದಾ ಇರಬೇಕೆಂದು ಬೇರೆ ಹೇಳುವ ಕಾರಣವಿಲ್ಲ. ಅಂದಮೇಲೆ ನಾವು ಒಂದು ಕಾಸುಸಹ ಸಾಲವಾಗದಂತೆ ಎಚ್ಚರಿಕೆಯಿಂದ ಇರತಕ್ಕದ್ದು.

೨೮ ಪರರಿಗೆ ಮಾನ ಮರ್ಯಾದೆಗಳನ್ನು ಮಾಡುವಾಗ ನೀವು ಕೀಳರೆಂದು ತಿಳಕೊಳ್ಳಬೇಡಿರಿ.

೨೯ ಸಜ್ಜನರ ಚರಿತ್ರಗಳೆಂದರೆ ಯಶೋಮಂದಿರದ ರಾಜಮಾರ್ಗದ ಮೇಲಿರುವ ಸೌಖ್ಯದ ನೆರಳನ್ನು ಕೊಡುವ ವೃಕ್ಷಗಳು.

೩೦ ವಿದ್ವಾಂಸರ ವಾಕ್ಯಗಳೆಂದರೆ ಅಮೃತದ ಹನಿಗಳು

೩೧ ಬೇಕಾದಷ್ಟು ಘೋರವಾದ ಗಂಡಾಂತರಗಳು ಬಂದಾಗ್ಯೂ ಮನಸ್ಸಿಗೆ ತಾಪವನ್ನು ಮಾಡಿಕೊಂಡು, ಆತ್ಮಹತ್ಯವನ್ನು ಮಾಡಿಕೊಳ್ಳಬೇಡಿರಿ ಯಾಕಂದರೆ ಅದು ಭಯಂಕರವಾದ ಮೂರ್ಖತನವು.

೩೨ ಉಗಿಬಂಡಿಯು ಕಾರ್ಯಕ್ರಮವು ಹೇಗೆ ಎಡೆಬಿಡದೆ ನಿಯಮದಿಂದ ನಡೆಯುತ್ತದೆಯೋ ಅದರಂತೆ ನಿಮ್ಮ ಆಯುಷ್ಯದ ಉಪಯೋಗವನ್ನು ಮಾಡಿಕೊಳ್ಳಿರಿ

೩೩ ನಿಮ್ಮಕಿಂತಲೂ ವಯಸ್ಸಿನಿಂದ ಚಿಕ್ಕವರಿದ್ದರೂ ಕೂಡ ಅವರಿಗೆ ಅವರ ಹೆಸರಿನಲ್ಲಿ ಅಪಶಬ್ದವಾಗಿ ಕರೆಯಬೇಡಿರಿ ಆದರವಾಗಿ ಕಾಣುವ ಹಾಗೆ ಪೂರ್ಣ ಹೆಸರಿನಿಂದ ಕರೆಯಿರಿ

೩೪ ನರಪಶುಗಳು ನಕ್ಕರೆ ನೀವು ಮನಸ್ಸಿಗೆ ಹಚ್ಚಿಕೊಳ್ಳಬೇಡಿರಿ. ಯಾಕಂದರೆ ಸೂಕರವು ವಿಷ್ಟೆಯನ್ನು ಹ್ಯಾಗೆ ತಿನ್ನುವ

ನೈಸರ್ಗಿಕ ಧರ್ಮವಿದೆಯೋ, ಅದರಂತೆಯೇ ಈನರ ಪಶುಗಳ ನಗುವ ಧರ್ಮವಾಗಿರುವದು.

೩೫ ಪೂರ್ವ ಪರಂಪರೆಯು ಮತ್ತು ವರದಕ್ಷಿಣೆಯು ಒಣ ದುರಭಿಮಾನಕ್ಕೆ ಬಿದ್ದು "ಕತ್ತೆಗೆ ಹೂರಣವನ್ನು ಮೇಯಿಸಿದಂತೆ" ವಿವಾಹವನ್ನು ಮಾಡಿ, ವಧು ವರರನ್ನು ಸಾಲುಗಾರರನ್ನಾಗಿ ಮಾಡಬೇಡಿರಿ.

೩೬ ನಾವು ಯಾವಾಗಲೂ ನಮಗಿಂತಲೂ, ಹೀನಸ್ಥಿತಿಯ ಜನರ ಕಡೆಗೆ ನೋಡಿ ಪ್ರಪಂಚವೆಂಬ ರಥವನ್ನು ನಡೆಯಿಸತಕ್ಕದ್ದು

೩೭ ಸಂಶಯೀ ವೃತ್ತಿಯುಳ್ಳವರು ಮತ್ತು ಆತ್ಮ ವಿಶ್ವಾಸವಿಲ್ಲದರು ಇವರು ಯಾವಾಗಲೂ ಅಧೋಗತಿಯ ರಾಜ್ಯದಲ್ಲಿಯೇ ವಾಸಮಾಡುವರು ಮತ್ತು ಇವರಿಗೆ ಇಹ ಪರಗಳಲ್ಲಿ ತಿಲ ಮಾತ್ರವಾದರೂ ಸೌಖ್ಯವಾಗುವದಿಲ್ಲ.

೩೮ ನಮ್ಮಲ್ಲಿ ರೋಗಗಳು ಬಂದು ಥೈ ಥೈ ಎಂದು ಕುಣಿಯಹತ್ತಿದಮೇಲೆ ನಾವು ಸುದ್ದಿಯಮೇಲೆ ಬರುತ್ತೇವೆ ಇದು ಮೂರ್ಖತನವು. ಆದರೆ, ಅವುಗಳ ಬರುವಿಕೆಯ ಸಾಧಾರಣ ಚಿನ್ಹವನ್ನು ತಿಳಕೊಂಡು ಕೂಡಲೆ ಅವುಗಳಿಗೆ ತಕ್ಕ ಸತ್ಕಾರವನ್ನು ಮಾಡಿದರೆ ತೀರಿತು. ಆ ಮೇಲೆ ಇಂಥ ಮೂರ್ಖತನದ ಪ್ರಸಂಗವೇ ಬರಲಾರದು.

೩೯ ಕೇವಲ ಹಣದಾಶೆಗಾಗಿ ಯಾವ ವಿಚಾರವನ್ನು ಮಾಡದೆ, ಹೆಣ್ಣು ಮಕ್ಕಳನ್ನು ವೃದ್ಧರಿಗೆಕೊಟ್ಟು ಅವರ ಸಂಸಾರದ ಹೋಳಿಯನ್ನು ಮಾಡಿ ಪಾಪಕ್ಕೆ ಗುರಿಯಾಗಬೇಡಿರಿ.

೪೦ ನಿರುದ್ಯೋಗಿಯಾಗಿ ಮಿಷ್ಟಾನ್ನಗಳನ್ನು ತಿನ್ನುವದಕ್ಕಿಂತ ಉದ್ಯೋಗವಂತನಾಗಿ ಪಲ್ಲೆ ಬಕ್ಕರಿಯನ್ನು ತಿನ್ನುವದು ಲೇಸು.

೪೧ ಶಾಲೆಯಲ್ಲಿ ಬಾಲಕರ ಅಭ್ಯಾಸವು ಸರಿಯಾಗಿ ನಡೆಯುವದರ ಸಲುವಾಗಿ ಅಧ್ಯಾಪಕರು ಹ್ಯಾಗೆ ವೇಳಾಪತ್ರಿಕೆಯನ್ನು ಮಾಡಿ ಅದರಂತೆ ವರ್ತಿಸುವರೋ ಅದರಂತೆಯೇ ಪ್ರಪಂಚವೆಂಬ ಶಾಲೆಯು ಎಲ್ಲ ಕಾರ್ಯಗಳಲ್ಲಿ ವೇಳಾಪತ್ರಿಕೆಯು ಅವಶ್ಯವಾದದ್ದು.

೪೨ ನಿರ್ಮಲಾಂತಃಕರಣ, ನಿಷ್ಕಪಟತನ, ಮತ್ತು ನಿರ್ವ್ಯಸನಗಳಿಂದ ಕೂಡಿದ ಈ ತ್ರಿವೇಣೀ ಸಂಗಮದಮೇಲೆ ಯಾವಾಗಲೂ ವಾಸಮಾಡುವ ಮನುಷ್ಯನು ನಿಜವಾದ ಭಾಗ್ಯವಂತನು

೪೩ ಸಧನನಿಗೆ ಪಂಚ ಪಕ್ವಾನ್ನಗಳನ್ನು ತಿನ್ನಿಸುವದಕ್ಕಿಂತ ನಿರ್ಧನನಿಗೆ ಪತ್ಲ ಬಕ್ಕರಿಯನ್ನು ತಿನ್ನಿಸುವದು ಪರಮಶ್ರೇಯಸ್ಕರವಾದದ್ದು.

೪೪ ನಮ್ಮಲ್ಲಿ ಉದ್ಯೋಗವಂತರಿಗೆ ಉತ್ತೇಜನವು ದೊರೆಯುವದಿಲ್ಲವೆಂದೇ ಬೇಕಾರರ ಸಂಖ್ಯೆಯು ಹೆಚ್ಚಾಗುತ್ತ ನಡೆದಿರುವದು.

೪೫ ಯಾವಾಗಲೂ "ಉದ್ಯೋಗ" ವೆಂಬ ಮಹಾಮಂತ್ರವನ್ನು ಜಪಿಸುವವರೇ ಉತ್ಕರ್ಷಮಂದಿರದಲ್ಲಿ ಪ್ರವೇಶ ಮಾಡಲಿಕ್ಕೆ ಯೋಗ್ಯರು.

೪೬ ನಮ್ಮಲ್ಲಿ ಎಷ್ಟೋ ಕಂಗಾಲ ಶ್ರೀಮಂತರಿರುವರು ಮತ್ತು ತಿನ್ನಲಿಕ್ಕೆ ಅಶನವಿಲ್ಲದಿದ್ದರೂ ಒಕ್ಕಳ ಸೊಕ್ಕಿನ ಕೆಲವು ದರಿದ್ರರೂ ಇರುವರು. ಆದರೆ ದರಿದ್ರರಸೊಕ್ಕು ಕಡಿಮೆಯಾಗಿ ಅವರಲ್ಲಿ ನಮ್ರತನವು ಬರದಹೊರತು ಮತ್ತು ಈ ಕಂಗಾಲ ಶ್ರೀಮಂತರಲ್ಲಿ ಉದಾತ್ತ ವಿಚಾರಗಳೂ, ಮತ್ತು ಹಣದ ಯೋಗ್ಯ ವಿನಿಯೋಗ ಮಾಡುವ ತಿಳುವಳಿಕೆಯು ಬರದ ಹೊರತು

ಸಮಾಜದ ಸ್ಥಿತಿಯು ಸುಧಾರಿಸಬೇಕಾದರೆ ತುಸು ದುಸ್ತರವಾಗುತ್ತದೆ.

೪೭ ಸಜ್ಜನರ ಸ್ವಭಾವವು ಸಮುದ್ರದಂತಿರುವದು ಅಂತೆಯೇ ಅವರ ದಿವ್ಯವಾದ ಸಂದೇಶವು ಜಗತ್ತಿಗೆ ಮಾರ್ಗದರ್ಶಕವಾಗಿರುವದು.

೪೮ ನಾವು ಕೂತಾಗ ನಿಂತಾಗ ಧರ್ಮ ಅಧರ್ಮ ಅಡ್ಡಾಡುವಾಗ ಧರ್ಮ ಅಧರ್ಮ ಯಾವಾಗಲೂ ಧರ್ಮ ಅಧರ್ಮವೆಂದೇ ಅನ್ನುತ್ತಿರುತ್ತೇವೆ. ಅಂದಮೇಲೆ ಇದೇನು ಧರ್ಮವೋ ಅಥವಾ ನಮ್ಮ ಅಗಾಧ ಕರ್ಮವೋ ತಿಳಿಯಲೊಲ್ಲದು ಅಹಾ! ಇದು ಎಂಥ ಶೋಚನೀಯ ಸ್ಥಿತಿಯು. ನಮ್ಮಲ್ಲಿರುವ ಈ ಕೋಟ್ಯಾವಧಿ ಧರ್ಮಾಧರ್ಮಗಳೇ ನಮ್ಮ ಉತ್ಕರ್ಷಕ್ಕೆ ಅಡ್ಡ ಬರ ಹತ್ತಿವೆ. ಯಾಕಂದರೆ, ನಮಗೆ " ಮಾನವನ ನಿಜವಾದ ಧರ್ಮವು ಯಾವದು " ಇದು ತಿಳಿಯದ್ದರಿಂದಲೇ ಇಂಥ ಸ್ಥಿತಿಯಾಗಿರುವದು.

೪೯ ಯಾವದೇ ಉದ್ಯೋಗದ ಅತಿರೇಕವಾದಲ್ಲಿ ಆ ಉದ್ಯೋಗದೊಳಗೆ ಸ್ವಾರಸ್ಯವು ಉಳಿಯುವದಿಲ್ಲ.

೫೦ ಪ್ರತಿಯೊಬ್ಬ ಉದ್ಯೋಗವಂತನು ನಿಸ್ವಾರ್ಥನಿಯೂ, ಮತ್ತು ವೆಚ್ಚಮಾಡುವದರಲ್ಲಿಯೂ, ಮಿತವ್ಯಯಿಯು ಇರಲಿಕ್ಕೆ ಬೇಕು. ಅಂದರೆ ಅವನ ಉದ್ಯೋಗಕ್ಕೆ ಹಾನಿಯು ಎಂದೂ ತಗಲದು.

೫೧ ತನ್ನ ತಪ್ಪುಗಳನ್ನು ಸಂಪೂರ್ಣವಾಗಿ ತಿದ್ದಲಿಕ್ಕೆ ಯತ್ನಿಸುವ ಮನುಷ್ಯನೇ ಎಲ್ಲರೊಳಗೆ ಜಾಣನು.

# ದುಡ್ಡು.

ಜಗತ್ತಿನ ಎಲ್ಲ ವ್ಯವಹಾರವು ದುಡ್ಡಿನಿಂದಲೇ ಸಾಗಿರುವದು. ದುಡ್ಡಿಲ್ಲದೆ ಒಂದು ನಿಮಿಷವೂ ಸಹ ಸಾಗದು. 'ದುಡ್ಡಿದ್ದವನೇ ದೊಡ್ಡಪ್ಪನು' ಎಂಬಂತೆ ಮನುಷ್ಯನು ಎಷ್ಟೇ ಜಾಣನಿದ್ದರೂ ಅವನ ಹತ್ತಿರ ದುಡ್ಡಿಲ್ಲದಿದ್ದರೆ ಯಾರೂ ಕೇಳಲಾರರು. ಅದೇ ಅವನ ಹತ್ತಿರ ದುಡ್ಡಿದ್ದರೆ ಅವನು ಎಷ್ಟೇ ದಡ್ಡನಿದ್ದರೂ ಜಾಣನೆಂದು ಎಣಿಸಲ್ಪಡುವನು ಆಹಾ ದುಡ್ಡಿನ ಮಹಿಮೆಯು ಎಷ್ಟು ಅಗಾಧವಾದದ್ದು "ಹಣವಿದ್ದರೆ ಹೆಣವು ಸಹ ಬಾಯಿತೆಗೆಯುವದು" ಎಂಬಂತೆ ಈ ಜಗತ್ತಿನಲ್ಲಿ ನಮ್ಮೆಲ್ಲ ಮಾನವ ಪ್ರಾಣಿಗಳಿಗೆ ದುಡ್ಡಿನ ಮಹತ್ವವು ಕ್ಷಣ ಕ್ಷಣಕ್ಕೆ, ಎಷ್ಟಿರುತ್ತದೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ದುಡ್ಡನ್ನು ಎಷ್ಟು ಎಚ್ಚರಿಕೆಯಿಂದ ರಕ್ಷಣ ಮಾಡತಕ್ಕದ್ದು, ಮತ್ತು ಎಷ್ಟು ಜಾಣತನದಿಂದ ವೆಚ್ಚ ಮಾಡತಕ್ಕದ್ದು. ಇದನ್ನು ನಾವು ಗೊತ್ತು ಮಾಡಿಕೊಳ್ಳಲಿಕ್ಕೆಬೇಕು. ಅಂದರೆ ನಮ್ಮ ಆಯುಷ್ಯವು ಆನಂದದಿಂದ ಸಾಗುವದು. ಇಲ್ಲವಾದರೆ ಸೂರ್ಯ ಚಂದ್ರರಿಗೆ ಗ್ರಹಣವು ಹಿಡಿದ ವೇಳೆಗೆ ಹ್ಯಾಗೆ ಒಮ್ಮಿಂದೊಮ್ಮೆ ಪ್ರಕಾಶವು ಅಡಗಿ ಕತ್ತಲೆಯು ಬಿದ್ದು ಮನುಷ್ಯನ ವ್ಯವಹಾರವು ನಿಂತು ಹೋಗುವದು. ಅದರಂತೆಯೇ ನಮ್ಮ ಸ್ಥಿತಿಯಾಗುವದು. ಇದರಲ್ಲಿ ಏನೂ ಸಂಶಯವಿಲ್ಲ. ಆದ್ದರಿಂದ ಪ್ರತಿಯೊಬ್ಬರು ನ್ಯಾಯದಿಂದ ಮತ್ತು ಪ್ರಾಮಾಣಿಕತನದಿಂದ ಹಣವನ್ನು ಸಂಪಾದಿಸಿ ಯೋಗ್ಯ ರೀತಿಯಿಂದ ಅದರ ಉಪಯೋಗವನ್ನು ಮಾಡತಕ್ಕದ್ದು. ಅನ್ಯಾಯದಿಂದ ತಿನೇಯುವರನ್ನು ಮೋಸಗೊಳಿಸಿ ಸಿಕ್ಕಸಿಕ್ಕ ಹಾಗೆ

ಅಯೋಗ್ಯ ಬಡ್ಡಿಯ ಆಕರಣೆಯನ್ನು ಮಾಡಿ, ಒಂದಕ್ಕೆರಡು ಕಾಗದವನ್ನು ಬರಿಸಿಕೊಂಡು ಅವರ ಕುತ್ತಿಗೆಯ ಮೇಲೆ ಚೂರಿಯನ್ನಿಟ್ಟು ಸಂಪಾದಿಸಿದ ಹಣವು ಎಷ್ಟೇ ಇದ್ದರೂ ನಾಶ ಹೊಂದುವದು. ಇಷ್ಟೇ ಅಲ್ಲ ಹಿರಿಯರು ಸಂಪಾದಿಸಿಟ್ಟ ಹಣವಾದರೂ, ಅದರ ಕೂಡವೇ ಹಾಳಾಗಿ ಹೋಗುವದು. ಆದ್ದರಿಂದ ವಾಚಕ ಬಂಧುಭಗಿನಿಯರೇ ನೀವು ಯಾವಾಗಲೂ ನ್ಯಾಯದಿಂದಲೂ ಮತ್ತು ಪ್ರಾಮಾಣಿಕತನದಿಂದಲೂ ದುಡ್ಡನ್ನು ಸಂಪಾದಿಸಿರಿ. ರಟ್ಟೇ ಮುರಿದು ರೊಟ್ಟೀ ತಿನ್ನಿರಿ ಬೇರೆಯವರನ್ನು ಮೋಸಗೊಳಿಸಲಿಕ್ಕೆ ಎಂದೂ ಹೋಗಬೇಡಿರಿ. ಅದು ಕ್ಷೇಮಕರವಲ್ಲ. ನೀವು ಹಣವನ್ನು ವೆಚ್ಚಮಾಡುವಾಗ ನಿಮ್ಮ ಆದಾಯಕ್ಕಿಂತಲೂ ಯಾವಾಗಲೂ ಕಡಿಮೆ ಪ್ರಮಾಣದಿಂದ ವೆಚ್ಚವನ್ನು ಮಾಡಿರಿ. ಇಲ್ಲವಾದರೆ ನಿಷ್ಕಾರಣವಾಗಿ ಸಾಲುಗಾರರಾಗಿ ಮನೆ ಮಾರುಗಳನ್ನು ಕಳೆದುಕೊಳ್ಳುವ ಪ್ರಸಂಗವು ಬರುವದು. ಆದ್ದರಿಂದ ತರುಣ ವಯಸ್ಸಿನಲ್ಲಿಯೇ ಹಣವನ್ನು ಯೋಗ್ಯರೀತಿಯಿಂದ ಸಂಪಾದಿಸಿಟ್ಟರೆ ನಿಮ್ಮ ವೃದ್ಧಾಪಕಾಲಕ್ಕೆ ಆದರ ಉಪಯೋಗವಾಗುವದು. ಮತ್ತು ಉಳಿದ ಆಯುಷ್ಯವು ಸೌಖ್ಯದಿಂದ ಸಾಗುವದು ಇಷ್ಟೇ ಅಲ್ಲದೆ ನಿಮ್ಮ ಕುಟುಂಬದ ಜನರಿಗೂ ಸೌಖ್ಯವಾಗುವದು. ಈ ಜಗತ್ತಿನಲ್ಲಿ ಮನೆಮಾರುಗಳನ್ನು ಮಾಡಿಕೊಂಡು ಇರುವ ಪ್ರತಿಯೊಬ್ಬ ಮನುಷ್ಯರು ದುಡ್ಡನ್ನು ಮರೆಯಬೇಡಿರಿ. ನಿಮ ಹತ್ತರ ಯಾವಾಗಲೂ ನಿಮಗೆ ಶಕ್ಯವಿದ್ದಷ್ಟರಮಟ್ಟಿಗೆ ದುಡ್ಡಿಲ್ಲದೆ ಎಂದೂ ಇರಬೇಡಿರಿ. ಯಾಕಂದರೆ "ದುಡ್ಡಂದರೆ ಪ್ರಪಂಚದ ಸೂರ್ಯನು" ಸೂರ್ಯನಿಲ್ಲದಿದ್ದರೆ ಯಾವ ಪ್ರಕಾರ ಈ ಜಗತ್ತಿನ ವ್ಯವಹಾರವು ಒಂದು ಕ್ಷಣ ಮಾತ್ರವಾದರೂ ಸಾಗುವದಿಲ್ಲವೋ ಆದೇ ಪ್ರಕಾರವಾಗಿ ಹಣವನ್ನು ಸಂಗ್ರಹಿಸಿ ಇಡದಿದ್ದರೆ ಪ್ರಾಪಂಚಿಕರ ವ್ಯವಹಾರವು ಒಂದು ನಿಮಿಷಸಹ ಸಾಗ

ಲಾರದು. ಆದ್ದರಿಂದ ಪ್ರತಿತಿಂಗಳು ತಪ್ಪದೇ ನಿಮ್ಮ ಉತ್ಪನ್ನದೊಳಗಿನ ಕೆಲವು ಭಾಗವನ್ನು ಸಂಗ್ರಹಿಸಿ ಇಡುತ್ತಾ ಹೋಗಿರಿ ಎಂದೂ ಮರೆಯಬೇಡಿರಿ. ಇದು ನಿಮ್ಮ ಆದ್ಯ ಕರ್ತವ್ಯವಿರುತ್ತದೆ. "ಒಂದು ಪ್ರಸಂಗದಲ್ಲಿ ಒಂದೇ ಒಂದು ರೂಪಾಯಿಯು ಕೋಟಿ ರೂಪಾಯಿಗಳಷ್ಟು ಕೆಲಸವನ್ನು ಕೊಡುವದು." ಅಂದಬಳಿಕ ವ್ಯವಹಾರದಲ್ಲಿ ಹಣದ ಮಹತ್ವವು ಎಷ್ಟಿರುತ್ತದೆಂಬದರ ಬಗ್ಗೆ ಎಷ್ಟು ವರ್ಣನೆಯನ್ನು ಮಾಡಿದರೂ ತೀರದು ಒಟ್ಟಿಗೆ ಅತ್ಯಂತ ನೆನಪಿನಲ್ಲಿಡತಕ್ಕ ಮಹತ್ವದ ಸಂಗತಿಯಂದರೆ ಪ್ರತಿತಿಂಗಳು ನಿಮಗೆ ಶಕ್ಯವಿದ್ದಷ್ಟರ ಮಟ್ಟಿಗೆ ಪ್ರಾಪ್ತಿಯೊಳಗಿನ ಕೆಲವು ಅಂಶವನ್ನು ಶಿಲ್ಲಕ ಒಗೆಯಲಿಕ್ಕೆ ಎಂದೂ ಮರೆಯಬೇಡಿರಿ ಯಾಕಂದರೆ ಈಗ ಶಿಲ್ಲಕ ಮಾಡಿಟ್ಟ ಹಣವು ನಿಮಗೆ ದುಡ್ಡಿನ ಕೊರತೆಯಿದ್ದಾಗ ಅದರಿಂದ ನಿಮಗೆ ಒಳ್ಳೇ ಉಪಯೋಗವಾಗುವದು. ಆದ್ದರಿಂದ ಉತ್ಪನ್ನಕ್ಕಿಂತಲೂ ಹೆಚ್ಚಿಗೆ ವೆಚ್ಚವನ್ನು ಮಾಡಬೇಡಿರಿ.

# ದುರ್ಜನರ ದುರ್ವರ್ತನವು.

ವಾಚಕ ಬಂಧು ಭಗಿನಿಯರೇ ಈ ದುರ್ಜನರ ದುರ್ವರ್ತನದ ವರ್ಣನೆಯನ್ನು ಮಾಡಬೇಕಾದರೆ ಮೈಮೇಲೆ ರೋಮಾಂಚಗಳೇಳುತ್ತವೆ. ಎಲ್ಲಿ ಹೋದಲ್ಲಿಯೂ ಈ ಜನರು ಇದ್ದೇ ಇರುವರು. ಇವರು ತಮ್ಮ ಆಯುಷ್ಯವನ್ನು ಬಹಳ ನೀಚತನದ ವರ್ತನದಿಂದ ಕಳೆಯುವರು. ಮಾನಮರ್ಯಾದೆಗಳಂತೂ ಗೊತ್ತೇ ಇರುವದಿಲ್ಲ. ಈ ನೀಚರಲ್ಲಿರುವ ಸದ್ಗುಣಗಳು ಯಾವವೆಂದರೆ ಪರನಿಂದೆ, ಕಪಟತನ, ಡಾಂಭಿಕತನ, ದುರಭಿಮಾನ, ಸೊಕ್ಕು ಇವೇ ಮೊದಲಾದ ದುರ್ಗುಣಗಳು ತುಂಬಿಕೊಂಡಿರುತ್ತವೆ.

ಇವರ ನಿತ್ಯದ ಉದ್ಯೋಗವೇನಂದರೆ, ಮನೆಯ ಕೂಳನ್ನು ತಿಂದು ಊರಲ್ಲಿರುವ ಕಟ್ಟೆ ಕಟ್ಟೆಗಳ ಮೇಲೆ ಕೂತು ಒಂದೇ ಸವನೆ ಜನರ ನಿಂದೆಯನ್ನು ಮಾಡೋಣ. ಕೇರಿಯಲ್ಲಿ ನೀರಿಗೆ ಹೋಗಿ ಬರುವ ಸ್ತ್ರೀಯರ ಮೋರೆಯನ್ನು ಟಕಮಕನೆ ನೋಡೋಣ ಮತ್ತು ಮರ್ಕಟಗಳಂತೆ ಹಲ್ಲನ್ನು ತೆಗೆಯೋಣ ಹಿಟ್ಟು ಬೂದಿಯನ್ನು ಸರಿಮಾಡಿದಂತೆ ಸಾರಾಸಾರ ವಿಚಾರ ಮಾಡದೆ ಸಿಕ್ಕವರಿಗೆ ಸಿಕ್ಕ ಸಿಕ್ಕ ಹಾಗೆ ಹೆಸರಿಡೋಣ ಬಂಧು ಭಗಿನಿಯರನ್ನು ಸಹ ಅರಿಯದೆ ಇರೋಣ, ತಮ್ಮಲ್ಲಿ ಅಸಂಖ್ಯ ತಪ್ಪಗಳಿದ್ದು ಎರಡನೇಯವರ ತಪ್ಪನ್ನು ತೆಗೆಯೋಣ, ಪರರ ಕಲ್ಯಾಣವಾದರೆ ತಮ್ಮ ಮನೆಯವರು ಮರಣ ಹೊಂದಿದ ಹಾಗೆ ದುಃಖಪಡೋಣ ಮತ್ತು ಅವರ ನಾಶವಾದರೆ ಆನಂದಪಡೋಣ, ಎರಡನೇಯವರಿಗೆ ತಮ್ಮ ಕೈಯಿಂದಾದಷ್ಟು ಸಹಾಯ ಮಾಡುವದಂತೂ ಒತ್ತಟ್ಟಿಗೇ ಇರಲಿ. ಆದರೆ ಅವರು ಕೈಕೊಂಡಿರುವ ಕಾರ್ಯಕ್ಕೆ ನಾನಾತರದ ವಿಘ್ನಗಳನ್ನು ತಂದು ಆ ಕಾರ್ಯವನ್ನು ಸಂಪೂ

ರ್ಣ ನಾಶವಮಾಡಲಿಕ್ಕೆ ಯತ್ನಿಸೋಣ. ಕ್ಷುಲ್ಲಕ ಹಣದಾಶೆಗಾಗಿ ಖೊಟ್ಟಿ ಸಾಕ್ಷಿಯನ್ನು ಹೇಳೋಣ ಖೊಟ್ಟಿ ಕಾಗದಪತ್ರಗಳನ್ನು ಬರೆಯೋಣ, ಪಶುಪಕ್ಷಿ ದನಕರುಗಳಿಗೆ ಸಹ ಹೆಸರಿಡೋಣ ಇವೇ ಮೊದಲಾದ ದುರ್ಗುಣಗಳು ಈ ನರಾಧಮರಲ್ಲಿ ತುಂಬಿಕೊಂಡಿರುತ್ತವೆ. ಈ ನೀಚರ ಹಾವಳಿಯು ಕಡಿಮೆಯಾಗದ ಹೊರತು ಸಮಾಜವು ಸುಧಾರಿಸಲಾರದು. ಯಾವ ಯಾವ ಗೃಹಗಳ ಮುಂದೆ ವಿಶ್ರಾಂತಿಗಾಗಿ ಕಟ್ಟೆಗಳನ್ನು, ಹಿರಿಯರು ಕಟ್ಟಿಸಿರುವರೋ ಆ ಆ ಮನೆಯ ಮಾಲಕರು ತಮ್ಮ ತಮ್ಮ ಕಟ್ಟೆಗಳ ಮೇಲೆ ಈ ಮಹ ನೀಯರನ್ನು ಕೂಡ್ರಿಸಗೊಡಬಾರದು. ಇವರಿಗೆ ಯಾವ ತರದ ದಯೆಯನ್ನು ತೋರಿಸಬಾರದು ಮತ್ತು ಯಾವ ತರದ ಸಹಾಯ ವನ್ನು ಮಾಡಬಾರದು. ಇವರು ಅತೀಶಯ ನೀಚತನದ ಶಿಖರಕ್ಕೆ ಹೋಗಿ ತಲ್ಪಿರುವರು. ಎಲ್ಲಿ ತಿನ್ನುವರೋ ಅದೇ ಸ್ಥಳದ ಮೇಲೆ ಶೌಚಕ್ಕೆ ಕೂತು ಹೋಗುವರು. ಇವರ ನಿರ್ಲಜ್ಜತನದ ವರ್ಣನೆ ಯನ್ನು ಎಷ್ಟು ಮಾಡಿದರೂ ತೀರದು ಆದ್ದರಿಂದ ವಾಚಕರೇ ಇವರ ನೆರಳಿಗೆ ಸಹ ಹೋಗಬೇಡಿರಿ. ಇವರ ಸಂಗವು ಪ್ಲೇಗ ಕ್ಕಿಂತಲೂ ಭಯಂಕರವಾದದ್ದು ಇವರು ಯಾವಾಗಲೂ ತಮ್ಮ ಸೊಕ್ಕಿನಲ್ಲಿಯೇ ಸಾಯುವರು ಪಾಪಪುಣ್ಯಗಳ ವಿಚಾರವನ್ನು ಎಂದೂ ಮಾಡಲಾರರು. ತಂದೆ ತಾಯಿ ಬಂಧು ಬಳಗದವರನ್ನು ಸಹ ಲೆಕ್ಕಿಸಲಾರರು. ಅಂದ ಬಳಿಕ ಇವರಿಗೆ ಪರರ ಪಾಡೇನು? ಆದ್ದರಿಂದ ಇವರ ಗೋಜಿಗೆ ಹೋಗಬೇಡಿರಿ ಇವರಿಗೆ ಬೇಕಾ ದಷ್ಟು ಸಂಕಟಗಳು ಬಂದಾಗ್ಯೂ ಸಹಾಯ ಮಾಡಬೇಡಿರಿ. ಯಾಕಂದರೆ ಹಾವಿಗೆ ಹಾಲು ಕುಡಿಸಿದಂತೆ ಆಗುವದು. ಇವರಿಗೆ ಸಂಕಟಕಾಲದಲ್ಲಿ ಸಹಾಯ ಮಾಡದೆ ಇದ್ದ ಪಕ್ಷದಲ್ಲಿಯೇ ನಿಮಗೆ ಪುಣ್ಯವು ಲಭಿಸುವದು. ಹೀಗೆ ಮಾಡಿದರೆ ಪರಮೇಶ್ವರನು ನಿಮ್ಮ ಮೇಲೆ ಎಳ್ಳಷ್ಟಾದರೂ ಕೋಪಗೊಳ್ಳುವದಿಲ್ಲ ಆದ್ದರಿಂದ ನಾವು

ಅವರ ದುರ್ವರ್ತನದ ಕಡೆಗೆ ಲಕ್ಷಕೊಡದೆ ದುರ್ಗುಣಗಳಿಗೆ ಆಶ್ರಯ ಕೊಡದೆ ನಾವು ನಮ್ಮ ಯೋಗ್ಯವಾದ ಕರ್ತವ್ಯಗಳನ್ನು ಕೊನೆಗಾಣಿಸುತ್ತ ದೇವರ ಪ್ರೀತಿಗೂ, ಸಜ್ಜನರ ಪ್ರೀತಿಗೂ ಪಾತ್ರರಾಗಿ ಸತ್ಕೀರ್ತಿಯನ್ನು ಸಂಪಾದಿಸತಕ್ಕದ್ದು.

---

## ವಿದ್ಯಾರ್ಥಿಗಳು ನೆನಪಿನಲ್ಲಿಡತಕ್ಕ ಸಂಗತಿಗಳು.

ಅಭ್ಯಾಸ ಮಾಡುವ ಕೋಣೆಯಲ್ಲಿ ನಿರ್ಮಲವಾಗಿ ಪ್ರಭಾಕರನ ಪ್ರಕಾಶವು ಬೀಳುವಂತೆ ವ್ಯವಸ್ಥೆಯನ್ನಿಡಬೇಕು. ಶಕ್ಯವಿದ್ದಲ್ಲಿ ಒಂದು ಗಡಿಯಾರವನ್ನಾದರೂ ಇಡಬೇಕು. ತಮಗೆ ಶಕ್ಯವಾಗುವಂತೆ ಅಭ್ಯಾಸ ಒಂದು ಖಾಸಗೀ ವೇಳಾಪತ್ರಿಕೆಯನ್ನು ತಯಾರಿಸಿ ಅದರಂತೆ ತಪ್ಪದೆ ವರ್ತಿಸಬೇಕು. ಕೋಣೆಯ ತುಂಬ ದೊಡ್ಡ ದೊಡ್ಡ ವಿದ್ವಾನರ ಚಿತ್ರಗಳನ್ನು ಪ್ರತಿನಿತ್ಯದಲ್ಲಿಯೂ ತಮಗೆ ಸ್ವಾಭಾವಿಕವಾಗಿ ದೃಷ್ಟಿಗೆ ಬೀಳುವಹಾಗೆ ಗೋಡೆಗೆ ಹಚ್ಚಬೇಕು. ಅಭ್ಯಾಸವನ್ನು ಮಾಡಲಿಕ್ಕೆ ಬೆಳಗಿನ ೪ ಘಂಟೆಯೇ ಲೇಸಾದದ್ದು ಯಾಕಂದರೆ ಆ ವೇಳೆಗೆ ಮಾಡಿದ ಅಭ್ಯಾಸವು ಸ್ಥಿರವಾಗಿ ನಿಲ್ಲುವದು. ಗುರುಗಳೆಂದರೆ ತಮ್ಮ ತಾಯಿ ತಂದೆಗಳೆಂದೇ ತಿಳಿಯತಕ್ಕದ್ದು.

ಅವರ ಮಾತನ್ನು ಎಂದೂ ಮೀರಬಾರದು ಮತ್ತು ಅವರ ಕೂಡ ವಿನಾಕಾರಣ ವಾದಿಸಬಾರದು, ಅವರನ್ನು ಮೋಸಗೊಳಿಸಲಿಕ್ಕೆ ಹೋಗಬಾರದು. ಗೆಳೆಯರಸಂಗಡ ಬಂಧು ಭಾವದಿಂದ

ವರ್ತಿಸತಕ್ಕದ್ದು ಅವರಿಗೆ ವನಸ್ಸಿಗೆ ಹತ್ತುವಹಾಗೆ ಮಾತಾಡಬಾರದು. ಮತ್ತು ಯಾವಾಗಲೂ ತನ್ನ ಸ್ತುತಿಯನ್ನು ತಾನೇ ಮಾಡಿಕೊಳ್ಳಬಾರದುಮಾಡುವ ಅಭ್ಯಾಸವನ್ನು ಚನ್ನಾಗಿ ಲಕ್ಷಗೊಟ್ಟು ಮಾಡಬೇಕು. ಬೀಡಿ, ಸಿಗಾರೇಟ ಮುಂತಾದ ವ್ಯಸನಗಳಿಗೆ ಒಳಗಾಗಬಾರದು. ಈ ದುರ್ವ್ಯಸನಗಳಿದ್ದವರಿಗೆ ವಿದ್ಯಾದೇವತೆಯು ಎಂದೂ ಒಲಿಯಲಾರಳು. ಉಡುಪು ಸಾದಾ ಇದ್ದು ಸ್ವಚ್ಛವಿರಬೇಕು. ವಿನಾಕಾರಣ ಡೌಲಿಗೆ ಬೀಳಬಾರದು. ಉಡಾಳ ಹುಡುಗರ ಸಂಗತಿಯನ್ನು ಎಂದೂ ಹಿಡಿಯಬಾರದು ಪರಸ್ತ್ರೀಯರನ್ನು ನಿಮ್ಮ ಸ್ವಂತ ಭಗಿನಿಯರಂತೆ ತಿಳಿಯತಕ್ಕದ್ದು ಇದರಲ್ಲಿಯೇ ನಿಮ್ಮ ಅಖಂಡ ಕಲ್ಯಾಣವದೆ.

ಪ್ರತಿನಿತ್ಯದಲ್ಲಿಯೂ ಪ್ರಭಾಕರನಿಗೆ ಸಾಷ್ಟಾಂಗ ಪ್ರಣಿಪಾತವನ್ನು ತಪ್ಪದೇ ಹಾಕತಕ್ಕದ್ದು. ಮೆಲೆ ಹೇಳಿದ ನಿಯಮಗಳಂತೆ ನೀವು ತಪ್ಪದೇ ವರ್ತಿಸಿದರೆ, ವಿದ್ಯಾದೇವತೆಯು ತಾಯಿಯು ಮಕ್ಕಳನ್ನು ಆಡಿಸುವಂತೆ ನಿಮ್ಮನ್ನು ಪ್ರೀತಿಯಿಂದ ಆಡಿಸುವಳು. ಈ ಪ್ರಕಾರವಾಗಿ ನಿಮ್ಮ ಮೇಲೆ ಶ್ರೀ ಶಾರದಾ ಮಾತೆಯ ಕೃಪೆಯಾಗಲು ನೀವು ಯಾವಾಗಲೂ ಯಶೋಮಂದಿರದಲ್ಲಿ ವಾಸ ಮಾಡುವಿರಿ ಇದರಲ್ಲಿ ಏನೂ ಸಂಶಯವಿಲ್ಲ.

# ಪರದೇಶಿಯಾದ ಪುರುಷೋತ್ತಮ

## ೧ ನೇ ಪ್ರಕರಣ.

ಕಲ್ಯಾಣಪುರವೆಂಬ ೩-೪ ಸಾವಿರ ಜನವಸತಿಯುಳ್ಳ ಒಂದು ಹಳ್ಳಿಯಿತ್ತು. ಆ ಹಳ್ಳಿಯಲ್ಲಿ ಪ್ರಭಾಕರ ಪಂತನೆಂಬ ಒಬ್ಬ ದೊಡ್ಡ ಸಾವುಕಾರನಿದ್ದನು. ಅವನಿಗೆ ಸುಶೀಲೆಯಾದ ಸರಸ್ವತಿಯೆಂಬ ಪತ್ನಿಯಿದ್ದಳು. ಇವರಿಬ್ಬರೂ ತಮ್ಮ ಸಂಸಾರವನ್ನು ಒಳ್ಳೇರೀತಿಯಿಂದ ಸಾಗಿಸಿದ್ದರು. ಈ ದಂಪತಿಗಳಿಗೆ ಪ್ರಪಂಚದಲ್ಲಿ ಎಲ್ಲತರದ ಅನುಕೂಲತೆಗಳು ಇದ್ದರೂ ಕೂಡಾ ಪರಮೇಶ್ವರನು ಒಂದು ಕೊರತೆಯನ್ನು ಇಟ್ಟೇ ಇದ್ದನು. ಆ ಕೊರತೆಯು ಯಾವದೆಂದರೆ ಅಪತ್ಯವೇ ಇದ್ದಿದಿಲ್ಲ. ಆದ್ದರಿಂದ ಅವರು ಯಾವಾಗಲೂ ಚಿಂತಾಮಗ್ನರಾಗಿರುತ್ತಿದ್ದರು. ಹೀಗೆಯೇ ಎಷ್ಟೋ ವರ್ಷಗಳನ್ನು ಚಿಂತೆಯಲ್ಲಿ ಕಳೆಯುತ್ತಿರುವಾಗ ಮುಪ್ಪಿನ ಸಮಯಕ್ಕೆ ಈ ದಂಪತಿಗಳಿಗೆ ಒಂದು ಗಂಡ ಮಗುವು ಹುಟ್ಟಿತು "ಮನಸ್ಸಿನಲ್ಲಿ ಇಚ್ಛಿಸಿದ ಕಾರ್ಯವು ಕೈಗೂಡಿದಬಳಿಕ ಯಾವ ಮನುಷ್ಯನಿಗೆ ಆನಂದವಾಗಲಿಕ್ಕಿಲ್ಲ!" ಈ ದಂಪತಿಗಳಂತೂ ಸಂತೋಷಸಾಗರದಲ್ಲಿ ಈಸಾಡ ಹತ್ತಿದರು. ಮುಂದೆ ಈ ಸುಂದರನಾದ ಬಾಲಕನಿಗೆ ಪುರುಷೋತ್ತಮನೆಂಬ ಅಂದವಾದ ಹೆಸರನ್ನಿಟ್ಟರು ಪುರುಷೋತ್ತಮನು ಬಿದಿಗೆಯ ಚಂದ್ರನಂತೆ ದಿನೇ ದಿನೇ ಬೆಳೆಯ ಹತ್ತಿದನು. ಇವನ ತಂದೆ ತಾಯಿಗಳು ಮುಪ್ಪಿನ ಸಮಯಕ್ಕೆ ಒಬ್ಬನೇ ಸುಂದರನಾದ ಪುತ್ರನು ಜನಿಸಿದ್ದರಿಂದ, ಆತನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಒಂದು ಅರಘಳಿಗೆಯಾದರೂ

ಕೂಡಾ ತಮ್ಮ ಹತ್ತರಾ ಆ ಕೋಮಲನಾದ ಬಾಲಕನು ಇರ ದಿದ್ದರೆ ಅವರಿಗೆ ಚೈನವೇ ಬೀಳುತ್ತಿದ್ದಿಲ್ಲ. ಹೀಗೆ ಈ ದಂಪತಿ ಗಳು ನಾಲ್ಕಾರು ವರ್ಷ ಸುಖದಿಂದ ಕಾಲಕಳೆಯುತ್ತಿರಲು ಪ್ರಭಾಕರ ಪಂತರು ಅಕಸ್ಮಾತ್ತಾಗಿ ಮರಣ ಹೊಂದಿದರು. “ ಅಯ್ಯೋ ಇದು ಎಂಥ ಕಠಿಣ ಪ್ರಸಂಗವು ಸರಸ್ವತೀಬಾಯಿ ಯವರ ಮೇಲೆ ಆಕಾಶ ಕೊಡ್ಲಿಯೇ ಬಿದ್ದಂತಾಯಿತು. ಪಂತರು ಮರಣ ಹೊಂದುವ ವೇಳೆಗೆ ತೀರ ಮುಪ್ಪಿನವರಾಗಿದ್ದಿಲ್ಲ. ಇತ್ತ ಪುರುಷೋತ್ತಮನು ಪರದೇಶಿಯಾದನು. ತಂದೆಯು ತೀರಿದಾಗ ಇವನು ೭ ವರ್ಷದವನಿದ್ದನು. ಇನ್ನೂ ಇವನನ್ನು ಶಾಲೆಗೆ ಹಾಕಿ ದ್ದಿಲ್ಲ. ತಂದೆಯು ಮನೆಯಲ್ಲಿಯೇ ತುಸು ಓದು ಬರಹವನ್ನು ಕಲಿ ಸುತ್ತಿದ್ದನು. ಇನ್ನು ಕೆಲವು ತಿಂಗಳುಗಳಲ್ಲಿಯೇ ಅವನನ್ನು ಶಾಲೆಗೆ ಹಾಕತಕ್ಕವರು. ಆದರೆ ಅಷ್ಟರಲ್ಲಿ ಮರಣ ಹೊಂದಿದರು. ಸರಸ್ವತಿಬಾಯಿಯವರು ಪುತ್ರನನ್ನು ನೋಡಿದಾಕ್ಷಣವೇ ಪತಿಯ ನೆನಪನ್ನು ತೆಗೆದು ಎದೆ ಎದೆ ಬಡಕೊಂಡು ಒಂದೇ ಸವನೆ ಅಳು ತ್ತಿದ್ದರು. ಇದನ್ನು ಆ ೭ ವರ್ಷದ ಎಳೆಬಾಲಕನು ನೋಡಿ ತಾನೂ ಕಣ್ಣೀರು ಸುರಿಸಿ “ ಅವ್ವಾ ಯಾಕೆ ಒಂದೇ ಸನೆ ಅಳುವಿರಿ ತಂದೆಯು ಸಾವನೇ ನಾನು ಬೇಲಿ ಬಂದಿಲ್ಲ. ನಮ್ಮ ನಶಿಬವೇ ಕೊಟ್ಟಯಿರುತ್ತದೆ. ಈಗ ಸಂಕಲಪಕ್ಕೆ ಉಪವಿಲ್ಲ. ಅಲದಿಂದ ನೀವು ತಾಪವನ್ನು ಮಾಲಿ ಕೊಳ್ಳಬೇಡಿ ” ಅಂತಾ ತಾಯಿಗೆ ಆ ೭ ವರ್ಷದ ಎಳೆಕಂದನು ಸಮಾಧಾನವನ್ನು ಹೇಳುತ್ತಿದ್ದನು.

ವಾಚಕರೇ ಈ ಎಳೆಬಾಲಕನ ಬುದ್ಧಿಯನ್ನು ನೋಡಿದಿರಾ! ದೊಡ್ಡವರು ಮಾತಾಡಿದ ಹಾಗೆ ಮಾತಾಡುತ್ತಾನೆ. ಅಂದ ಬಳಿಕ ಈ ಸುಕುಮಾರನು ಮುಂದೆ ಒಳ್ಳೇ ಜಾಣನಾಗಿ ದೊಡ್ಡ ಪದವಿಗೇ ರುವನೆಂಬದಕ್ಕೆ ಏನೂ ಸಂದೇಹವಿಲ್ಲ.

ಮುಂದೆ ಈತನನ್ನೂ ಈತನ ತಾಯಿಯನ್ನೂ ಪ್ರಭಾಕರ ಶಂಕರ ಬೀಗನಾದ ಅರವಿಂದರಾಯನು ತನ್ನ ಊರಿಗೆ ಕರೆದುಕೊಂಡು ಹೋದನು. ಇವನ ಊರುವು ದೊಡ್ಡ ಶಹರವಿತ್ತು. ಅಲ್ಲಿಯೇ ಅರವಿಂದರಾಯನು ಅವನನ್ನು ಶಾಲೆಗೆ ಹಾಕಿದನು. ಶಾಲೆಯಲ್ಲಿ ಎಲ್ಲ ಹುಡುಗರಿಗಿಂತಲೂ ಜಾಣನೆಂದು ಎಣಿಸಲ್ಪಡುತ್ತಿದ್ದನು. ಗುರುಗಳ ಮಾತನ್ನು ಎಂದೂ ಮೀರುತ್ತಿದ್ದಿಲ್ಲ. ಹೇಳಿದ ಅಭ್ಯಾಸವನ್ನು ವೇಳೆಗೆ ಸರಿಯಾಗಿ ಮಾಡುತ್ತಿದ್ದನು. ಅವನ ಶಿಕ್ಷಣವು ಮುಗಿಯುವ ವರೆಗೆ ಒಂದು ವರ್ಷಸಹ ನಾಪಾಸವಾಗಲಿಲ್ಲ. ಗೆಳೆಯರ ಕೂಡಾ ಪ್ರೇಮದಿಂದ ವರ್ತಿಸುತ್ತಿದ್ದನು. ಇವನು ವಯಸ್ಸಿನ ೧೫ ನೇ ವರ್ಷಕ್ಕೆ ಮುಲ್ಕೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಮೊದಲನೇ ನಂಬರವನ್ನು ದೊರಕಿಸಿದನು. ಅಲ್ಲಿಯೇ ಹಾಯಸ್ಕೂಲವೂ ಇತ್ತು. ಇನ್ನು ಮುಂದೆ ಇಂಗ್ಲೀಷ ಕಲಿಯಬೇಕೋ ಅಥವಾ ಇಷ್ಟಕ್ಕೆ ಬಿಡಬೇಕೋ ಎಂಬ ವಿಚಾರದಲ್ಲಿದ್ದನು. ತಾಯಿಯ ಮನಸ್ಸಿನಲ್ಲಿ ಇಂಗ್ಲಿಷವನ್ನು ಕಲಿಸುವದು ಇದ್ದಿದ್ದಿಲ್ಲ. ಇಂಗ್ಲೀಷವನ್ನು ತಗೊಂಡು ಏನು ಮಾಡುವದು ನನ್ನ ಮಗನು ಹೊಲಮನೆಯನ್ನು ನೋಡಿಕೊಂಡು ಇದ್ದರೆ ಸಾಕು ಎಂದು ಅನ್ನುತ್ತಿದ್ದಳು. ಆದರೆ ಸೋದರಮಾವನ ಮನಸ್ಸಿನಲ್ಲಿಯೂ ಮತ್ತು ಅವನ ಶಿಕ್ಷಕನ ಮನಸ್ಸಿನಲ್ಲಿಯೂ ಇಂಗ್ಲೀಷ ಶಾಲೆಗೆ ಹಾಕುವದಿತ್ತು. ಅದಕ್ಕೆ ಅವರು ಪುರುಷೋತ್ತಮನ ತಾಯಿಗೆ "ಅವ್ವಾ ಇವನನ್ನು ಇಂಗ್ಲೀಷ ಶಾಲೆಗೆ ಹಾಕಿರಿ. ಯಾಕಂದರೆ ನಿಮ್ಮ ಮಗನ ಜಾಣತನದ ಮತ್ತು ಚುರುಕು ಬುದ್ಧಿಯ ವರ್ಣನೆಯನ್ನು ಎಷ್ಟು ಮಾಡಿದರೂ ತೀರದು. ಇವನು ಮುಂದೆ ದೊಡ್ಡ ಅಮಲದಾರನಾಗುವನೆಂಬದಕ್ಕೆ ಏನೂ ಸಂಶಯವಿಲ್ಲ. ಆದ್ದರಿಂದ ಇವನಿಗೆ ಇಂಗ್ಲೀಷವನ್ನು ಕಲಿಸದೆ ಬಿಡಬೇಡಿರಿ. ಎಂದು ಅವನ ತಾಯಿಗೆ ಪರಿಪರಿಯಿಂದ ಹೇಳಿದರು.

ಆ ಮೇಲೆ ಸರಸ್ವತಿಬಾಯಿಗೂ "ಏನೋ ಶಿಕ್ಷಕರು ಬಹಳೇ ಹೇಳುತ್ತಾರೆ. ಅಂದಬಳಿಕ ಅವನನ್ನು ಇಂಗ್ಲೀಷ ಶಾಲೆಗೆ ಹಾಕಿಬಿಟ್ಟರಾಯಿತು. ಎಂದು ನಿಶ್ಚಯಿಸಿ ಅವನನ್ನು ಇಂಗ್ಲಿಷ ಶಾಲೆಗೆ ಹಾಕಿದಳು. "ರತ್ನವನ್ನು ಎಲ್ಲಿ ಒಯ್ದು ಇಟ್ಟರೇನಾಯಿತು ಅದು ತನ್ನ ತೇಜವನ್ನು ಪಸರಿಸಿಯೇ ತೀರುವದು" ಅವರಂತೆ ಪುರುಷೋತ್ತಮನು ಮುಂದೆ ಐದು ವರ್ಷಗಳಲ್ಲಿ ಮ್ಯಾಟ್ರಿಕ್ಯುಲೇಶನ ಪರಿಕ್ಷೆಯಲ್ಲಿ ಉತ್ತೀರ್ಣ ಹೊಂದಿದನು ಆಗ ಇವನ ವಯಸ್ಸು ೨೦ ನೇ ವರ್ಷವು ಮುಗಿದು ೨೧ ನೇ ವರ್ಷವು ಆರಂಭವಾಗಿತ್ತು. ಮುಂದೆ ಅವನು ಕಾಲೇಜಿಗೂ ಹೋದನು ಕಾಲೇಜದೊಳಗೆ ೩ ವರ್ಷಗಳು ಹೋಗುವದರೊಳಗಾಗಿಯೇ ಬಿ ಎ ಪರೀಕ್ಷೆಯಲ್ಲಿ ಪಾಸಾಗಿ ಮೊದಲನೇ ನಂಬರವನ್ನು ದೊರಕಿಸಿದನು. ಇವನ ಜಾಣತನವನ್ನು ನೋಡಿ ಇವನಿಗೆ ಸರಕಾರದವರು ಧೈರ್ಯಪುರವೆಂಬಲ್ಲಿ ಶಿರಸ್ತೇದಾರನನ್ನಾಗಿ ನೇಮಿಸಿದರು ಧೈರ್ಯಪುರವು ತಾಲೂಕಿನ ಸ್ಥಳವಾಗಿತ್ತು. ಮುಂದೆ ಕೆಲವು ತಿಂಗಳುಗಳಲ್ಲಿಯೇ ಈತನು ಉತ್ತಮ ರೀತಿಯಿಂದ ಮಾಡುವ ಕೆಲಸವನ್ನು ಕಂಡು, ಇವನನ್ನು ಮಾಮಲೇದಾರನನ್ನಾಗಿ ನೇಮಿಸಬೇಕೆಂದು ಮೇಲಿನಿಂದ ಬರೆದು ಬಂತು. ಅದೇ ಪ್ರಕಾರವಾಗಿ ಅವನು ಅಲ್ಲಿಯೇ ಮಾಮಲೇದಾರನಾದನು. ಈ ವೇಳೆಗೆ ಅವನು ಕೇವಲ ೨೫ ವರ್ಷದ ತರುಣನಾಗಿದ್ದನು. ಇನ್ನೂ ವಿವಾಹವನ್ನು ಮಾಡಿಕೊಂಡಿದ್ದಿಲ್ಲ. ಯಾಕಂದರೆ ಪೂರ್ಣ ಶಿಕ್ಷಣವು ಮುಗಿದ ಹೊರತು ವಿವಾಹವನ್ನು ಮಾಡಿ ಮಾಡಿಕೊಳ್ಳುವದಿಲ್ಲೆಂದು ಪ್ರತಿಜ್ಞೆ ಮಾಡಿದ್ದನು. ಎಲೈ ಪ್ರಿಯವಾಚಕರೇ ಪರದೇಶಿಯಾದ ಪುರುಷೋತ್ತಮನು ದೊಡ್ಡ ಪದವಿಗೇರಿ ಮಾಮಲೇದಾರನಾದದ್ದನ್ನು ನೋಡಿ ಅವನ ತಾಯಿಗೆ ಎಷ್ಟು ಆನಂದವಾಗಿದ್ದೀತು. ಸರಸ್ವತೀ ಬಾಯಿಯು ಮಗನನ್ನು ಇಂಗ್ಲೀಷ ಶಾಲೆಗೆ ಹಾಕದೆ ಬಿಡಬೇಡಿರೆಂದು ಹೇಳಿದ ಕನ್ನಡ

ಶಾಲೆಯ ಶಿಕ್ಷಕನನ್ನು ಹಾಡಿಹರಿಸಹತ್ತಿದಳು. ಒಮ್ಮೆಯಾದರೂ ಅವನನ್ನು ಮನೆಗೆ ಕರೆದುಕೊಂಡು ಬರಬೇಕೆಂದು ಅವಳ ಮನಸ್ಸಿನಲ್ಲಿ ಬಂತು. ಆದರೆ ಆ ಶಿಕ್ಷಕನಿಗೆ ಪೇನಶನ್ ಆಗಿ ಅವನು ತನ್ನ ಊರಿಗೆ ಹೋಗಿ ಬಹಳ ದಿವಸಗಳಾಗಿದ್ದವು. ಇವನು ಇರುವ ಊರಿಗೂ ಆ ಶಿಕ್ಷಕನ ಊರಿಗೂ ಬಹಳ ದೂರವಿತ್ತು. ಆದರೂ ಕೂಡಾ ಅವನನ್ನು ಒಮ್ಮೆಯಾದರೂ ಕರೆಕಳಿಸಿ ಕೆಲವು ದಿವಸಗಳ ವರೆಗೆ ತನ್ನ ಮನೆಯಲ್ಲಿ ಇಟ್ಟುಕೊಳ್ಳಬೇಕೆಂಬ ಲವಲವಿಕೆಯು ಬಹಳವಿದ್ದಕಾರಣ ಮಗನಿಗೆಃ— "ಬಾಳಾ ಪುರುಷೋತ್ತಮಾ ನಿನಗೆ ಉತ್ತಮ ಮಾರ್ಗವನ್ನು ತೋರಿಸಿಕೊಟ್ಟ ಆ ನಿನ್ನ ಹಳೇ ಶಿಕ್ಷಕರನ್ನು ಒಮ್ಮೆಯಾದರೂ ಮನೆಗೆ ಕರೆದುಕೊಂಡು ಬಾ" ಅಂತಾ ಹೇಳಿದಳು. ಅದಕ್ಕೆ ಅವನು ತಾಯೀ ಯಾಕಾಗವಲ್ಲದು ಕರೆಕಳಿಸುತ್ತೇನೆ. ನೀವು ಏನೂ ಕಾಳಜೀ ಮಾಡಬೇಡಿರಿ ಅಂತಾ ಹೇಳಿದನು.

---

## ೨ ನೇ ಪ್ರಕರಣ.

ಮುಂದೆ ಕೆಲವು ದಿವಸಗಳಲ್ಲಿಯೇ ದೊಡ್ಡ ದೊಡ್ಡ ಸಾವುಕಾರರು ವಕೀಲರು ಅಮಲದಾರರು ಅವನಿಗೆ ತಮ್ಮ ಕನ್ಯೆಯನ್ನು ಕೊಡುವದರ ಸಲುವಾಗಿ, ಒಂದೇ ಸವನೆ ಎಡತಾಕ ಹತ್ತಿದರು. ಎಡತಾಕುವದರಲ್ಲಿ ಏನು ಆಶ್ಚರ್ಯವು! ಇವನು ಆಗರ್ಭ ಶ್ರೀಮಂತನು. ಮೇಲಾಗಿ ದೊಡ್ಡ ಅಧಿಕಾರಿಯು. ಇವನ ರೂಪವಂತೂ ಮದನನ ಹಾಗೆ ಅಪರೂಪವಾಗಿತ್ತು. ಶರೀರ ಸಂಪತ್ತಿಯು ವಜ್ರದ

ಹಾಗೆ ಇತ್ತು. ಇವನಲ್ಲಿ ಯಾವ ಕೊರತೆಯನ್ನು ತೆಗೆಯಲಿಕ್ಕೆ ಮಾರ್ಗವೇ ಇದ್ದಿದ್ದಿಲ್ಲ. ಈ ದೊಡ್ಡ ದೊಡ್ಡ ಸಾವುಕಾರರ, ವಕೀಲರ, ಅಮಲದಾರರ, ಹೆಣ್ಣುಗಳು ಇವನ ಮನಸ್ಸಿಗೆ ಬರಲಿಲ್ಲ. ಆದರೆ ಒಂದು ದಿವಸ ಒಬ್ಬ ತೀರ ಬಡಬ್ರಾಹ್ಮಣನು ದೇಶಾವರಿಗೆಂದು ಮನೆ ಮನೆ ತಿರಗುತ್ತ ಈ ಮಾಮಲೇದಾರನ ಮನೆಗೆ ಬಂದನು. ಇಲ್ಲಿ ಇವನಿಗೆ ಯೋಗ್ಯ ದೇಶಾವರಿಯು ದೊರೆಯಿತು. ಪುರುಷೋತ್ತಮನೂ, ಈ ಬ್ರಾಹ್ಮಣನೂ ಊಟಕ್ಕೆ ಕುಳಿತಾಗ ಬ್ರಾಹ್ಮಣನು ತನ್ನ ವೃತ್ತಾಂತವನ್ನು ಹೇಳಿದನು. ಇದನ್ನು ಕೇಳಿ ಆ ದಯಾಳುವಾದ, ಪುರುಷೋತ್ತಮನ ಕಣ್ಣಿನೊಳಗಿಂದ, ದುಃಖಾಶ್ರುಗಳು ಒಂದೇ ಸವನೆ ಸುರಿಯಹತ್ತಿದವು. ಈ ಬ್ರಾಹ್ಮಣನು ಹಿಂದಕ್ಕೆ ಒಂದು ದೊಡ್ಡ ಊರಿನ ಶಾನುಭೋಗನಿದ್ದನು. ಮನೆಯಿಂದ ಶ್ರೀಮಂತನಿದ್ದನು. ಆದರೆ "ತಿಪ್ಪೆಯಿದ್ದದ್ದು ಉಪ್ಪರಿಗೆಯಾಗುತ್ತದೆ. ಉಪ್ಪರಿಗೆಯಿದ್ದದ್ದು ತಿಪ್ಪೆಯಾಗುತ್ತದೆ" ಎಂಬ ನ್ಯಾಯದಂತೆ, ಕೆಟ್ಟ ವೇಳೆಯು ಪ್ರಾಪ್ತವಾಗಿದ್ದರಿಂದ ಕುಲಕರ್ಣಿಯು ಈ ಸ್ಥಿತಿಗೆ, ಬಂದಿದ್ದನು. ಇವನಿಗೆ ಒಬ್ಬ ಗಂಡು ಮಗುವೂ ಒಬ್ಬ ಹೆಣ್ಣುಮಗಳೂ ಹೀಗೆ ಇಬ್ಬರು ಮಕ್ಕಳಿದ್ದರು. ಹೆಣ್ಣು ಮಗಳು ಉಪವರಳಾಗಿದ್ದಳು. ಆ ಜಾಣ ಬ್ರಾಹ್ಮಣನು ಮಾತಿಗೆ ಮಾತು ತೆಗೆದು "ರಾಯರೇ ಏನು ಮಾಡಲಿ ಈ ದಿವಸಗಳಲ್ಲಿ ಸಂಸಾರವನ್ನು ಸಾಗಿಸುವದೇ ಬಹಳ ಕಷ್ಟವಾಗಿದೆ. ಅದರಲ್ಲಿಯಂತೂ ಮಗಳು ವಿವಾಹಕ್ಕೆ ಯೋಗ್ಯಳಾಗಿದ್ದಾಳೆ. ನಾನು ವರವನ್ನು ಹುಡುಕಿ ಹುಡುಕಿ ಬೇಸತ್ತು ಹೋದೆನು. ಏನು ಮಾಡಲಿ, ತಿಳಿಯಲೊಲ್ಲದು ಅಂತಾ ಅಂದನು. ಇದನ್ನು ಕೇಳಿದ ಕೂಡಲೆ ರಾಯರು "ಕುಲಕರ್ಣಿಯವರೇ ನಿಮ್ಮ ಮಗಳನ್ನು ಕರೆದುಕೊಂಡು ಬರ್ರಿ. ನೋಡೋಣ ಅಂತಾ ಅಂದರು. ಇಷ್ಟು ಶಬ್ದವನ್ನು ಕೇಳಿದಾಕ್ಷಣಾನೇ ಅವನಿಗೆ ಹಿಡಿಸಲಾರದಷ್ಟು ಆನಂದ

ವಾಯಿತು "ಒಳ್ಳೇದು" ಎಂದು ಹೇಳಿ ತನ್ನ ಊರಿಗೆ ಹೊರಟು ಹೋದನು. ಹೋದ ಬಳಿಕ ತುಸು ದಿವಸಗಳಲ್ಲಿಯೇ ತನ್ನ ಮಗಳನ್ನು ಕರಕೊಂಡು ಬಂದನು ಈಕೆಯ ಹೆಸರು ಸೀತೆಯೆಂದಿತ್ತು. ಈಕೆಯು ಕೇವಲ ಸಾಕ್ಷಾತ್ ಸೀತಾದೇವಿಯಂತೆಯೇ ರೂಪವುಳ್ಳವಳಾಗಿದ್ದಳು. ಈಕೆಯನ್ನು ನನಗೆ ಕೊಡುವಿರಾ ಅಂತಾ ರಾಯರು ಕೇಳಲಾಗಿ ಆ ಬ್ರಾಹ್ಮಣನು: "ಮಹನೀಯರೇ ನಿಮ್ಮ ಮಾತನ್ನು ಮೀರುವೆನೇ ಕಲ್ಪವೃಕ್ಷವು ನಿಮ್ಮ ಮೇಲೆ ದಯಮಾಡುತ್ತೇನೆಂದು ಅಂದರೆ, ಯಾರಾದರೂ ಒಲ್ಲೆನ್ನುವರೇ? ಎಂದಿಗೂ ಇಲ್ಲ ಅಂತಾ ಆ ಬ್ರಾಹ್ಮನು ಅಂದನು. ಮುಂದೆ ವಿವಾಹವು ನಿಶ್ಚಯವಾಯಿತು. ಪುರುಷೋತ್ತಮನು ತನ್ನ ಹಳೇ ಶಿಕ್ಷಕನನ್ನು ವಿವಾಹಕ್ಕೆ ಕರೆಕಳುಹಿಸಿದನು. ವಿವಾಹದ ಮುಹೂರ್ತವು ನಿಶ್ಚಯವಾಯಿತು. ಗೆಳೆಯರೂ ಬಂಧುಬಳಗದವರೂ ಎಲ್ಲರೂ ಕೂಡಿದರು. ಮಾಮಲೇದಾರರ ವಿವಾಹವು ಅಂದ ಬಳಿಕ ಕೇಳುವದೇನು! ಅತೀ ಸಮಾರಂಭದಿಂದ ವಿವಾಹದ ಕಾರ್ಯವು ನೆರವೇರಿತು. ವಧೂ ವರರಿಗೆ ಶ್ರೀಹರಿಯು ದೀರ್ಘಾಯುಷ್ಯವನ್ನು ಕೊಡಲೆಂದು ಎಲ್ಲರೂ ಪ್ರಾರ್ಥಿಸಿದರು. ನೋಡಿದಿರಾ "ಸ್ತ್ರೀಯಶ್ಚರಿತ್ರಂ ಪುರುಷಸ್ಯ ಭಾಗ್ಯಂ ದೇವೋನಜಾನಾತಿ ಕುತೋ ಮನುಷ್ಯಃ" ಎಂಬ ನ್ಯಾಯದಂತೆ ಒಬ್ಬ ತೀರ ಬಡಬ್ರಾಹ್ಮನ ಮಗಳು ಈ ಹೊತ್ತು ಒಬ್ಬ ದೊಡ್ಡ ಮಾಮಲೇದಾರನ ಪತ್ನಿಯಾದಳು. ಇತ್ತ ಸರಸ್ವತೀಬಾಯಿಯವರು ಒಂದಾನೊಂದು ದಿವಸ "ಅಯ್ಯೋ ಕೆಟ್ಟದೈವವೇ ಇನ್ನೂ ವರೆಗೆ ನನ್ನ ಪತಿಯು ಇದ್ದಿದ್ದರೆ, ನನ್ನ ಪುತ್ರನ ಉತ್ಕರ್ಷವನ್ನು ಮತ್ತು ಗೌರಿಯಂಥ ಸೊಸೆಯನ್ನು ನೋಡಿ ಎಷ್ಟು ಆನಂದಪಡುತ್ತಿದ್ದನು. ಎಂದು ದುಃಖಾಶ್ರುಗಳನ್ನು ಸುರಿಸಹತ್ತಿದಳು. ಇದನ್ನು ಪುರುಷೋತ್ತಮನು ಪಡಸಾಲೆಯಲ್ಲಿ ತನ್ನ ಕೆಳಗಿನ ಅಮಲದಾರರ ಕೂಡ ಮಾತಾಡುತ್ತ ಕುಳಿತಾಗ

ಕೇಳಿದನು. ಕೇಳಿದಾಕ್ಷಣಕ್ಕೆ ಚಟ್ಟನೆ ಎದ್ದು ಒಳಗೆ ಹೋಗಿ "ತಾಯೀ ಎಷ್ಟು ವ್ಯಸನಪಡುವಿರಿ. ನನಗಂತೂ ನಿಮ್ಮ ಮುಖ ಕಮಲವನ್ನು ನೋಡಿದ ಕೂಡಲೆ ಅತಿಶಯ ದುಃಖವೆನಿಸು ತ್ತದೆ. ತಾಪವನ್ನು ಮಾಡಿಕೊಳ್ಳಬೇಡಿರಿ, ಮರಣವು ದೈವಾಧೀನ ದ ಮಾತು ಎಂದು ಪರಿಪರಿಯಿಂದ ಹೇಳಿ ತಾಯಿಯನ್ನು ಸಮಾ ಧಾನಪಡಿಸಿದನು ಸರಸ್ವತೀಬಾಯಿಯು ಪುರುಷೋತ್ತಮನಿಗೆ ನನ್ನ ಮುದ್ದು ಮಗುವೇ ನಾನು ತೀರಮುಪ್ಪಿನವಳಾಗಿರುತ್ತೇನೆ ಹಿಂದೆ ಹೋದಷ್ಟು ದಿವಸಗಳು ಇನ್ನು ಮುಂದೆ ಹೋಗುವಹಾಗಿಲ್ಲ ನನ್ನ ಕಥೆಯಂತೂ ಮುಗಿದಂತಾಯಿತು. ಅದರಿಂದ ಬಾಳಾ ಪುರುಷೋ ತ್ತಮಾ ನೀನು ನಿನ್ನ ಪತ್ನಿಯು ಉತ್ತಮರೀತಿಯಿಂದ ಸಂಸಾರ ಮಾಡಿರಿ. ಬಂಧುಬಳಗದವರನ್ನು ಪ್ರೀತಿಯಿಂದ ನಡೆಸಿಕೊಳ್ಳಿರಿ, ದೊಡ್ಡ ಅಧಿಕಾರಸಿಕ್ಕಿರುತ್ತದೆಂದು ಗರ್ವದಿಂದ ನಡೆಯಬೇಡಿರಿ ದೇವರನ್ನು ಮರೆಯಬೇಡಿರಿ, ಅತಿಥಿಅಭ್ಯಾಗತರನ್ನು ಮನ್ನಿಸರಿ, ಯಾವಾಗಲೂ ಸತ್ಕರ್ಮವನ್ನು ಮಾಡಿರಿ. ಕೆಟ್ಟ ಜನರ ಸಹವಾಸ ವನ್ನು ಎಂದೂ ಮಾಡಬೇಡರಿ ಎಂದು ನಾನಾತರದಿಂದ ಮಗನಿಗೆ ಉಪದೇಶಮಾಡಿದಳು.

ಪುರುಷೋತ್ತಮನು:—ತಾಯಿಯವರೇ, ನಿಮ್ಮ ಆಜ್ಞೆಯಂ ತೆ ವರ್ತಿಸುವದೇ ನನ್ನ ಆದ್ಯಕರ್ತವ್ಯವಾಗಿರುತ್ತದೆ, ಎಂದು ಅಂದ ನು. ಈಗ ಪುರುಷೋತ್ತಮನ ವಿವಾಹವಾಗಿ ೨ ವರ್ಷಗಳಾಗಿದ್ದವು. ಪತ್ನಿಯು ೫-೬ ತಿಂಗಳು ಬಸುರಾಗಿದ್ದಳು. ಈ ವಾರ್ತೆಯ ನ್ನು ಕೇಳಿ ಆ ಮುಪ್ಪಿನ ಮುದುಕಿಗೆ ಅತ್ಯಾನಂದವಾಯಿತು ಆ ಆ ನಂದದ ಭರದಲ್ಲಿ ಸರಸ್ವತೀಬಾಯಿಯು "ಬಾಳಾ ಪುರುಷೋತ್ತ ಮಾ ನಿನ್ನಂಥ ಸುಪುತ್ರನಿರಲಿಕ್ಕೆ ನನ್ನ ಸೌಖ್ಯಕ್ಕೇನು ಕಡಿಮೆ. ಏನೂ ಕಡಿಮೆಯಿಲ್ಲ, ನನ್ನ ಮನೋರಥಗಳೆಲ್ಲವೂ ಪೂರ್ಣವಾಗಿ

ಕೂಪವು. ಇನ್ನೊಂದು ಕಷ್ಟಕಡೆಯು ಆಕೆಯೊಂದೇ ಉಳಿದಿರುವದು ಅದು ಯಾವದೆಂದರೆ ನಿನ್ನ ಪತ್ನಿಯು ೫-೬ ತಿಂಗಳು ಬಸುರಿರುವಳು. ಆದ್ದರಿಂದ ನಿನಗೆ ಒಂದು ಗಂಡು ಮಗುವು ಹುಟ್ಟಿದರೆ ನಾನು ಕೃತಾರ್ಥಳಾದೆನು. ಆಮೇಲೆ ಪರಮೇಶ್ವರನು ನನ್ನ ಕಣ್ಣು ಮುಚ್ಚಲಿ ಎಂದು ಅನ್ನುತ್ತಿದ್ದಳು. ಆಕೆಯ ಸದಿಚ್ಛೆಯಂತೆಯೇ ಸೊಸೆಯು ಮುಂದೆ ಗಂಡು ಮಗುವನ್ನೇ ಹೆತ್ತಳು. ಈ ವಾರ್ತೆಯನ್ನು ಕೇಳಿ ಆಮುದುಕಿಗೆ ಎಷ್ಟು ಸಂತಸವಾಗಿದ್ದಿತು. ಪುರುಷೋತ್ತಮನಿಗೆ ಹುಟ್ಟಿದ ಮಗುವು ತಂದೆಯಂತೆಯೇ ತೇಜಃಪುಂಜವಾಗಿತ್ತು. ಆದಕ್ಕೆ ಅವರು ರತ್ನಾಕರನೆಂದು ಅಂದವಾದ ಹೆಸರನ್ನಿಟ್ಟರು ಕೂಸು ಬಿದಿಗೆಯ ಚಂದ್ರನಂತೆ ಬೆಳೆಯಹತ್ತಿತು. ಸರಸ್ವತೀಬಾಯಿಯವರಂತೂ ಸಂತೋಷಸಾಗರದಲ್ಲಿ ಈಸಾಡಹತ್ತಿದರು. ಪುರುಷೋತ್ತಮರಾಯರು ತಾಯಿಯ ಆಜ್ಞೆಯಂತೆಯೇ ವರ್ತಿಸುತ್ತ ಆನಂದದಿಂದ ಆಯುಷ್ಯವನ್ನು ಕಳೆಯಹತ್ತಿದರು.

---

## ೪ ನೇ ಪ್ರಕರಣ

ಧೈರ್ಯಪುರದ ನಾಗರಿಕರಂತೂ ಇವರಿಗೆ ಬಡಬಗ್ಗರ ತಾಯಿತಂದೆಗಳೆಂದು ಅನ್ನುತ್ತಿದ್ದರು. ಇವರ ಸ್ವಭಾವವು ಕೇವಲ ಸಮುದ್ರದ ಹಾಗೆ ಇತ್ತು. ಎಷ್ಟು ದೊಡ್ಡ ಪದವಿಗೇರಿದರೂ ಗರ್ವವೆಂಬದು ಇವರಿಗೆ ಗೊತ್ತು ಇರಲಿಲ್ಲ. ಎಲ್ಲರಕೂಡ ಪ್ರೇಮದಿಂದ ಬಂಧುಭಾವದಿಂದ ನಡಕೊಳ್ಳುತ್ತಿದ್ದರು. ಇವರು ತಮ್ಮ ಆಳಿಕೆಯಲ್ಲಿ ಎಷ್ಟೋ ಸುಧಾರಣೆಗಳನ್ನು ಮಾಡಿದರು ಬಡವರ ಮಕ್ಕ

ಳಿಗೆ ಪುಕ್ಕಟೆಯಾಗಿ ಶಿಕ್ಷಣವು ದೊರೆಯುವ ಹಾಗೆ ಬೇನೆ ಬೇಸರಿಕೆಗಳು ಬಂದಾಗ ಪುಕ್ಕಟೆಯಾಗಿ ಔಷಧವು ದೊರೆಯುವ ಹಾಗೆ ಹೀಗೆ ನಾನಾ ತರದ ಸುಖಸೋಯಿಗಳನ್ನು, ಸರಕಾರದವರ ಕಡೆಯಿಂದಲೂ, ತಮ್ಮ ಸ್ವಂತ ಖರ್ಚಿನಿಂದಲೂ ಮಾಡಿದರು. ಧೈರ್ಯಶಪುರದ ನಾಗರಿಕರು:— ಇನ್ನೂವರೆಗೆ ಇಲ್ಲಿ ಇಂಥ ದಯಾಳುವಾದ ಮಾಮಲೇದಾರರು ಹಿಂದೆಯೂ ಆಗಿಲ್ಲ ಮುಂದೆಯೂ ಆಗುವ ಹಾಗಿಲ್ಲ. ಎಂದು ಅನ್ನುತ್ತಿದ್ದರು ರಾಯರಿಗೆ ೨ ನೇ ತಾಲೂಕಿಗೆ ವರ್ಗವಾದ ಹುಕುಂ ಮೇಲಿನಿಂದ ಬರೆದು ಬಂತು. ಈ ವರ್ತಮಾನವನ್ನು ಕೇಳಿದಾಕ್ಷಣವೇ ಅಲ್ಲಿಯ ನಾಗರಿಕರು ಇಲ್ಲಿಂದ ಇವರನ್ನು ವರ್ಗಾಯಿಸಿದರೆ ನಾವೆಲ್ಲರೂ ಏಕಕಾಲಕ್ಕೆ ಪ್ರಾಣವನ್ನೇ ಕೊಡುವೆವು. ಎಂದು ಅರ್ಜಿಯನ್ನು ಮಾಡಿದರು. ಅಲ್ಲಿಂದ ಇವರ ಹುಕುಂ ತಿರುಗಿತು. ಪ್ರಜೆಗಳ ಪ್ರೀತಿಗೆ ಪಾತ್ರರಾದದ್ದನ್ನು ಕಂಡು ಸರಕಾರದವರು ಇವರಿಗೆ ಸಂಬಳವನ್ನು ಹೆಚ್ಚು ಮಾಡಿದರು. ಇಷ್ಟೇ ಅಲ್ಲದೆ ಮತ್ತು ಕೆಲವು ದೊಡ್ಡ ಅಧಿಕಾರಗಳನ್ನು ಕೊಟ್ಟರು. ಹೀಗೆ ಪುರುಷೋತ್ತಮರಾಯರು ಜನರಿಗೂ ಸರಕಾರಕ್ಕೂ ಬೇಕಾಗಿದ್ದರು. ಪ್ರಿಯ ವಾಚಕರೇ ರಾಯರ ಕೀರ್ತಿಯು ಇಷ್ಟು ಬೆಳೆಯಲಿಕ್ಕೆ ಚಿಕ್ಕಂದಿನ ಹಿಡಿದೂ ಇಂದಿನ ವರೆಗೆ ಹಿಡಿದ ಕೆಲಸವನ್ನು ಕೊನೆಗಾಣಿಸದೆ ಬಿಡಲಿಕ್ಕಿಲ್ಲವೆಂಬ ಆತ್ಮವಿಶ್ವಾಸ, ಧೈರ್ಯ, ಸದುದ್ಯೋಗ, ಸ್ವಾವಲಂಬಿತ್ವ ದಯಾಳುತನ, ಪರೋಪಕಾರ, ನಿಷ್ಕಪಟತನ, ಆಗರ್ಭಶ್ರೀಮಂತನಾಗಿದ್ದರೂ ಕೂಡಾ ಶ್ರೀಮಂತಿಕೆಯ ಸೊಕ್ಕು ಇಲ್ಲದೆ ಬಡಬಗ್ಗರಲ್ಲಿಯೂ ಕೂಡಿ ಇರೋಣ ಗುರುಹಿರಿಯರ ಆಜ್ಞೆಯಂತೆ ವರ್ತಿಸೋಣ, ಪರಸ್ತ್ರೀಯರ ಕೂಡಾ ಭಗಿನಿಯರಂತೆ ವರ್ತಿಸೋಣ ಇವೇ ಮೊದಲಾದ ಸದ್ಗುಣಗಳು ಇವರಲ್ಲಿ ಮನೆಮಾಡಿಕೊಂಡಿರುವ ಫಲವಲ್ಲವೇ? ಹೌದು ನಾವಾದರೂ ಹೀಗೆ

ವರ್ತಿಸಿದರೆ, ನಮ್ಮ ಕೀರ್ತಿಯಾದರೂ ಬೆಳೆಯ-ಲಿಕ್ಕಿಲ್ಲವೇ? ನಿಶ್ಚಯವಾಗಿ ಬೆಳೆಯುವದು. ವಾಚಕರೇ ಇತ್ತ ತಾಯಿಯ ಅವಸ್ಥೆ ಏನಾಗಿರುವದು ನೋಡೋಣ:— ಅಯ್ಯೋ ಸರಸ್ವತೀಬಾಯಿಯವರು ತೀರಿಬಿಟ್ಟರಲ್ಲ. ರಾಯರಿಗೆ ತಾಯಿಯ ಮರಣದಿಂದ ಬಹಳ ದುಃಖವಾಯಿತು. ಯಾಕಂದರೆ ಈ ಜಗತ್ತಿನಲ್ಲಿ ತಾಯಿಗಿಂತ ಬೇರೊಂದು ದೈವತವಿಲ್ಲ. ಎಷ್ಟಾದರೂ ಮಕ್ಕಳ ಮೇಲೆ ತಂದೆಗಿಂತ ತಾಯಿಯ ಪ್ರೇಮವು ಹೆಚ್ಚಿರುವದು.

ಪುರುಷೋತ್ತಮರಾಯರಿಗೆ ಚಿಕ್ಕಂದಿನ ಹಿಡದೂ ಸಾಕಿ ಸಲುಹಿ ನಾನಾ ತರದ ಅಕ್ಕರತೆಗಳನ್ನು ಮಾಡಿ ಮಗನ ಸಲುವಾಗಿ ಎಷ್ಟೋ ದುಃಖವನ್ನು ಸಹಿಸಿ ದೊಡ್ಡವನನ್ನಾಗಿ ಮಾಡಿದ ತಾಯಿಯ ಮರಣದಿಂದ ದುಃಖವಾಗುವದರಲ್ಲಿ ಏನಾಶ್ಚರ್ಯವು!

ಜನರು ಸೃಷ್ಟಿನಿಯಮಕ್ಕನುಸರಿಸಿ ರಾಯರಿಗೆ ಸಮಾಧಾನ ಹೇಳಿ ಅವರ ದುಃಖದಲ್ಲಿ ಪಾಲುಗಾರರಾದರು. ರಾಯರು ತಾಯಿಯ ಉತ್ತರ ಕ್ರಿಯಾದಿಗಳನ್ನು ತೀರಿಸಿ ಕೂಡಲೇ ತಾಯಿಯ ಸ್ಮರಣಾರ್ಥವಾಗಿ ಒಂದು ಶಾಲೆಯನ್ನು ಕಟ್ಟಿಸಿ, ಅದಕ್ಕೆ ತಾಯಿಯ ಹೆಸರವನ್ನಿಟ್ಟರು. ನೋಡಿದಿರಾ! ಈ ಗರ್ಭಶ್ರೀಮಂತನು ಶ್ರೀಮಂತಿಕೆಯ ಉಪಯೋಗವನ್ನು ಹ್ಯಾಗೆ ಮಾಡುವನು. ಜಗತ್ತಿನಲ್ಲಿ ಎಷ್ಟೋ ಶ್ರೀಮಂತರಿರುವರು. ಅವರ ಶ್ರೀಮಂತಿಕೆಗೆ ಧಿಕ್ಕಾರವಿರಲಿ. ಪಾಪಿಗಳು ಹೊಟ್ಟೆಗೂ ಸಹ ತಿನ್ನದೆ ಪೈಗೆ ಪೈ ಕೂಡಿಸಿ, ಕುಳಗಳ ಕುತ್ತಿಗೆಯನ್ನು ಮುರಿದು ಸಿಕ್ಕ ಸಿಕ್ಕ ಹಾಗೆ ಹೊಲಮನೆಗಳನ್ನು ಬರೆಸಿಕೊಂಡು ಒಂದು ದಿವಸ ಪಲಾಯನ ಮಾಡುವರು. ಇಂಥ ಶ್ರೀಮಂತರೂ ಎಷ್ಟು ಜನರಿದ್ದರೂ ವ್ಯರ್ಥವು. ಅವರಿಗೆ ಒಬ್ಬ ಹೊಲೆಯನು ಕೂಡಾ ಮನ್ನಿಸುವದಿಲ್ಲ. ಆದರೆ ರಾಯರು ಇಂಥ ಶ್ರೀಮಂತರಲ್ಲ ನಿಜವಾದ ಗರ್ಭಶ್ರೀಮಂತರು

ನಮ್ಮ ಈ ಕಥಾನಾಯಕರು ಉಳಿದ ತಮ್ಮ ಆಯುಷ್ಯದಲ್ಲಿ ಇನ್ನೂ ಎಷ್ಟೋ ಪರೋಪಕಾರದ ಕಾರ್ಯಗಳನ್ನು ಮಾಡಿ ತಮ್ಮ ಶ್ರೀಮಂತಿಕೆಯ ಯೋಗ್ಯ ಉಪಯೋಗ ಮಾಡುತ್ತ ದೀರ್ಘಾಯುಷ್ಯವಂತರಾಗಿ ತಮ್ಮ ಅಂದವಾದ ಯಶೋಮಂದಿರದಲ್ಲಿ ಆನಂದದಿಂದ ಪತ್ನಿ ಪುತ್ರಸಮೇತರಾಗಿ ಸಂತೋಷದಿಂದ ವಾಸಿಸುತ್ತಿದ್ದರು.



# ಕರ್ಮಸಾಗರದಲ್ಲಿ ಮುಳುಗಿದ
# ಕಾಲಿದಾಸರು.

ಹರ್ಷಪುರವೆಂಬಲ್ಲಿ ಕಾಲಿದಾಸಪಂತರೆಂಬ ಗೃಹಸ್ಥರು ವಾಸಿಸುತ್ತಿದ್ದರು. ಇವರು ಅಗರ್ಭ ಶ್ರೀಮಂತರೂ ಅಲ್ಲ ಅತೀ ದರಿದ್ರರೂ ಅಲ್ಲ, ಮಧ್ಯಮ ವರ್ಗದವರಿದ್ದರು. ಇವರಿಗೆ ಹುಟ್ಟಿದಾರಭ್ಯ ವೃದ್ಧಾಪ್ಯಕಾಲದ ವರೆಗೂ ಕರ್ಮವು ಕೈತೊಳಕೊಂಡು ಬೆನ್ನೇ ಹತ್ತಿತ್ತು. ಅದರ ವರ್ಣನೆಯನ್ನು ಮಾಡಬೇಕಾದರೆ ಅತೀ ಭಯವುಂಟಾಗುತ್ತದೆ. ಇರಲಿ. ಇವರು ಚಿಕ್ಕವರಿರುವಾಗಲೇ ಇವರ ತಂದೆ ತಾಯಿಗಳು ತೀರಿಕೊಂಡರು. ಎಲ್ಲ ಮನೆತನದ ಭಾರವು ಇವರ ಮೇಲೆಯೇ ಬಿದ್ದಿತು. ಇವರಿಗೆ ಇಬ್ಬರು ಅಕ್ಕ ತಂಗಿಯರಿದ್ದರು ಅವರ ವಿವಾಹವು ಇನ್ನೂ ಆಗಿದ್ದಿಲ್ಲ. ಇವರಿಗೆ ಅನುರೂಪವಾದ ವರಗಳನ್ನು ಹುಡುಕಿ ಲಗ್ನ ಮಾಡಿಕೊಟ್ಟರು. ಮುಂದೆ ಆರು ತಿಂಗಳಲ್ಲಿಯೇ ತಂಗಿಯ ಪತಿಯು ಅಕಸ್ಮಾತ್ತಾಗಿ ಮರಣ ಹೊಂದಿದನು. ಆ ಓರ್ವ ಬಾಲಿಕೆಗೆ ಇಂಥ ಎಳೆ ವಯಸ್ಸಿನಲ್ಲಿಯೇ ವೈಧವ್ಯವು ಪ್ರಾಪ್ತವಾಯಿತು. ಕಾಲಿದಾಸ ಪಂತರಿಗೆ ಕರ್ಮವು ಬೆನ್ನುಹತ್ತಲಿಕ್ಕೆ ಇಂದಿನಿಂದ ಪ್ರಾರಂಭವಾಯಿತೆನ್ನಲಿಕ್ಕೆ ಏನೂ ಅಡ್ಡಿ ಇಲ್ಲ. ಮುಂದೆ ಕೆಲವು ತಿಂಗಳಲ್ಲಿಯೇ ಅಕ್ಕನು ವಿಷಮ ಜ್ವರದಿಂದ ತೀರಿಕೊಂಡಳು.

ಆಹಾ! ಇದು ಎಂಥ ಕೆಟ್ಟ ಪ್ರಸಂಗವು ತಂದೆತಾಯಿಗಳಿಲ್ಲದ ಪರದೇಶಿಯಾದ ಕಾಲಿದಾಸನು ಅಕ್ಕ ತಂಗಿಯರ ಸಂಸಾರವನ್ನಾದರೂ ನೋಡಿ ಆನಂದಪಡುತ್ತಿದ್ದನು. ಅವರಾದರೂ ಇವನನ್ನು ಬಹಳವಾಗಿ ಪ್ರೀತಿಸುತ್ತಿದ್ದರು ಆದರೆ ಮಾಡುವದೇನು ತಂಗಿಯ

ಸ್ಥಿತಿಯು ಒಂದಾದರೆ, ಅಕ್ಕನ ಸ್ಥಿತಿಯು ಒಂದಾಯಿತು- ಎಂಥ ಕರ್ಮವಿದು. ಎಲ್ಲವೂ ವಿಚಿತ್ರವೇ ಸರಿ.

ಈ ವೇಳೆಗೆ ಕಾಲಿದಾಸನಿಗೆ ೨೬ನೇ ವರ್ಷವು ಆರಂಭವಾಗಿತ್ತು, ವಿವಾಹಕ್ಕೆ ಯೋಗ್ಯವಾಗಿದ್ದನು. ಇವನು ಹಿರಿಯರು ಪರಂಪರೆಯಾಗಿ ಮಾಡುವ ಸರಾಫಿ ಉದ್ಯೋಗವನ್ನೇ ಮಾಡುತ್ತಿದ್ದನು ಈತನ ಸೋದರಮಾವನು ಇವನಿಗೆ ತಕ್ಕ ಕನ್ಯೆಯನ್ನು ಹುಡುಕಿ ವಿವಾಹವನ್ನು ಮಾಡಿದನು. ಇವನ ಪತ್ನಿಯೂ ಇವನಂತೆಯೇ ಪರೋಪಕಾರಿಯೂ ಸದ್ಗುಣಿಯೂ ಸಂಸಾರದ ಮೇಲೆ ಲಕ್ಷವುಳ್ಳವಳು ಇದ್ದಳು ಪ್ರಪಂಚವೆಂಬ ರಥಕ್ಕೆ ಪತಿಪತ್ನಿಗಳೆಂಬ ಎರಡು ಚಕ್ರಗಳು ಒಳ್ಳೆಯವಿದ್ದರೆ ಆ ರಥವು ತನ್ನ ಸ್ಥಳಕ್ಕೆ ಸುಸೂತ್ರವಾಗಿ ಸಾಗುವದು. ಇದರಂತೆಯೇ ಕಾಲಿದಾಸನ ಸ್ಥಿತಿಯು ಉತ್ತಮವಿದ್ದದರಿಂದ ಅವನ ಬಾಳ್ವೆಯು ಚನ್ನಾಗಿ ಸಾಗಹತ್ತಿತು. ಆದರೆ "ತಾನೊಂದು ಎಣಿಸಿದರೆ, ದೈವವೊಂದು ಎಣಿಸಿತು" ಎಂಬಂತೆ ವಿವಾಹವಾದ ೨ ವರ್ಷಗಳಲ್ಲಿಯೇ ಸುಶೀಲೆಯಾದ ಭಾರ್ಯೆಯು ಪುತ್ರನನ್ನು ಹೆತ್ತು ಎಂಟು ದಿನಗಳಲ್ಲಿಯೇ ಇಹಲೋಕವನ್ನು ಬಿಟ್ಟುಹೋದಳು. ಅಯ್ಯೋ ಇದು ಎಂಥ ಭಯಂಕರ ಪ್ರಸಂಗವು. ಎಂಟು ದಿನಗಳಾದ ಕೂಸಿನ ಮಗ್ಗಲಿನಲ್ಲಿ ತನ್ನ ಕಂದನಿಗೆ ಮೊಲೆಯುಣಿಸುವ ತಾಯಿಯು ಎಳೆ ಮಗುವನ್ನು ಬಿಟ್ಟು ಹೋದಳಲ್ಲವೇ! ಅಯ್ಯೋ ಆ ಎಳೆ ಕಂದನಿಗೆ ಇಂಥ ಪ್ರಸಂಗವೇ! ಕಾಲಿದಾಸರಂತೂ ಭಯಂಕರ ಶೋಕಮಾಡಹತ್ತಿದರು. ನೆರೆಮನೆಯ ಆಚಾರ್ಯರು ಅವರಿಗೆ ಮಾಡುವದೇನು ಮಾಡಿದ ಕರ್ಮವನ್ನು ಭೋಗಿಸಲಿಕ್ಕೆಬೇಕು. ಹೀಗೆ ಹೇಳಹತ್ತಿದರು. ಅದಕ್ಕೆ ಕಾಲಿದಾಸರು ಮಹನೀಯರೇ ನನ್ನ ವರ್ತನವು ಇನ್ನೂವರೆಗೆ ತೊಳೆದ ಅಕ್ಕಿಯಂತೆ ನಿರ್ಮಲ

ವಾಗಿದೆ. ಪ್ರತಿಯೊಂದನ್ನು ಕೇಳಲಾಗಿ ಕರ್ಮ ಕರ್ಮವೆಂದೇ ಹೇಳುತ್ತೀರಿ. ಅಯ್ಯೋ! ಆ ನೀಚವಾದ ಕರ್ಮವು ನನ್ನ ಬೆನ್ನು ಹತ್ತಿರುವದೇ ಜಗತ್ತಿನಲ್ಲಿ ನೇತ್ರಗಳಿಂದ ನೋಡಲಿಕ್ಕೆ ಆಗದಂಥ ನೀಚಕರ್ಮವನ್ನು ಹಗಲೂ ಇರುಳೂ ಮಾಡುವ ನರಾಧಮರು ತುಂಬಿರುವರು. ಅವರ ಆಯುಷ್ಯವನ್ನು ನೋಡಿದರೆ ಉತ್ಕರ್ಷಮಯವಾಗಿಯೇ ಹೋಗಿರುವದು. ಆದರೆ ನನ್ನ ನೆರಳಿಗೆ ನಾನು ಅಂಜಿಕೊಂಡು ಸದ್ವರ್ತನದಿಂದ ವರ್ತಿಸುವ ನನಗೆ ಈ ಕರ್ಮಗಳು ಬೆನ್ನು ಹತ್ತಿರುವವೇ? ಏನು ದೇವರ ಹತ್ತರ ನ್ಯಾಯವೇ ಇಲ್ಲದಂತಾಯಿತೇ? ಏನು ಕಲಿಮಹಾರಾಜನು ತನ್ನ ರಾಜ್ಯವನ್ನು ನನ್ನ ಮೇಲೆಯೇ ನಡಿಸಿರುವನೇ ನನಗೆ ಯಾವದೂ ತಿಳಿಯದಾಗಿದೆ ಎಂದು ಶೋಕಿಸಹತ್ತಿದರು ಇರಲಿ. ಆ ಪರದೇಶಿಯಾದ ಕಂದನನ್ನು ಜೋಕೆಮಾಡಲಿಕ್ಕೆ ಒಬ್ಬ ದಾಯಿಯನ್ನು ಇಟ್ಟರು. ಕಂದವು ಬಿದಿಗೆಯ ಚಂದ್ರನಂತೆ ಬೆಳೆಹತ್ತಿತು. ಇನ್ನು ಮೇಲೆ ೨ ನೇ ವಿವಾಹವನ್ನು ಮಾಡಿಕೊಳ್ಳುವದು ಕಾಲಿದಾಸನ ಮನಸ್ಸಿನಲ್ಲಿ ಇದ್ದಿದ್ದಿಲ್ಲ. ಆದರೆ ಆಪ್ತೇಷ್ಟರ ಆಗ್ರಹದ ಮೂಲಕ ಮಾಡಿಕೊಂಡರು ೨ ನೇ ಪತ್ನಿಯಾದರೂ ಅವರಿಗೆ ಅನುರೂಪವಾಗಿಯೇ ದೊರಕಿದ್ದಳು ಮುಂದೆ ಕೆಲವು ವರ್ಷಗಳಲ್ಲಿಯೇ ಈಕೆಯ ಹೊಟ್ಟೆಯಲ್ಲಿ ಒಂದು ಹೆಣ್ಣುಮಗುವು ಜನಿಸಿತು. ಆ ಹೆಣ್ಣುಕೂಸು ತಂದೆ ತಾಯಿಗಳ ಹಾಗೆ ಸುಸ್ವರೂಪಿಯಾಗಿತ್ತು. ಆ ಹೆಣ್ಣುಮಗಳು ಐದಾರು ವರ್ಷದವಳಾದ ಬಳಿಕ ಕಾಲಿದಾಸರಿಗೆ ಒಬ್ಬ ಪುತ್ರನು ಜನಿಸಿದನು. ಮಾತಾಪಿತೃಗಳಿಗೆ ಸಂತೋಷವಾಯಿತು. ಮುಂದೆ ೫-೬ ವರ್ಷಗಳು ಹೋಗುವದರೊಳಗಾಗಿಯೇ ಪರದೇಶಿಯಾದ ಪುತ್ರನೂ, ಮತ್ತು ಹೆಣ್ಣುಮಗಳು ವಿವಾಹಕ್ಕೆ ಯೋಗ್ಯವಾದರು. ಪಂತರು ಮಗಳಿಗೆ ತಕ್ಕವರನನ್ನು, ಮಗನಿಗೆ ತಕ್ಕವಧುವನ್ನು ಆರಿಸಿ ವಿವಾಹವನ್ನು ಮಾಡಿದರು.

ಎಂಟು ದಿನದ ಪರದೇಶಿಯಾದ ಕೂಸವು ದೊಡ್ಡದಾಗಿ ಬೆಳೆಯುತ್ತ ಬೆಳೆಯುತ್ತ ವಿವಾಹಕ್ಕೆ ಯೋಗ್ಯವಾಗಿ ವಿವಾಹ ವೂ ಆಯಿತು. ಆ ಹುಡುಗನು ತಂದೆಯಂತೆ ಜಾಣನಿದ್ದನು. ಇವನು ಶಾಲೆಯಲ್ಲಿ ಶಿಕ್ಷಕನಿದ್ದನು. ತಿಂಗಳಿಗೆ ೩೦ ರೂಪಾಯಿ ಸಂಬಳವಿತ್ತು.

ಈ ಪರದೇಶಿಯಾದ ಹುಡುಗನ ಉತ್ಕರ್ಷವನ್ನು ನೋಡಿ ಯಾರಿಗೆ ಸಮಾಧಾನವಾಗಲಿಕ್ಕಿಲ್ಲ ಎಲ್ಲರೂ ಆನಂದದಲ್ಲಿ ಮುಳು ಗಿದರು. ಆದರೆ ಮಾಡುವದೇನು. ಎಲ್ಲಿ ಯಾವದಾದರೊಂದು ಕಾ ರ್ಯವು ಪರಿಪೂರ್ಣವಾಗುವದೊಂದೇ ಅವಕಾಶವು ಅಲ್ಲಿ ಕೂಡಲೆ ಘಾತವಾಗುವದು ನಿಶ್ಚಯವೇ ಸರಿ ಆಗದೆ ಇರುವದು ಅಪವಾದ ವು ಎಲ್ಲರೂ ಕೆಲವು ತಿಂಗಳಗಳನ್ನು ಒಳ್ಳೇಸ್ಥಿತಿಯಲ್ಲಿ ಕಳೆಯುವ ದೊಂದೇ ಅವಕಾಶವು ಮತ್ತೆ ಇವರಿಗೆ ಕರ್ಮವು ಬೆನ್ನುಹತ್ತಿತು. ವಿವಾಹವಾದ ಒಂದು ವರ್ಷದಲ್ಲಿಯೇ ಮಗನಿಗೆ ಸರ್ಪವು ಕಚ್ಚಿ ಮರಣಹೊಂದಿದನು. ಇವನು ಮರಣಹೊಂದಿದ ೩ ತಿಂಗಳುಗಳಲ್ಲಿ ಯೇ ಪುತ್ರಿಯು ಹಡೆದು ತೀರಿಕೊಂಡಳು. ಅಯ್ಯೋ ಇದು ಎಂಥ ದುರ್ಧರಪ್ರಸಂಗವು ಕಾಲಿದಾಸರಂತೂ ನೆಲವನ್ನೇ ಹಿಡಿದರು. ಅವರಿಗಾದ ದುಃಖದ ವರ್ಣನೆಯನ್ನು ಮಾಡಲಿಕ್ಕೆ ಬರುವದು ಶಕ್ಯ ವೇ ಇಲ್ಲ. ಮತ್ತೆ ನೆರಮನೆಯ ಆಚಾರ್ಯರು ಕರ್ಮಕಾಂಡವನ್ನೇ ಓದತೊಡಗಿದರು. ಇದನ್ನು ಕೇಳಿಯಂತೂ ಕಾಲಿದಾಸರ ಸ್ಥಿತಿ ಯು ಚಿಂತಾಜನಕವಾಯಿತು. ತಾಪವನ್ನು ಸಹಿಸಲಾರದೆ ಆತ ಹತ್ಯವನ್ನು ಮಾಡಿಕೊಳ್ಳಲಿಕ್ಕೆ ಹವಣಿಸಹತ್ತಿದರು.

ಕೆಲವರು ತಿಳಿದವರು ಆ ನೆರಮನೆಯ ಆಚಾರ್ಯರನ್ನು ಮ ನೆಗೆ ಕಳಿಸಿ ನಾನಾತರದಿಂದ ತಿಳಿಸಿ ತಿಳಿಸಿ ಹೇಳಿ ಅವರನ್ನು ಸಮಾ ಧಾನಗೊಳಿಸಲಿಕ್ಕೆ ಹವಣಿಸಹತ್ತಿದರು. “ ಹಸೀ ಹುಣ್ಣಿನಮೇಲೆ ಬರೆಕೊಟ್ಟಂತೆ ಕಾಲಿದಾಸರ ಸ್ಥಿತಿಯಾಗಿರಲು ಹ್ಯಾಗೆ ಸಮಾಧಾ

ನವಾಗಬೇಕು. ಹೀಗೆ ಶೋಕಸಾಗರದಲ್ಲಿ ಮುಳುಮುಳಗಿ ಏಳುವ ದರೊಳಗಾಗಿಯೇ ಮತ್ತೊಂದು ಕರ್ಮವು ತನ್ನ ಕಾರ್ಯವನ್ನು ಪ್ರಾರಂಭಮಾಡಿತು. ಅದು ಯಾವದೆಂದರೆ ಪತ್ನಿಯು ಪ್ಲೇಗದಿಂದ ಮರಣಹೊಂದಿದಳು. ಇಷ್ಟೇ ಅಲ್ಲದೆ ಇಂಥ ಭಯಂಕರ ಪ್ರಸಂಗ ದಲ್ಲಿ ಆ ಸಣ್ಣ ಹುಡುಗನೂ ಬೇನೆಯಿಂದ ಬಿದ್ದಿದ್ದನು. ವಾಚಕರೇ ! ನೋಡಿದಿರಾ ಈ ಕರ್ಮಗಳನ್ನು ಥೈಥೈ ಎಂದು ಕಾಲಿದಾಸರ ಗೃಹ ದಲ್ಲಿ ಒಂದೇಸವನೆ ಕುಣಿಯುಹತ್ತಿವೆ. ಈ ಒಂದೇಸವನೆ ಒಂದರ ಮೇಲೊಂದು ತಾಪಗಳು ಮತ್ತೊಬ್ಬನಿಗೆ ಬಂದಿದ್ದರೆ, ಅವನು ಕೂ ಡಲೆ ದೇಹತ್ಯಾಗ ಮಾಡುತ್ತಿದ್ದನು ಆದರೆ ಕಾಲಿದಾಸರು ಸುವಿ ಚಾರಿಗಳಿದ್ದದರಿಂದ ಎಲ್ಲವನ್ನು ನುಂಗಿಕೊಂಡು ಜಗತ್ತಿನ ವ್ಯವ ಹಾರದಕಡೆಗೆ ನೋಡಿ ಸುಮ್ಮನಿರುತ್ತಿದ್ದರು ಬೇನೆಯಿಂದ ಬಹಳ ದಿ ವಸಗಳ ಹಿಡಕೊಂಡು ಬಳಲುತ್ತಿದ್ದ ಪರದೇಶಿಯಾದ ಮಗನು ಗುಣ ಹೊಂದಿ ನೆಟ್ಟಗಾದನು. ಈಗ ತುಸು ಅವರಿಗೆ ಸಮಾಧಾನವಾಯಿ ತು. ನೋಡಿದಿರಾ ಪಂತರ ಆಯುಷ್ಯವನ್ನು, ಇಡೀ ಆಯುಷ್ಯವು ದುಃಖದಲ್ಲಿ ಹೋಯಿತು, ಶಾಂತಿ ಸಮಾಧಾನಗಳು ಅವರಿಗೆ ಗೊತ್ತೇ ಇಲ್ಲ. ಕಾಲಗತಿಯು ವಿಚಿತ್ರವಾದದ್ದು.

# ೩ ನೇ ಪ್ರಕರಣ.

ಒಮ್ಮೆ ಮನುಷ್ಯನಿಗೆ ಶಾಪವಾಗಲಿಕ್ಕೆ ಆರಂಭವಾಯಿತೆಂದರೆ ಇಷ್ಟು ಪರಮಾವಧಿಗೆ ಹೋಗುತ್ತದಲ್ಲಾ. ಅದರ ವರ್ಣನೆಯನ್ನು ಮಾಡಬೇಕಾದರೆ ದೇಹಾಂತ ಶಿಕ್ಷೆಯನ್ನು ವಿಧಿಸಿದಂತಾಗುತ್ತದೆ. ಎಲ್ಲೈ ಪಾಶ್ಚಾತ್ಯ ರಾಷ್ಟ್ರಗಳು ಕರ್ಮಗಳನ್ನು ಕಾಲು ತೆಳಗೆ ಹಾಕಿ ತುಳಿದಿರುವವು. ಅವಕ್ಕೆ ಕರ್ಮಗಳೆಲ್ಲ ಅಂಜಿಯೇ ಇರುವವು. ಆದರೆ ಹೇಡಿಗಳಾದ ನಮ್ಮ ಮೇಲೆ ಮಾತ್ರ ಇವುಗಳ ಅಮಲವು ಅವ್ಯಾಹತವಾಗಿ ನಡೆಯುವದು. ಕಾಲಿದಾಸರಿಗೆ ಈಗ ಮಾತ್ರ ವೃದ್ಧಾಪ್ಯಕಾಲಕ್ಕೆ ಕರ್ಮಗಳು ಬಿಸ್ಸುಬಿಟ್ಟವು ಇದೊಂದು ರೀತಿಯಿಂದ ಅವರ ಪುಣ್ಯವೇ ಸರಿ. ಇತ್ತ ಮಗನು ದ್ವಿತಿಯ ಯಸೋಮನಂತೆ ಬೆಳೆದು ದೊಡ್ಡವನಾದನು. ಮಗನನ್ನು ಶಾಲೆಗೆ ಹಾಕಿದನು. ಅವನು ಚಾಣಾಕ್ಷನೂ ನಿರಾಲಸ್ಯಯುಳ್ಳವನೂ ಇದ್ದದರಿಂದ ನೋಡನೋಡುವದರೊಳಗಾಗಿಯೇ ಎಲ್ಲ ಹುಡುಗರಿಗಿಂತಲೂ ಮುಂದಾದನು. ಶಿಕ್ಷಕರಂತೂ ಇವನಿಗೆ ನಮ್ಮ ಶಾಲೆಯ ದಿನಮಣಿಯನ್ನುತ್ತಿದ್ದರು. ಶಿಕ್ಷಣವು ಮುಗಿದಬಳಿಕ ಮಗನನ್ನು ತನ್ನ ಮನೆತನದ ಪರಂಪರೆಯ ಉದ್ಯೋಗಕ್ಕೆ ಹಚ್ಚಿದನು. “ ರತ್ನವನ್ನು ಎಲ್ಲಿ ಒಯ್ದು ಇಟ್ಟರೇನಾಯಿತು. ಅದು ತನ್ನ ಪ್ರಕಾಶವನ್ನು ಪಸರಿಸಿಯೇ ತೀರುವದು. ಇರಲಿ, ಜನರು ಕಾಲಿದಾಸ ಪಂತರ ಮನೆಗೆ ತಮ್ಮ ಕನ್ಯೆಯನ್ನು ಕೊಡುವದರ ಸಲುವಾಗಿ ಎಡತಾಕ ಹತ್ತಿದರು. ಪಂತರಿಗೆ ಹಿಂದೆ ಆದ ಶಾಪದ ವೇದನೆಗಳು ಒಮ್ಮಿಂದೊಮ್ಮೆ ನೆನವಾಗಿ ಮೈಮೇಲಿನ ಎಚ್ಚರವು ತಪ್ಪುತ್ತಿತ್ತು ಮಗನು ತನ್ನ ಮನಸ್ಸಿಗೆ ಬಂದ ಕನ್ಯೆಯನ್ನು ಆರಿಸಿದನು. ಮುಂದೆ


ವಿವಾಹವೂ ಆಯಿತು ಎಲ್ಲರಿಗೂ ಆನಂದವಾಯಿತು. ಆದರೆ ಪಂತರಿಗೆ ಮಾತ್ರ ಇಬ್ಬರೂ ಪತ್ನಿಯರೂ, ರತ್ನದಂಥ ಮಗನೂ ಮಗಳೂ, ಅಕ್ಕನೂ ಮರಣಹೊಂದಿದ ದುಃಖವು ಮತ್ತು ತಂಗಿಯೂ, ಸೊಸೆಯೂ ವಿಧವೆಯಾದ ದುಃಖವೂ ನೆನಪಾಗಿ ಒಂದೇ ಸವನೆ ನೇತ್ರಗಳಿಂದ ದುಃಖಾಶ್ರುಗಳು ಸುರಿಯ ಹತ್ತಿದವು. ಇದನ್ನು ನೋಡಿ ವಿವೇಕಿಯಾದ ಪುತ್ರನು ತಂದೆಯವರೇ ಶೋಕವನ್ನು ಮಾಡಬೇಡಿರಿ. ಪ್ರಾಣವನ್ನು ಕೊಟ್ಟರೂ ಕೂಡ ಅವರೇನು ತಿರುಗಿ ಬರುವರೇ? ಜಗತ್ತಿನಲ್ಲಿ ನಮಗಿಂತಲೂ ಹೆಚ್ಚು ದುಃಖವನ್ನು ಅನುಭವಿಸಿದವರು ಇರುವರು. ಅವರ ಕಡೆಗಾದರೂ ನೋಡಿ ಸುಮ್ಮನೆ ಇರಿರಿ, ತಾಪವನ್ನು ಮಾಡಿಕೊಳ್ಳಬೇಡಿರಿ. ನಿಮಗೆ ಉಪದೇಶವನ್ನು ಹೇಳುವ ಅಧಿಕಾರವು ನನಗಿರುವದಿಲ್ಲ ಆದರೂ ಕೂಡ ನೀವು ಮಾಡುವ ಶೋಕವನ್ನು ನೋಡಿದರೆ ನನ್ನ ಎದೆಯಲ್ಲಿ ಬಾಣವು ನಟ್ಟಂತಾಗುತ್ತದೆ ಏನು ಮಾಡಲಿ ದೇವಾ ಎಲ್ಲರನ್ನು ಸುಖಿಯಾಗಿಟ್ಟು ನನಗೆ ಮರಣ ಕೊಟ್ಟಿದ್ದರೆ ಎಷ್ಟು ನೆಟ್ಟಗಾಗುತ್ತಿತ್ತು. ಅಂತಾ ಮಗನು ತಾಪದಿಂದ ತನ್ನೊಳಗೇ ತಾನೇ ನುಡಿಯುವದನ್ನು ಕೇಳಿ ಕಾಲಿದಾಸರು ಮಗನಿಗೆ —
“ ಕಂದನೇ ಇದ್ದರೆ ನಿನ್ನಂಥ ಮಗನಿರಬೇಕು. ನಿನ್ನ ಹೃದಯವು ಅಂತಃಕರುಣದಿಂದ ತುಂಬಿ ತುಳುಕುತ್ತಿದೆ. ಕಪಟವು ಲೇಶಮಾತ್ರವಾದರೂ ಇಲ್ಲ. ಇರಲಿ. “ ಬಾಳಾ ನೀನು ನಿನ್ನ ಪತ್ನಿಯು ಉತ್ತಮ ರೀತಿಯಿಂದ ಬಾಳ್ವೆ ಮಾಡಿರಿ. ದೀರ್ಘಾಯುಷ್ಯವಂತರಾಗಿರಿ ಇಷ್ಟೇ ನನ್ನ ಇಚ್ಛೆಯು. ದೇವರು ನನ್ನ ಕಣ್ಣುಗಳನ್ನು ಬೇಗನೆ ಮುಚ್ಚಲಿ. ನನ್ನಂಥಾ ದೈವಗೇಡಿಯು ಈ ಜಗತ್ತಿನಲ್ಲಿ ಯಾರೂ ಇರಲಿಕ್ಕಿಲ್ಲ. ಇರಲಿ. ವ್ಯರ್ಥವಾಗಿ ಬಡಬಡಿಸಿದರೆ ಏನಾಗುವದು. ಆಗುವ ವಿಧಿಗಳೆಲ್ಲ ಆಗೇ ಹೋಗಿರುವವು ಎಂದು ಅಂದು ಸುಮ್ಮನಾದನು. ಇದನ್ನು ಕೇಳಿ ಮಗನ ನೇತ್ರಗಳಿಂದ

ದುಃಖಾಶ್ರುಗಳು ಒಂದೇ ಸವನೆ ಸುರಿದವು. ನಂತರ ವೃದ್ಧಾಪ್ಯ ಕಾಲವಾದ್ದರಿಂದ ಮಗನು ಹಗಲು ಇರುಳೂ ಅವರ ಸೇವೆಯನ್ನು ತಪ್ಪದೆ ಮಾಡುತ್ತಿದ್ದನು. ಒಂದು ಮಲ್ಲಿಗೆಯ ಹೂವನ್ನು ಎಷ್ಟು ಸೂಕ್ಷ್ಮರೀತಿಯಿಂದ ಜಪ್ಪಿಸುವರೋ ಹಾಗೆಯೇ ಕಡೆತನಕ ತಂದೆಯನ್ನು ರಕ್ಷಿಸಿದನು.

ವಾಚಕರೇ ಎಲ್ಲ ಕಾಲದಲ್ಲಿ ಮುಪ್ಪಿನ ಕಾಲವು ಕಠಿಣ ವಾದದ್ದು. ನಂತರ ಪುಣ್ಯವೇ ಆಸ್ತಿ ಅಥವಾ ಅವರ ವೇಳೆಯೇ ತಿರುಗಿ ತೆಸ್ತಿರಿ ಅತ್ತೆಯೇ ಎಲ್ಲವೂ ನಾಶವಾದರೂ ಕಡೆಗೆ, ಮುಪ್ಪಿನ ಸಮಯಕ್ಕೆ ಒಬ್ಬನೇ ಪುತ್ರನು ಬದುಕಿದ್ದನು. ಇವನಿಂದಲೇ ಇವರಿಗೆ, ಮುಪ್ಪಿನ ಕಾಲವು ತಾಪವಿಲ್ಲದೆ ಹೋಯಿತು. ಇವನು ಒಂದು ವೇಳೆ ಹಿಂದೆಯೇ ಮರಣ ಹೊಂದಿದ್ದರೆ, ಪಾತರಂಥಾ ಅಭಾಗಿಯು ಈ ಪೃಥ್ವಿಯಲ್ಲಿ ಯಾರೂ ಇರುತ್ತಿದ್ದಿಲ್ಲವೆನ್ನಲಿಕ್ಕೆ ಏನೂ ಅಡ್ಡಿ ಇದ್ದಿದ್ದಿಲ್ಲ ಆದರೆ ಒಬ್ಬನೇ ಒಬ್ಬ ಮಗನು ಕಡೆಗೆ ಉಳಿದದ್ದರಿಂದ ಆ ಪ್ರಸಂಗವು ಬರಲಿಲ್ಲ ಇದೊಂದು ಸುದೈವವೇ ಸರಿ ವಾಚಕರೇ! ಕರ್ಮಗಳ ರಾಜ್ಯದಲ್ಲಿ ಕಾಲಿದಾಸರ ಅವಸ್ಥೆಯು ಏನಾಯಿತು ನೋಡಿದಿರಾ! ಅದರಂತೆಯೇ ನಮ್ಮ ಅವಸ್ಥೆಯಾಗಿರುವದು ಆದ್ದರಿಂದಲೇ ನಾವು ಎಲ್ಲರಿಗಿಂತಲೂ ಹಿಂದುಳಿದಿರುತ್ತೇವೆ ನಮ್ಮ ಉತ್ಕರ್ಷವಾಗಬೇಕಾದರೆ ನಾವು ಹಿಂದಿನ ಹುಚ್ಚು ಕಲ್ಪನೆಗಳನ್ನು ಮುಹೂರ್ತ ಮೊದಲಾದ ಶುಷ್ಕ ಜ್ಯೋತಿಷ್ಯಗಳನ್ನು ಬಿಟ್ಟು ಪವಿತ್ರವಾದ ಪರಮಾತ್ಮನ ಹೆಸರನ್ನು ತಗೊಂಡು ನಾವು ಮಾತಾಪಿತರ ಕಾರ್ಯಗಳನ್ನು ಎದೆಗುಂದದೆ, ವೇಳೆಯ ಕಡೆಗೆ ಲಕ್ಷವಿಟ್ಟು ವೇಳೆಗೆ ಸರಿಯಾಗಿ ಮಾಡುವದೇ ನಮ್ಮ ಆದ್ಯ ಕರ್ತವ್ಯವು. ಗ್ರಹಗಳ ಬಗ್ಗೆ ನಾವು ಮನಸ್ಸಿನಲ್ಲಿ ಕಲ್ಪನೆಯನ್ನೇ ತರುವ ಕಾರಣವಿಲ್ಲ ಅದು ಸೃಷ್ಟಿ ನಿಯಮಾನುಸಾರವಾಗಿ ಆಗೇ ಆಗುವದು.

ಇಡೀ ಆಯುಷ್ಯದಲ್ಲಿ ಫಲದ ಅಪೇಕ್ಷೆಯಿಲ್ಲದೆ, ಯಾವಾಗಲೂ ಸತ್ಕರ್ಮಗಳನ್ನು ಮಾಡುತ್ತ ಹೋಗುವದೇ ನಮ್ಮ ಉಚ್ಚಧ್ಯೇಯವು.

ಇದರಿಂದರೇ ನಮಗೆ ಬೇಕಾದಷ್ಟು ಘೋರವಾದ ಗಂಡಾಂತರಗಳೂ ಬಂದರೂ, ಮರಣ ಪ್ರಾಯವಾದ ದುಃಖಗಳೂ ಒದಗಿದರೂ ಅದರೊಳಗಿಂದ ಪಾರಾಗಿ ಕಟ್ಟ ಕಡೆಗೆ ಪರಮ ಪವಿತ್ರವಾದ ಉತ್ಕರ್ಷ ಮಂದಿರದಲ್ಲಿಯೇ ವಾಸಮಾಡುವೆವು. ಕಾಲಿದಾಸ ಪಂತರು, ಮರಣ ಪ್ರಾಯವಾದ ದುಃಖಗಳು ಒದಗಿದರೂ ಕೂಡ ತಿಲಮಾತ್ರವಾದರೂ ಎದೆಗುಂದದೆ ತಮ್ಮ ಸತ್ಕರ್ಮದಲ್ಲಿ ರತಿಮಾತ್ರವಾದರೂ ಹೆಚ್ಚು ಕಡಿಮೆ ಮಾಡಲಿಲ್ಲ. ಇಡೀ ಆಯುಷ್ಯವು ದುಃಖದಲ್ಲಿ ಹೋದರೂ, ಅಂತ್ಯಕಾಲಕ್ಕಾದರೂ, ಅವರ ಆತ್ಮಕ್ಕೆ ತುಸು, ಶಾಂತಿಯು ದೊರೆಯಿತು. ಇವೆಲ್ಲ ಮೊದಲಿನ ಹುಚ್ಚು ಕಲ್ಪನೆಗಳನ್ನು ಬಿಟ್ಟು ಕರ್ಮಗಳೆಂಬ ರಾಕ್ಷಸರಿಗೆ ಅಂಜದೆ, ತಮ್ಮ ಕರ್ತವ್ಯಗಳನ್ನು ತಪ್ಪದೆ ಕೊನೆಗಾಣಿಸುತ್ತ ಬಂದ ಫಲವಲ್ಲವೇ?



# ಚಳಿಗಾಲದ ಚಂದವಾದ ನೋಟವು.

ಅಹಾ! ಚಳಿಗಾಲದ ಚಂದವಾದ ನೋಟದ ವರ್ಣನೆಯನು ಎಷ್ಟೆಂತು ಮಾಡಲಿ, ಎಷ್ಟುಮಾಡಿದರೂ ತೀರದು. ಚಳಿಗಾಲವು ಬಹು ನಿರ್ಮಲವಾದ ಕಾಲವು. ನೀಲವರ್ಣದ ಆಕಾಶವನ್ನು ಶಾಂತ ಮೂರ್ತಿಯಾದ ಸೋಮನಿಂದ ದೊರಕುವ ಬಡವರ ಭಾಗ್ಯವಾದ ಬೆಳದಿಂಗಳನ್ನು, ಭಾಸ್ಕರನ ಭಂಗಾರದಂಥ ಬಿಸಲವನ್ನು ನೋಡಿ ಮನಸ್ಸಿಗೆ ಅತೀ ಉಲ್ಹಾಸವಾಗಿ ಕೆಲಸಮಾಡಲಿಕ್ಕೆ ಒಳ್ಳೇ ಹುರುಪು ಬರುತ್ತದೆ. ಈ ಸಮಯಕ್ಕೆ ಭೂಮಾತೆಯು, ತಾಯಿಯು ಮಕ್ಕಳಿಗೆ ಆಶೀರ್ವಾದಿಸುವಂತೆ ನಮ್ಮೆಲ್ಲರಿಗೆ ನಾವು ಮಾಡಿದ ಸೇವೆಗಾಗಿ ನಮಗೆ ಆನಂದದಿಂದ ಆಶೀರ್ವಾದಿಸುವಳು. ಈ ವೇಳೆ ಭೂಮಾತೆಯ ವೈಭವವನ್ನು ನೋಡಲಿಕ್ಕೆ ನಮ್ಮ ನೇತ್ರಗಳು ಸಾಲವು ನಮ್ಮ ಎಷ್ಟೋ ಬಾಂಧವರು ಮಾತೆಯು ಕೊಟ್ಟ ಫಲದ ರಕ್ಷಣೆಯ ಸಲುವಾಗಿ ಹಗಲೂ ಇರುಳೂ ಆನಂದದಿಂದ ಅಲ್ಲಿಯೇ ವಾಸಿಸುವರು. ಅಲ್ಲಿ ದನಕರುಗಳು ಸಂತೋಷದಿಂದ ಮಾತೆಯ ಅಭಿನಂದನೆಯನ್ನು ಮಾಡುತ್ತ ಒಳ್ಳೇ ಮಮತೆಯಿಂದಾ ಮೇಯುವದನ್ನು ಮತ್ತು ಅಲ್ಲಿಯೇ ಸಮೀಪದಲ್ಲಿದ್ದ ಹಳ್ಳದ ನೀರವನ್ನಾಗಲೀ ಇಲ್ಲವೆ ನದಿಯ ನಿರ್ಮಲವಾದ ನೀರವನ್ನಾಗಲೀ ಕುಡಿಯುವದನ್ನು ನೋಡಿ ನಾವು ಕೆಲವು ವೇಳೆ ಗತಕಾಲದ ದುಃಖವನ್ನು ಕೂಡಾ ಮರೆತು ಆನಂದಪಡುವೆವು ಆ ರಮ್ಯವಾದ ನೋಟವನ್ನು ಬಿಟ್ಟು, ಬರುವದಾಗುವದಿಲ್ಲ. ಮಾತೇ ನಿನ್ನ ಧನ್ಯವಾದವನ್ನು ಎಷ್ಟು ಮಾಡಿದರು ತೀರದು. ಮೇಘರಾಜನು ನಿನ್ನ ಸೇವೆಯನ್ನು ಮಾಡಿ, ವಿಶ್ರಾಂತಿಗಾಗಿ

ತನ್ನ ಸ್ಥಳಕ್ಕೆ ಹೊರಟು ಹೋಗಿರುತ್ತಾನೆ. ಭಾರತಕ್ಕೆ ಭೂಷಣ ವಾದ ಸಕಲರಿಗೂ ಶ್ರೇಷ್ಠವಾದ ಮತ್ತು ಮಂಗಲದಾಯಕವಾದ ದೀವಳಿಗೆಯ ಹಬ್ಬದ ಆಗಮನವಾದರೂ ಇದೇ ಸಮಯಕ್ಕೆ ಆಗು ವದು. ಈ ಮಂಗಲಮಯವಾದ ಹಬ್ಬದ ಆದರ ಸತ್ಕಾರವನ್ನು ಮಾಡುವದಕಸಲುವಾಗಿ ಸಕಲರೂ ಬಳ್ಳೇ ಸಂಭ್ರಮದಿಂದ ಸಿದ್ಧರಾ ಗುತ್ತಾರೆ ಎಲ್ಲರಿಗೂ ಆನಂದವನ್ನು ಕೊಡುವ, ಈ ಹಬ್ಬವು ಚಳಿಗಾ ಲದ ಪ್ರಾರಂಭಕ್ಕೆ ಬರುವದು. ಈ ಹಬ್ಬವು ಎಲ್ಲ ಉದ್ಯೋಗವಂತ ರಿಗೆ ವಿಶ್ರಾಂತಿಯನ್ನು ಕೊಡುವ ಮಧ್ಯಮ ಕಾಲವು

ವಿದ್ಯಾರ್ಥಿಗಳು ಅಭ್ಯಾಸಮಾಡಿ ದಣಿದು ಈ ಹಬ್ಬದಲ್ಲಿ ವಿಶ್ರಾಂತಿಯನ್ನು ತೆಗೆದುಕೊಂಡು, ಹಿಡಿದ ಕೆಲಸವನ್ನು ಪೂರ್ಣ ಮಾಡಲಿಕ್ಕೆ ಕಂಕಣಬದ್ಧರಾಗುತ್ತಾರೆ. ವ್ಯಾಪಾರಸ್ಥರು ಅವ್ಯಾ ಹತವಾಗಿ ದುಡಿದು ದುಡಿದು ಆನಂದದಿಂದ ತಮ್ಮ ಲೆಖ್ಖಪತ್ರ ಗಳನ್ನು ಸಾಫಮಾಡಿಕೊಂಡು, ಪವಿತ್ರವಾದ ಲಕ್ಷ್ಮೀ ಪೂಜನವನ್ನು ತೀರಿಸಿಕೊಂಡು ಇಮ್ಮಡಿ ಹುರುಪಿನಿಂದ ತಮ್ಮ ಉದ್ಯೋಗ ವನ್ನು ಸುರುವು ಮಾಡಿಬಿಡುವರು. ಕೃಷಿಕರ್ಮದವರು, ಮಳೆ ಗಾಲದಲ್ಲಿ ದುಡಿದು, ದುಡಿದು ಈ ಆನಂದಮಯವಾದ ಹಬ್ಬದಲ್ಲಿ ತುಸು ವಿಶ್ರಾಂತಿಗೆಯ್ದು, ಭೂಮಾತೆಯ ಸೇವೆಯನ್ನು ಮಾಡ ಲಿಕ್ಕೆ ಟೊಂಕಕಟ್ಟುವರು. ದೀವಳಿಗೆಯ ಹಬ್ಬವೆಂದರೆ, ಎಲ್ಲ ಉದ್ಯೋಗಸ್ಥರಿಗೆ ಉತ್ತೇಜನವನ್ನೀ ಕೊಡುವ ಆಕಾಶವಾಣಿಯು. ಚಳಿಗಾಲವೆಂದರೆ, ಎಲ್ಲ ಉದ್ಯೋಗವಂತರಿಗೆ ಉತ್ಕರ್ಷದ ರಾಜ ಮಾರ್ಗವನ್ನು ತೋರಿಸುವ ಕಾಲವು.

ಪ್ರವಾಸಕ್ಕೆ ಚಳಿಗಾಲವು ಸುಖದಾಯಕವಾದದ್ದು. ಈ ಕಾಲದಲ್ಲಿ ಹಗಲು ಸಣ್ಣದೂ, ರಾತ್ರಿಯು ದೊಡ್ಡದಾಗು ವದು. ಆದ್ದರಿಂದ ಉದ್ಯೋಗಿಗಳು ದೇವರು ಇನ್ನೊಂದು ೧-೨

ಕಾಸು ಹಗಲನ್ನು ದೊಡ್ಡದಾಗಿ ಮಾಡಿದ್ದರೆ, ನೆಟ್ಟಗಾಗುತ್ತಿತ್ತು ಎಂದು ಉದ್ಗಾರ ತೆಗೆಯುವರು. ಈ ಚಳಿಗಾಲದ ದಿವಸಗಳಿಗೆ "ಮಾಳಿಗೇ ಹೊತ್ತು" ಅನ್ನುವ ರೂಢಿಯು ನಮ್ಮಲ್ಲಿ ಬಿದ್ದಿರುವದು. ಈ ಕಾಲದೊಳಗೆ ನಾವು ಎಲ್ಲಿ ಬೇಕಾದಲ್ಲಿ ಪ್ರವಾಸ ಮಾಡಲಿ, ಇಲ್ಲ ಸೃಷ್ಟಿಸೌಂದರ್ಯವನ್ನು ನೋಡುವ ದೆಶೆಯಿಂದ ಹೋಗಲಿ, ಅಥವಾ ತೀರ್ಥ ಕ್ಷೇತ್ರಗಳಿಗೆ ಹೋಗಲಿ ಹೋದರೆ ನಾವು ಅಲ್ಲಿ ನೋಡುವ ರಮಣೀಯವಾದ ನೋಟವು ಅತೀ ಮನೋಹರವಾಗಿಯೂ, ಸುಖದಾಯಕವಾಗಿಯೂ ತೋರುವದು. ಎಲ್ಲ ಕಾಲದೊಳಗೆ ಚಳಿಗಾಲವು ಸುಖದಾಯಕವೂ, ಆರೋಗ್ಯದಾಯಕವೂ, ವೈಭವ ಸಂಪನ್ನವೂ ಮತ್ತು ಅತೀ ಮನೋಹರವೂ ಆಗಿರುವದು. ಆದ್ದರಿಂದ ಈ ಕಾಲದಲ್ಲಿ ನೋಡುವ ನೋಟಕ್ಕೆ ಚಂದವಾದ ನೋಟವೆಂದರೆ, ಅದು ಅತಿಶಯೋಕ್ತಿಯಾಗಲಾರದು.



# ಆಲಸ್ಯರಾಯನ ಆಳುವಿಕೆ.

ಈ ಜಗತ್ತಿನಲ್ಲಿ ಯಾವ ಮನುಷ್ಯರು ಆಲಸ್ಯರಾಯನ ಆಳುವಿಕೆಯಲ್ಲಿ ಶಿಕ್ಕಿರುವರೋ ಆ ಮನುಷ್ಯರ ದೈನ್ಯಾವಸ್ಥೆಯನ್ನು ಎಷ್ಟೆಂದು ಹೇಳಲಿ ಅವರು ಮಾಡುವ ಯಾವದೂ ಕಾರ್ಯವು ಕೊನೆಗಾಣುವದಿಲ್ಲ. ಅಪೂರ್ಣವಾಗಿಯೇ ಉಳಿಯುವವು. ಈ ಆಲಸ್ಯರಾಯನು ತನ್ನ ಅಮಲವನ್ನು ಜನರ ಮೇಲೆ ಕೂಡಲೆ ಕೂಡ್ರಿಸುವನು. ಇವನ ರಾಜ್ಯದಲ್ಲಿರುವವರಿಗೆ ತಿಲಮಾತ್ರವಾದರೂ ಸೌಖ್ಯವಾಗುವದಿಲ್ಲ. ಇವನು ಮಹಾನೀಚನು ಯಾವಾಗಲೂ ಕೈಕೊಂಡಿರುವ ಅಥವಾ ಕೈಕೊಳ್ಳುವ ಕಾರ್ಯಕ್ಕೆ ನಾನಾ ತೆರದ ವಿಘ್ನಗಳನ್ನು ತಂದು ಅದನ್ನು ನಿರ್ಮೂಲ ಮಾಡುವದಕ್ಕೆ ಕಂಕಣಬದ್ಧನಾಗಿರುತ್ತಾನೆ. ಇದು ಅವನ ಆದ್ಯ ಕರ್ತವ್ಯವಿರುತ್ತದೆ. ಇವನ ಸಂಗತಿಯಿಂದ ಎಷ್ಟೋ ಜನರು ಮನೆ ಮಾರುಗಳನ್ನು ಮತ್ತು ರಾಜರು ತಮ್ಮ ರಾಜ್ಯವನ್ನು ಕೂಡಾ ಕಳೆದುಕೊಳ್ಳುವರು. ಇವನ ಆಳುವಿಕೆಯು ಮರಣದಕಿಂತಲೂ ಭಯಂಕರವಾದಂಥಾದ್ದು ಇವನಿಗೆ ತಿಲಮಾತ್ರವಾದರೂ ಕನಿಕರವಿಲ್ಲ. ಅದಷ್ಟು ಯಾವಾಗಲೂ ತನ್ನ ರಾಜ್ಯವನ್ನು ಬೆಳಿಸುವ ಉದ್ಯೋಗದಲ್ಲಿಯೇ ತೊಡಗಿರುತ್ತಾನೆ. ಆದರೆ ನಮಗೆ ಸೌಖ್ಯ ಶಾಂತಿಗಳುಂಟಾಗಬೇಕಾದರೆ, ಇವನ ರಾಜ್ಯವನ್ನು ಹಾಳುಮಾಡಿದ, ಹೊರತು ನಮಗೆ ಸುಖವಾಗುವದಿಲ್ಲ. 'ಒಂದು ವೇಳೆ ಹಾಗೇ ಕುಳಿತುಬಿಟ್ಟರೆ, ಅವನು ನಮ್ಮನ್ನು ನೋಡು ನೋಡುವದರೊಳಗಾಗಿಯೇ ರಸಾತಳಕ್ಕೆ ಮುಟ್ಟುವನು. ಆದ್ದರಿಂದ ಇವನ ಆಳು

ವಿಕೆಯು ನಮ್ಮ ಮೇಲೆ ಬೇಡ ಇವನ ದರ್ಶನವೂ ಕೂಡಾಬೇಡ ಈ ನೀಚನ ರಾಜ್ಯವನ್ನು ಹಾಳು ಮಾಡಬೇಕಾದರೆ, ನಮಗಾದರೂ ಒಬ್ಬ ರಾಜನ ಸಹಾಯವೇಬೇಕು. ಆದರ ಹೊರತು ಇವನು ಹಣ್ಣಿಗೆ ಬರಲಾರನು

ಆದ್ದರಿಂದ ವಾಚಕರೇ ನಮ್ಮ ಮನೋಥವು ಕೈಗೂಡ ಬೇಕಾದರೆ, ನಾವು ಉದ್ಯೋಗರಾಯನ ಗೆಳೆತನವನ್ನು ಮಾಡಲಿಕ್ಕೇಬೇಕು. ಅವನನ್ನು ಜೀವದ ಗೆಳೆಯನನ್ನಾಗಿ ಮಾಡಿಕೊಳ್ಳಲಿಕ್ಕೆಬೇಕು. ಇಷ್ಟೇಅಲ್ಲ ಅವನ ಮಂತ್ರಿಯಾದ ಚಟುವಟಿಕೆರಾಯನ ಮಿತ್ರತ್ವವನ್ನಾದರೂ ಬೆಳಿಸತಕ್ಕದ್ದು

ಈ ಉಭಯತರ ಸಹಾಯವನ್ನು ತಕ್ಕೊಂಡು ಆ ನೀಚನಾದ ಆಲಸ್ಯರಾಯನ ಸಂಗಡ ಯುದ್ಧಕ್ಕೆ ನಿಂತರೆ, ನಿಶ್ಚಯವಾಗಿ ಅವನು ಸೋತು ಪಲಾಯನ ಮಾಡುವನು. ಕಟ್ಟಕಡೆಗೆ ಯುದ್ಧದಲ್ಲಿ ವಿಜಯ ಲಕ್ಷ್ಮಿಯು ನಮ್ಮ ಕೊರಳಿಗೇ ಹೂ ಮಾಲೆಯನ್ನು ಹಾಕುವಳು.

ಆ ಮೇಲೆ ಈ ಉದ್ಯೋಗರಾಯನ ರಾಜ್ಯದಲ್ಲಿ, ಸುಖ ಶಾಂತಿಗಳಿಗೆ ಕೊರತೆಯೇ ಇಲ್ಲ. ನಾವು ಯಾವಾಗಲೂ ಇವನ ರಾಜ್ಯದಲ್ಲಿ ಕೈಕೊಂಡಿರುವ ಕಾರ್ಯಗಳನ್ನು ಮನಮುಟ್ಟಿ ಮಾಡುವೆವು ಯಾಕಂದರೆ ನಮ್ಮ ಕಾರ್ಯಕ್ಕೆ ವಿಘ್ನಗಳನ್ನು ತರುವವರು ಯಾರೂ ಇರುವದಿಲ್ಲ. ಆದ್ದರಿಂದ ನಾವು ಹಿಡಿದ ಪ್ರತಿಯೊಂದು ಕಾರ್ಯವು ಉತ್ತಮ ರೀತಿಯಿಂದ ಕೊನೆಗಾಣುವದು ನಮ್ಮ ಆಯುಷ್ಯವು ಆನಂದಮಯವಾಗುವದು. ಇಷ್ಟೆಲ್ಲ ಸುಖ ಸಾಧನೆಗಳು ಈತನ ರಾಜ್ಯದಲ್ಲಿದ್ದ ಮೇಲೆ ನಮ್ಮ ಆನಂದಕ್ಕೆ ಎಣಿಯೇ ಇಲ್ಲ. ನಾವು ನೋಡು ನೋಡುವದರೊಳಗಾಗಿ ಪ್ರತಿ

ಯೊಂದು ಕಾರ್ಯವನ್ನು ಒಳ್ಳೇ ಹುರುಪಿನಿಂದ ಕೊನೆಗಾಣಿಸುತ್ತ ಪ್ರತಿಯೊಂದರಲ್ಲಿಯೂ ಯಶಸ್ಸನ್ನು ದೊರಕಿಸುತ್ತ ಎಲ್ಲಿ ಬೇಕಾದಲ್ಲಿ ನಮ್ಮ ಉದ್ಯೋಗರಾಯನ ವಿಜಯ ಧ್ವಜವನ್ನು ಅತಿ ಸಂಭ್ರಮದಿಂದ ಮೆರಿಸುತ್ತ ಚಿರಕಾಲ ಸುಖವನ್ನು ಕೊಡುವ ಯಶೋಮಂದಿರಕ್ಕೆ ಹೋಗಿ, ಅಲ್ಲಿಯೇ ಸಂತೋಷದಿಂದ ವಾಸ ಮಾಡುವೆವು.

ವಾಚಕರೇ ಇದೆಲ್ಲ ಆ ನೀಚನಾದ ಆಲಸ್ಯರಾಯನ ಮತ್ತು ಅವನ ರಾಜ್ಯವನ್ನು ನಿರ್ಮೂಲ ಮಾಡಿದ ಫಲವಲ್ಲವೇ?

# ವಿಮಲೆಯ ವೀರತನ.

ಯಶವಂತಪುರವೆಂಬಲ್ಲಿ ಶ್ರೀಧರಪಂತರೆಂಬ ದೈವುಳ್ಳ ಗೃಹಸ್ಥ ರು ವಾಸಿಸುತ್ತಿದ್ದರು. ಅವರಿಗೆ ವಾಸುದೇವ, ಮಾಧವ, ಗೋವಿಂದ ಎಂಬ ಮೂವರು ಗಂಡುಮಕ್ಕಳೂ, ಮತ್ತು ವಿಮಲೆಯೆಂಬ ಒಬ್ಬ ಹೆಣ್ಣು ಮಗಳು, ಹೀಗೆ ನಾಲ್ಕುಮಂದಿ ಮಕ್ಕಳು ಇದ್ದರು. ಆ ನಾಲ್ಕು ಮಕ್ಕಳು ಕೇವಲ ನಾಲ್ಕು ರತ್ನಗಳಂತೆಯೇ ಶೋಭಿಸು ತ್ತಿದ್ದರು ಇದು ಶ್ರೀಧರಪಂತರ ಪುಣ್ಯವೇ ಸರಿ.

ಪಂತರು ಸದ್ಗುಣಗಳ ತವರಮನೆಯಾಗಿದ್ದರು. ಅವರಂತೆ ಯೇ ಅವರ ಪತ್ನಿಯಾದ ರಾಧಾಬಾಯಿಯವರಾದರೂ, ಸದ್ಗುಣಿ ಗಳಾಗಿದ್ದರು. ವಾಚಕರೇ! ಸಂಸಾರವೆಂಬ ರಥದಲ್ಲಿ, ಇವರಂತೆಯೇ ಸದ್ಗುಣಿಗಳಾದ ನರರತ್ನಗಳಿದ್ದ ಮೇಲೆ ಆ ರಥಕ್ಕೆ ಎಂದಾದರೂ ಅಪಾ ಯತಗಲುವದೇ? ಎಂದೂ ಇಲ್ಲ. ಆ ರಥವು ಉಗಿಬಂಡಿಯು ವೇಳೆಗೆ ಸರಿಯಾಗಿ ಏನೂ ಆತಂಕವಿಲ್ಲದೆ, ಹೋಗುವಂತೆ ಸುಸೂತ್ರವಾಗಿ ಉತ್ಕರ್ಷ ಮಂದಿರಕ್ಕೆ ಹೋಗುವದು. ಈ ಸದ್ಗುಣಿಯಾದ ಕುಟುಂ ಬವು ಕೆಲವು ವರ್ಷಗಳನ್ನು ಶಾಂತಿ ಸಾಮ್ರಾಜ್ಯದಲ್ಲಿ ಕಳೆಯು ತ್ತಿರಲು ಇತ್ತ ವಿಮಲೆಯು ದೊಡ್ಡವಳಾಗಿ ವಿವಾಹಕ್ಕೆ ಯೋಗ್ಯ ಳಾದಳು. ಶ್ರೀಧರಪಂತರ ಮಕ್ಕಳಲ್ಲಿ ಇವಳು ಎಲ್ಲರಿಗಿಂತಲೂ ಚಿಕ್ಕವಳು. ಪಂತರು ಈಕೆಗೆ ಅನುರೂಪವಾದ ವರನನ್ನು ಹುಡು ಕಲಿಕ್ಕೆ ಬಹಳ ಶ್ರಮಪಟ್ಟರು ಎಲ್ಲೆಲ್ಲಿಯೂ ವಿಮಲೆಗೆ ತಕ್ಕ ವರನು ಸಿಗಲೊಲ್ಲನು. ಈಕೆಯ ಅಣ್ಣನಾದ ವಾಸುದೇವರಾಯನು ಮಾತ್ರ ಈಕೆಗೆ ತಕ್ಕವರನನ್ನು ಆರಿಸಿತಂದನು. ಈ ವರನು ವಿಮಲೆಯ ಮನಸ್ಸಿಗೆ ಬಂದನು ಇವನ ಹೆಸರು ವಿಶ್ವನಾಥನು

ವೈಭವ ನಗರದ ದೊಡ್ಡ ಶ್ರೀಮಂತರ ಮಗನು. ಇವನು ಒಬ್ಬನೇ ಇದ್ದದರಿಂದ ತಂದೆ ತಾಯಿಗಳು ಇವನನ್ನು ಉತ್ತಮ ರೀತಿಯಿಂದ ಜೋಪಾನ ಮಾಡಿ, ವಿದ್ಯಾವಂತನನ್ನಾಗಿ ಮಾಡಿ ಬಿಟ್ಟರು.

ವಾಸುದೇವನು:— ತಂದೆಗೆ, ತಂದೆಯವರೇ ವಿಮಲೆಗೆ ತಕ್ಕ ವರವನ್ನು ಆರಿಸಿ ತಂದಿರುವೆನು. ನೀವು ಇನ್ನು ಮೇಲೆ ಏನೂ ಚಿಂತೆಯನ್ನು ಮಾಡುವ ಕಾರಣವಿಲ್ಲ ಬೇಗನೇ ವಿಮಲೆಯ ವಿವಾಹವನ್ನು ಮುಗಿಸಿ ಬಿಡೋಣ. ಅಂದರೆ ಒಮ್ಮೆ ಪಾರಾದಂತಾಯಿತು ಎಂದು ಅಂದನು

ಶ್ರೀಧರಪಂತರು:— ಮಗನೇ ನಿಮಗೂ, ಆಕೆಗೂ ವರನು ಮನಸ್ಸಿಗೆ ಬಂದಿದ್ದರೆ ತೀರಿತು, ನನ್ನದೇನೂ ಅಡ್ಡಿ ಇಲ್ಲ. ಈಗ ಸದ್ಯಕ್ಕೆ ಕಾರ್ತೀಕ ಮಾಸವು ನಡೆದಿರುತ್ತದೆ. ಇದು ಮುಗಿದಾಕ್ಷಣವೇ ಮಾರ್ಗಶೀರ್ಷದಲ್ಲಿ ಉತ್ತಮ ಮುಹೂರ್ತವನ್ನು ನೋಡಿ, ವಿಮಲಾ ತಾಯಿಯ ವಿವಾಹವನ್ನು ಜರುಗಿಸಿಬಿಡೋಣ ಎಂದು, ಪಂತರು ಮಗನಿಗೆ ಅಂದರು. ಅದಕ್ಕೆ ಮಗನು ಏನೂ ಅಡ್ಡಿ ಇಲ್ಲ ಆದರೆ ಖರ್ಚಿನ ಬಗ್ಗೆ ಮಾತ್ರ ತಾತಾ ನೀವು ಹಿಂದಿನ ಹುಚ್ಚು ಕಲ್ಪನೆಗಳನ್ನು ಬಿಟ್ಟುಬಿಡಿರಿ " ಕತ್ತೆಗೆ ಹೂರಣವನ್ನು ಮೆಯಿಸಿದಂತೆ " ಅಳತೆಗೆಟ್ಟು ಖರ್ಚು ಮಾಡಬೇಡಿರಿ. ಎಷ್ಟು ಮಾಡತಕ್ಕದ್ದು, ಈಗಿನ ಪರಿಸ್ಥಿತಿಗೆ ವಿಹಿತವೋ ಅಷ್ಟೇ ಮಾಡತಕ್ಕದ್ದು. ಪಂತರು ಮಗನಿಗೆ ವಾಸುದೇವಾ, ನಿನಗೆ ಎಲ್ಲವೂ ತಿಳಿಯುತ್ತದೆ. ಅಂದ ಬಳಿಕ ವಿಮಲಾ ತಾಯಿಯ ವಿವಾಹವನ್ನು ಯೋಗ್ಯ ಖರ್ಚಿನೊಳಗೆ ಮಾಡುವ ಯಾವತ್ತೂ ಭಾರವು ನಿನ್ನ ಮೇಲೆಯೇ ಅದೆ. ನಾನೇನು ಮಾಡತಕ್ಕವನು. ನೀವೇನಾದರೂ ತಪ್ಪಿದಲ್ಲಿ ಆ ತಪ್ಪನ್ನಷ್ಟು ತಿದ್ದಿ ಕೊಡುವ ಕೆಲಸವು ನನ್ನದಾಗಿದೆ.

ವಾಸುದೇವಃ— ಪಿತನೇ, ನಿನ್ನ ಅಪ್ಪಣೆಯು ನನಗೆ ಶಿರಸಾ ಮಾನ್ಯವು. ನೀನು ಎಳ್ಳಷ್ಟಾದರೂ ವಿಮಲೆಯ ವಿವಾಹದ ವಿಷಯಕ್ಕೆ ಏನೂ ಕಾಳಜೀ ಮಾಡಬೇಡ ನಾವು ಯಾವತ್ತೂ ಕಾರ್ಯವನ್ನು ಉತ್ತಮ ರೀತಿಯಿಂದ ಕೊನೆಗಾಣಿಸುವೆವು.

ವಾಚಕರೇ ಇನ್ನುಮೇಲೆ ವೈಭವ ನಗರದ ಸಮಾಚಾರವೇನು ನೋಡುವಾ. ಆನಂದಮಯವಾಗಿರುವದು ವಿಶ್ವನಾಥನ ತಂದೆ ತಾಯಿಗಳಿಗೂ, ಬಂಧು ಬಳಗದವರಿಗೂ, ವಿಮಲೆಯಂಥ ಸದ್ಗುಣ ಸಂಪನ್ನಳಾದ ವಧುವು ದೊರೆತ ಬಗ್ಗೆ ಅತ್ಯಾನಂದವಾಗಿದೆ. ಆಗದೆ ಏನು ಮಾಡೀತು ರತ್ನಕ್ಕೆ ಕುಂದಣವನ್ನು ಕೂಡಿಸಿದಂತಾಗಿದೆ. ಇರಲಿ. ಕಾರ್ತಿಕ ಮಾಸವು ಮುಗಿದು ಮಾರ್ಗಶೀರ್ಷಕ್ಕೆ ಆರಂಭವಾಯಿತು. ವಿವಾಹದ ದಿವಸಗಳು ಅತೀ ಸಮೀಪಿಸಿದವು ವಾಸುದೇವನು ತಂದೆಗೆ ಹೇಳಿದ ಪ್ರಕಾರ ಯೋಗ್ಯ ಖರ್ಚಿನಲ್ಲಿ ವಿವಾಹವನ್ನು ಮುಗಿಸಲಿಕ್ಕೆ ತತ್ಪರನಾದನು. ಮುಂದೆ ಕೆಲವು ದಿವಸಗಳಲ್ಲಿಯೇ ವೈಭವ ನಗರದಲ್ಲಿ ವಿಮಲೆಯ ವಿವಾಹವೂ ಸಾಂಗವಾಯಿತು. ಸಕಲರಿಗೂ ಸಂತೋಷವಾಯಿತು. ವಿವಾಹವಾದ ಎರಡು ತಿಂಗಳುಗಳ ತರುವಾಯ ವಿಮಲೆಗೆ ಅತ್ತೆಯ ಮನೆಯವರು ಕರೆಯಲು ಬಂದರು ರಾಧಾಬಾಯಿಯವರು ಮಗಳು ಇನ್ನು ಮೇಲೆ ಅತ್ತೆಯ ಮನೆಗೆ ಹೋಗತಕ್ಕವಳೆಂದು ತಿಳಿದು, ನಾನಾತರದ ಫರಾಳದ ಪದಾರ್ಥಗಳನ್ನು ಮಾಡಿದಳು. ಇನ್ನು ಬೆಳಗಿನ ೫ ಘಂಟೆಯ ರೇಲಿಗೆ ವಿಮಲೆಯು ಹೋಗತಕ್ಕವಳು. ಅಂತಃಕರಣವೆಂದರೆ ಹೆಚ್ಚಿನದು. ತಾಯಿಗೆ ಅನಿವಾರ ದುಃಖವಾಗ ಹತ್ತಿತು "ದೇವಾ ಇಷ್ಟು ದಿವಸಗಳ ವರೆಗೆ ನನ್ನ ಹತ್ತರಿದ್ದ ಪುತ್ರನಂಥ ಮಗಳು, ಈ ಹೊತ್ತು ಮನೆಯನ್ನು ಬಿಟ್ಟು ಹೊರಟಳು ವಿಮಲೇ ನಾನು ಹ್ಯಾಗೆ ಮಾಡಲಿ ಎಂದು ದುಃಖಮಾಡಹತ್ತಿದಳು.

ವಿಮಲೆಯು:— ಅವ್ವಾ ಶೋಕಿಸಬೇಡ ನಮ್ಮ ಹೆಣ್ಣು ಮಕ್ಕಳ ಜನ್ಮವು ಅತ್ತೆಯ ಮನೆಗೆ ಹೋಗಲಿಕ್ಕೇಬೇಕು. ತವರ ಮನೆಯಲ್ಲಿ ನಿಂತರೆ, ಹ್ಯಾಗಾದೀತು. ನಡುನಡುವೆ ಯಾವಾಗ ಲಾದರೂ ಒಮ್ಮೆ ನಿನ್ನನ್ನು ನನ್ನ ಮನೆಗೆ ಕರೆಸುವೆನು. ಮತ್ತು ನಾನಾದರೂ, ನೀವು ದೀವಳಿಗೆಗೆ, ನಾಗರಪಂಚಮಿಗೆ ಕರೆಯ ಲಿಕ್ಕೆ ಬಂದಾಗ ಸಂತೋಷದಿಂದ ಬರುವೆನು. ಶೋಕಿಸಬೇಡ ಸುಮ್ಮನಿರು ಎಂದು ಸಮಾಧಾನ ಹೇಳಹತ್ತಿದಳು.

ವಾಚಕರೇ ಈ ಸಂಗತಿಯೇನು ರಾಧಾಬಾಯಿಯವರಿಗೆ ಗೊತ್ತಿಲ್ಲವೇ? ಆದರೂ ಅಂತಃಕರಣದ ವಿಷಯವೇ ಬೇರೆ. ಗೊತ್ತಿದ್ದರೂ ಸಹ ಎಲ್ಲರಿಗೂ ಹೀಗಾಗುವದು ಸ್ವಾಭಾವಿಕವೇ ಸರಿ. ೫ ಘಂಟೆಯ ರೇಲಿಗೆ ವಿಮಲೆಯು ವೈಭವ ನಗರಕ್ಕೆ ಹೋದಳು. ಹೋದ ಬಳಿಕ ಮರುದಿವಸ ಸುಖರೂಪದಿಂದ ತಲ್ಪಿದ ಬಗ್ಗೆ ತಂದೆಗೆ ಒಂದು ಪತ್ರವನ್ನು ಹಾಕಿ ಬಿಟ್ಟಳು.

---

## ೫ನೇ ಪ್ರಕರಣ.

ಇಂದಿನಿಂದ ವಿಮಲೆಯ ಸಂಸಾರಕ್ಕೆ ಪ್ರಾರಂಭವಾಯಿತು. ಈಕೆಯು ಚಿಕ್ಕವಳಿರುವಾಗಲೇ, ರಾಧಾಬಾಯಿಯವರ ಕಡೆ ಯಿಂದ ಗೃಹಶಿಕ್ಷಣವನ್ನು ಚನ್ನಾಗಿ ಪಡೆದಿದ್ದಳು. ಅಂದಬಳಿಕ ಇಲ್ಲಿ ಈಕೆಗೆ ಯಾವ ತರದ ತ್ರಾಸವು ಆಗುವ ಕಾರಣವೇ ಇಲ್ಲ. ವಿಶ್ವನಾಥ ವಿಮಲೆಯರ ಸಂಸಾರ ರಥವು ಉತ್ತಮ ರೀತಿಯಿಂದ ತನ್ನ ದಾರಿಯನ್ನು ಆಕ್ರಮಿಸಹತ್ತಿತು. ವಿಶ್ವನಾಥಪಂತರ ಮನೆ ಯವರು ಶ್ರೀಮಂತರಿದ್ದರೂ ಸಹ ಮನೆಯ ಕೆಲಸವನ್ನು ಸ್ವಂತವೇ

ಮಾಡುತ್ತಿದ್ದರು. ನಿಷ್ಕಾರಣವಾಗಿ ಎಂದೂ ಖರ್ಚು ಮಾಡುತ್ತಿದ್ದಿಲ್ಲ ವಿಮಲೆಯು ಅತೀ ಶೂರಳೂ, ಧೈರ್ಯವುಳ್ಳವಳೂ ಮಾತಿನಲ್ಲಿ ಅತೀ ಜಾಣಳೂ ಇದ್ದಳು. ಇವಳು ಸುಖದಿಂದ ಕಾಲಕಳೆಯುವಾಗ, ಒಂದಾನೊಂದು ದಿವಸ ತನ್ನ ಸಖಿಯ ಸಂಗಡ ಅಲ್ಲಿಯೇ ಊರ ಸಮೀಪಕ್ಕಿದ್ದ ತಮ್ಮ ತೋಟದ ಕಡೆಗೆ, ಸಹಜವಾಗಿ ಅಡ್ಡಾಡಲಿಕ್ಕೆ ಅಂತಾ ಹೋದಳು. ತೋಟವು ಸಮೀಪವೆಂದರೂ ನಗರದಿಂದ ೩ ಮೈಲು ಇತ್ತು. ಅಡ್ಡಾಡಿ ತೋಟದಿಂದ ಮನೆಯ ಕಡೆಗೆ, ಹೊರಡುವಾಗ ಅಲ್ಲಿಯೇ ರತ್ನಾಕರನು ಅಸ್ತಾಚಲವನ್ನು ಸೇರಿದನು. ರಾತ್ರಿಯಲ್ಲಿ ಬೆಳದಿಂಗಳು ಸಹ ಇಲ್ಲ. ಕೃಷ್ಣಪಕ್ಷದ ಚತುರ್ದಶಿಯ ದಿನವಿತ್ತು. ಆಕೆಯ ಗೆಳತಿಯು, ವಿಮಲೆಗೆ- ವಿಮಲಕ್ಕಾ ಕತ್ತಲೆಯು ಬೀಳಲಿಕ್ಕೆ ಆರಂಭವಾಯಿತು. ಇನ್ನು ಮೇಲೆ ಹ್ಯಾಗೆ ಊರ ಕಡೆಗೆ ಹೋಗುವದು. ಎಂದು ಚಿಂತಿಸಹತ್ತಿದಳು. ಆಗ ವಿಮಲೆಯು ಛೀ ಹುಚ್ಚೀ ಇಷ್ಟು ಯಾಕೆ ಭಯಪಡುತ್ತೀ ನಾವೇನು ಹೇಡಿಗಳೇ ಬೇಕಾದಂಥ ಗಂಡಾಂತರವು ಒದಗಿದರೂ ಅದರೊಳಗಿಂದ ನೋಡ ನೋಡುವದರೊಳಗಾಗಿಯೇ ಪಾರಾಗುತ್ತೇವೆ. ಏನೂ ಕಾಳಜೀ ಮಾಡಬೇಡ ತಿಳಿಯಿತೇ? ವಿಮಲೆಯು ಬಹು ಧೂರ್ತಳು ಹ್ಯಾಗಂದರೆ, ಪ್ರಸಂಗವು ಹ್ಯಾಗೆ ಬಂದೀತೆಂಬ ನಿಯಮವಿಲ್ಲೆಂದು ತಿಳಿದು, ಯಾವಾಗಲೂ ತನ್ನ ಹತ್ತರ ಒಂದು ಹದನಾದ, ಚೂರಿಯನ್ನು ಇಟ್ಟುಕೊಳ್ಳುತ್ತಿದ್ದಳು, ಅವರು ತೋಟಬಿಟ್ಟು ಅರ್ಧದಾರಿಯನ್ನು, ನಡೆದು ಬಂದಿದ್ದರು. ಆಗ ಒಂದು ತಾಸು ರಾತ್ರಿಯಾಗಿತ್ತು. ಆಷಾಢಮಾಸವಿದ್ದದರಿಂದ ಹೊಲಗಳಲ್ಲಿ ಯಾರೂ ಇದ್ದಿದ್ದಿಲ್ಲ. ಈ ವೇಳೆಗೆ ಊರಕಡೆಯಿಂದ ಇಬ್ಬರು ಗುಂಡರು ಬರುತ್ತಿದ್ದರು. ಅವರು ಇವರಿಗೆ ಗಂಟುಬಿದ್ದರು. ಆ ಗುಂಡರು ತಮ್ಮತಮ್ಮೊಳಗೆ ಇಬ್ಬರಿಗೂ ಬೇಟಿ ಶಿಕ್ಕಿತು. ಆನಂದ, ಆನಂದ,

ಎಂದು ಹಲ್ಲು ಕಿರಿಯಹತ್ತಿದರು. ಇದನ್ನು ಕೇಳಿಯಂತೂ ವಿಮಲೆಯ ಗೆಳತಿಯಾದ ಗೋದಾವರಿಯ ಕೈಕಾಲೇ ಹೋದವು. ಥರ ಥರ ನಡುಗ ಹತ್ತಿದಳು. ವಿಮಲಕ್ಕಾ ಇನ್ನೇನು ಮಾಡೋಣ ಹ್ಯಾಗೆ ಪಾರಾಗೋಣ ಎಂದು ಅಳಹತ್ತಿದಳು.

ವಿಮಲೆಯು ಗೆಳತಿಗೆ ಗೋದಾವರೀ ಸುಮ್ಮನಿರು ಹೀಗೆ ಅಂಜಿದರೆ ಹ್ಯಾಗಾದೀತು. ಏನಾದರೂ ಯುಕ್ತಿಯನ್ನು ಯೋಚಿಸಿ ಧೈರ್ಯದಿಂದ ಪಾರಾಗಲಿಕ್ಕೆಬೇಕು ನೀನು ಧೈರ್ಯತಾಳು ಎಂದು ಹೇಳಿದಳು ಅಷ್ಟರಲ್ಲಿ ಆ ಗುಂಡರು ಅವರ ಬಳಿಗೆ ಬಂದರು ಬಂದು "ಎಲೈ ಹೆಂಗೆಳಯರೇ ನಿಮ್ಮ ಕಡೆಗೆ ನಮ್ಮದೊಂದು ಕೆಲಸವಿರುವದು. ಅದನ್ನಷ್ಟು ಮಾಡಿಕೊಡುವಿರಾ! ನಾವು ದೂರ ದೇಶದವರು ಹೀಗೆಯ ಪ್ರವಾಸ ಮಾಡುತ್ತ, ಮಾಡುತ್ತ ಬಂದಿರುವೆವು ಮುಂದೆ ನಾವು ಗೋಕರ್ಣದ ಕಡೆಗೆ ಹೋಗತಕ್ಕವರು ಎಂದು ಹೇಳತೊಡಗಿದರು. ಆ ನೀಚರಾದ ಗಂಡರು, ಬೈರಾಗಿಯವೇಷವನ್ನು ತಾಳಿದ್ದರು. ಇವನ್ನೆಲ್ಲ ಕೇಳಿಕೊಂಡು ಧೈರ್ಯವತಿಯಾದ ವಿಮಲೆಯು ನಮ್ಮ ಕಡೆಗೆ ನಿಮ್ಮದೇನು ಕೆಲಸವು ಹೇಳಿರಿ. ಶಕ್ಯವಿದ್ದರೆ ಮಾಡುವೆವು ಎಂದಳು. ಆಗ ಆ ಗುಂಡರು ನಿಮಗೆ ಅಶಕ್ಯವೇ ಇಲ್ಲ. ಆ ಕೆಲಸವು ಯಾವದೆಂದರೆ, ನಿಮ್ಮಿಬ್ಬರಮೇಲೆ ನಾವಿಬ್ಬರೂ ಬಲಾತ್ಕಾರ ಮಾಡಬೇಕೆಂದು ಅನ್ನುತ್ತೇವೆ. ಅದಕ್ಕೆ ನೀವು ಒಪ್ಪಿಕೊಳ್ಳುವಿರಾ ಬೇಗನೆ ಉತ್ತರವನ್ನು ಕೊಡಿರಿ. ಒಂದುವೇಳೆ ನೀವು ಒಪ್ಪಿಕೊಳ್ಳದಿದ್ದರೆ, ನಿಮ್ಮನ್ನು ಬಲಾತ್ಕಾರಮಾಡದೆ ಎಂದೆಂದೂ ಬಿಡಲಿಕ್ಕಿಲ್ಲ ತಿಳಿಯಿತೇ? ಎಂದು ಅನ್ನಹತ್ತಿದರು ಆಗ ಜಾಣಳಾದ ವಿಮಲೆಯು ಇಷ್ಟೇ ನಿಮ್ಮ ಬೇಡಿಕೆಯೇ ಇದು ಯಾವ ಮಹತ್ವದ ಕೆಲಸವು ನೀವು ಏನೂ ಕಾಳಜಿಮಾಡಬೇಡಿರಿ. ನಿಮ್ಮ ಇಚ್ಛೆಯನ್ನು ಕೊನೆಗಾಣಿಸುವೆನು ಎಂದಳು. ಇದನ್ನು ಕೇಳಿಯಂತೂ

ಆ ನರಾಧಮರಿಗೆ ತುಂಬಾ ಸಂತೋಷವಾಯಿತು ನೀವು ಹೇಳಿ ದಂತೆಯೇ ಕೇಳುವೆವು ಎಂದು ಅನ್ನಹತ್ತಿದರು. ಆಗ ವಿಮಲೆಯು ನನ್ನ ಕೆಲವು ನಿಯಮಗಳಿರುವವು. ಅದಕ್ಕೆ ನೀವು, ಒಪ್ಪಿದಲ್ಲಿ ನಿಮ್ಮ ಇಚ್ಛೆಯನ್ನು ಪೂರ್ಣ ಮಾಡುವೆನು ಎಂದಳು. ಅದಕ್ಕೆ ಆ ಬೈರಾಗಿಗಳು ನಿನ್ನಂತೆಯೇ ಆಗಲಿ, ನಿನ್ನ ನಿಯಮಗಳಂತೆ ವರ್ತಿಸುವೆವು. ಎಂದರು. ಆ ಮೇಲೆ ವಿಮಲೆಯ ತಾವು ತೋಟಕ್ಕೆ ಬಂದಾಗ ತುಸು ತಿಂಡಿಯನ್ನು ಕಟ್ಟಿಕೊಂಡು ಬಂದಿದ್ದರು. ನೆಸಪಾಗದ್ದರಿಂದ ಮತ್ತು ಕತ್ತಲೆಯಾದ್ದರಿಂದ, ಹಾಗೇ ಉಳಿದಿತ್ತು. ಅವುಗಳನ್ನು ಆ ನೀಚರಾದ ಗುಂಡರಿಗೆ ತಿನಿಸಿದಳು. ಮತ್ತು ಅಲ್ಲಿ ಯೇ ಸಮೀಪದಲ್ಲಿದ್ದ ಹಳ್ಳದೊಳಗಿನ ನೀರನ್ನು ತಂದು ಕುಡಿ ಯಲಿಕ್ಕೆ ಕೊಟ್ಟಳು. ಅವರು ಆ ತಿಂಡಿಯನ್ನು ತಿಂದು ನೀರು ಕುಡಿದರು. ನಿಜವಾಗಿಯೇ ಹಸಿದದ್ದರಿಂದ ಸಮಾಧಾನವಾಯಿತು. ಬಳಿಕ ವಿಮಲೆಯು ಅವರಿಗೆ ಒಬ್ಬರ ಇಚ್ಛೆಯನ್ನು ಪೂರ್ಣ ಮಾಡುವಾಗ ಮತ್ತೊಬ್ಬರು ಇಲ್ಲಿ ಇರಕೂಡದು. ಆದ್ದರಿಂದ ಒಬ್ಬರು ಒಂದು ಕಡೆಗೆ ಹೊರಟು ಹೋಗಿರಿ. ಹಿಂದಿನಿಂದ ನಿಮ್ಮನ್ನು ಕರೆಯುತ್ತೇನೆಂದು, ಒಬ್ಬನನ್ನು ಕಳಿಸಿದಳು. ಆ ಮರುಳ ವೇಷ ಧಾರಿಯಾದ ಬೈರಾಗಿಯು ಆನಂದಪಟ್ಟು ಹೋದನು. ಇತ್ತ ವಿಮಲೆಯು ಅವನಿಗೆ– ನೀವು ದಣಿದು ಬಂದಿರುತ್ತೀರಿ. ಕೈಕಾಲು ಗಳು ನೋಯುವದಿಲ್ಲವೇ? ಆದ್ದರಿಂದ ತುಸು ಮೈ ಕೈಕಾಲು ಗಳನ್ನು ಒತ್ತುವೆನು. ಆ ಮೇಲೆ ನಿಮ್ಮ ಇಚ್ಛೆಯನ್ನು ಪೂರ್ಣ ಮಾಡಿಕೊಳ್ಳಿರಿ ಎಂದಳು. ಆಗಂತೂ ಆ ಗುಂಡನಿಗೆ, ಅತೀಶಯ ಆನಂದವಾಗಿ ಮೈಮೇಲಿನ ಎಚ್ಚರವೇ ತಪ್ಪಿತು. ಆಗ ವಿಮಲೆಯು ಗೆಳತಿಗೆ– ಗೋದಾವರೀ ನೀನು ಕೈಕಾಲುಗಳನ್ನು ಒತ್ತು ನಾನು ಬೆನ್ನು ಒತ್ತುತ್ತೇನೆ. ಮುಗಿದ ಬಳಿಕ ನೀನೂ ಕೆಲವು ವೇಳೆ ಹೊರಟು ಹೋಗು. ಆಮೇಲೆ ಅವರು ತಮ್ಮ ಇಚ್ಛೆಯನ್ನು

ಪೂರ್ಣ ಮಾಡಿಕೊಳ್ಳಲಿ. ಇದನ್ನು ಕೇಳಿಯಂತೂ ಆ ನರಪಶುವು ಆನಂದದಿಂದ ಹಲ್ಲು ಕಿರಿಯಹತ್ತಿತು ವಿಮಲೆಯು ಬೆನ್ನು ಒತ್ತುತ್ತ ಒತ್ತುತ್ತ ಯುಕ್ತಿಯಿಂದ ಆ ಚೂರಿಯನ್ನು ತೆಗೆದು ಹಿಂದಿನಿಂದ ಕೂಡಲೇ, ಕುತ್ತಿಗೆಯಲ್ಲಿ ಒಳ್ಳೇ ಕಸುವಿನಿಂದ ಚುಚ್ಚಿದಳು. ಆಗ ಗುಂಡನು "ಅಯ್ಯೋ ಸತ್ತೆನು ಎಂದು ಒಂದೇ ಸವನೆ ಚೀರಹತ್ತಿದನು. ರಕ್ತವು ಸುರಿಯಹತ್ತಿತು. ಇಷ್ಟಾದರೂ ವಿಮಲೆಯು ಕೇಳದೆ ಅವನನ್ನು ನೆಲಕ್ಕೆ ಕೆಡಹಿ, ಎದೆಯ ಮೇಲೆ ಕೂತು "ನರಾಧಮಾ ನಿನ್ನ ಇಚ್ಛೆಯನ್ನು ಪೂರೈಸಿಕೋ' ನಿನ್ನ ನೂರು ವರ್ಷಗಳು ಇಂದಿಗೆ ತುಂಬಿದವೆಂದು ತಿಳಿ. ನನ್ನ ಪಾತಿವ್ರತ್ಯವನ್ನು ನಷ್ಟಪಡಿಸಲು ಬಂದಿರುವ ನರಪಶುವೇ ನಿನ್ನ ಇಚ್ಛೆಯನ್ನು ಪೂರ್ಣ ಮಾಡಿಕೋ, ನಿನ್ನ ಇಚ್ಛೆಯನ್ನು ಪೂರ್ಣ ಮಾಡಿಕೋ ಎಂದು ಗದ್ದರಿಸಿ ಅವನ ಹೊಟ್ಟೆಯಲ್ಲಿ ಚೂರಿಯನ್ನು ಚುಚ್ಚಿ ಕೊಂದುಬಿಟ್ಟಳು.

## ೩ ನೇ ಪ್ರಕರಣ.

ಈ ಗದ್ದಲವನ್ನು ಕೇಳಿ ಮತ್ತೊಬ್ಬ ಗುಂಡನು, ಓಡುತ್ತ ಬಂದನು. ಆಗ ವಿಮಲೆಯು ಸಡ್ಡು ಹೊಡೆದು, ನಿನ್ನ ಇಚ್ಛೆಯನ್ನು ಪೂರ್ಣ ಮಾಡಿಕೊಳ್ಳುವವನಿದ್ದರೆ, ಹೀಗೆ ಮುಂದಕ್ಕೆ ಬಾ ಎಂದು ಚೂರಿಯನ್ನು ಹಿಡಿದುಕೊಂಡು ನಿಂತಳು. ಆಗ ಗರ್ಭಗಾಳಿತಗಳಾದ ಗೋದಾವರಿಯು ಈಕೆಯು ಬೆನ್ನು ಮೇಲೆ

ಇದ್ದದರಿಂದ ಆಕೆಗೂ ಒಮ್ಮಿಂದೊಮ್ಮೆ ಆವೇಶ ತುಂಬಿ, ಬಾ ನರಪಶುವೇ ನಿನ್ನ ಇಚ್ಛೆಯನ್ನು ಪೂರೈಸಿಕೋ ಎಂದು ಗದ್ದರಿಸಿದಳು.

ಆಗ ನರಪಶುವು ಅಂಜಿ, ನನ್ನ ಪರಿಣಾಮವಾದರೂ ಇವನಂತೆಯೇ ಆಗುವದೆಂದು, ತಿಳಿದು ದಾರಿಶಿಕ್ಕತ್ತ ಕಡೆಗೆ ಓಡಿಹೋದನು. ಅಲ್ಲಿಂದ ಇವರು ನಿರ್ಭಯದಿಂದ ಮನೆಗೆ ಬಂದು ಸುಖರೂಪ ತಲ್ಪಿದರು. ಮನೆಗೆ ಬಂದ ಬಳಿಕ ದಾರಿಯಲ್ಲಿ ಬಂದ ಸಂಕಟದ ವೃತ್ತಾಂತವನ್ನು ಮನೆಯವರಿಗೆ ಹೇಳಿದರು. ಮನೆಯವರು ನೀವು ವೇಳೆಯನ್ನು ಅರಿಯದೆ, ಹೀಗ್ಯಾಕೆ ಹೋಗಿದ್ದಿರಿ ಎಂದು ಬೈದು ಬೈದು ಮುಚ್ಚಿದರು.

ವಾಚಕರೇ, ಆ ವೇಷಧಾರಿಯಾದ ಬೈರಾಗಿಗಳು ಮತ್ತ್ಯಾರು ಇರದೆ, ಅದೇ ಊರದ ಒಬ್ಬ ಶೆಟ್ಟಿಯ ಮಗನು ಮತ್ತೊಬ್ಬನು ಅವನ ಗೆಳೆಯನು. ಮರಣ ಹೊಂದಿದವನು ಶೆಟ್ಟಿಯ ಮಗನು ಓಡಿಹೋದ ಆ ಗೆಳೆಯನು ಶೆಟ್ಟಿಯಮನೆಗೆ ಹೋಗಿ ಅವನ ಮುಂದೆ ನಾನಾತರದ ಸುಳ್ಳು ಸಂಗತಿಯನ್ನು ಹೇಳಿ, ಅವನನ್ನು ಹುರದುಂಬಿಸಿದನು. ಆಗಲೇ ಶೆಟ್ಟಿಯು ಸಂತಾಪದಿಂದ '' ಎಲ್ಲಿರುವಳೋ ನನ್ನ ಮಗನನ್ನು ಕೊಂದ ಆ ನೀಚಳಾದ ರಂಡಿಯು ಆ ರಂಡೆಯ ತಲೆಯನ್ನು ಬೋಳಿಸಿ, ಎಳೆತಂದು, ಆಕೆಯ ಪಾತಿವ್ರತ್ಯವನ್ನು ನಷ್ಟ ಪಡಿಸುವೆನು ಎಂದು ಬಡ ಬಡಿಸಹತ್ತಿದನು. ಆಗ ಆ ಮಗನ ಗೆಳೆಯನು ಹೀಗೆ ಶಿಟ್ಟಿನ ಕೈಯಲ್ಲಿ ಬುದ್ಧೀ ಕೊಡಬೇಡಿರಿ ಹೀಗೆ ನೀವು ಕೂಡಲೆ ಮಾಡಹೋದರೆ, ನಿಮ್ಮ ಪರಿಣಾಮವು ನೆಟ್ಟಗಾಗದು. ಆಕೆಯ ಮನೆಯವರು ದೊಡ್ಡ ಶ್ರೀಮಂತರು ಮೇಲಾಗಿ ಅಧಿಕಾರಸ್ಥರು. ರಾಜಸಭೆಗೂ ಅವರ ಪರಿಚಯವಿರುವದು. ಅಂದಬಳಿಕ ಒಮ್ಮೆಲೆ ಹೀಗೆ ಅವಿಚಾರತನವು

ನ್ನು ಮಾಡಹೋದರೆ, ನಿಮ್ಮ ಪರಿಣಾಮವು ನೆಟ್ಟಗಾಗದು. ಅದ್ದ ರಿಂದ ಆಕೆಗೆ ರಾಜನಿಂದಲೇ ತಕ್ಕಶಾಸನವಾಗುವಂತೆ, ಒಂದು ಸುಳ್ಳು ಆರೋಪವನ್ನು ಹೊರಿಸಿ, ಅತನ ಕಡೆಗೆ ಒಂದು ಫಿರ್ಯಾದಿಯನ್ನು ಕೊಡೋಣ. ಇದು ರಾಜನಿಗೆ ಸರಿಯೆನಿಸಿದರೆ, ಕೂಡಲೆ ಆಕೆಗೆ ದೇಹಾಂತ ಶಿಕ್ಷೆಯನ್ನು ವಿಧಿಸುವನು. ಏನೂ ಕಾಳಜೀ ಮಾಡ ಬೇಡ. ನೋಡಿದಿರಾ! ವಾಚಕರೇ ನೀಚರ ಕುಟಿಲ ಕಾರಸ್ಥಾನ ವನ್ನು, ಇವರು ಬೇಕಾದಷ್ಟು ಮೆರೆದರೂ, ಕಟ್ಟಕಡೆಗೆ ನಿರ್ಮೂ ಲವಾಗಿಯೇ ಹೋಗುವರು. ಸಜ್ಜನರಿಗೆ ಬೇಕಾದಷ್ಟು ಘೋರ ವಾದ ಗಂಡಾಂತರಗಳು ಬಂದರೂ, ಕಟ್ಟಕಡೆಗೆ ವಿಜಯಲಕ್ಷ್ಮಿಯು ಅವರ ಕೊರಳಲ್ಲಿಯೇ ಮಾಲೆಯನ್ನು ಹಾಕುವಳು. ಇರಲಿ. ಇವರು ಏನೇನು ಆರೋಪವನ್ನು ರಚಿಸಿರುವರು ನೋಡೋಣ. ಶೆಟ್ಟಿಯು ಮತ್ತು ಆ ಗೆಳೆಯನು ಕೂಡಿ, ಒಂದು ಅರ್ಜಿಯನ್ನು ತಯಾರಿಸಿದರು. ಅದು ಏನಂದರೆ—

ಪ್ರಭುಗಳೇ, ನನ್ನ ಮಗನು ಮತ್ತು ಅವನ ಗೆಳೆಯನು ಕೂಡಿ, ಪ್ರತಿನಿತ್ಯದಂತೆ ಆಡ್ಡಾಡಲಿಕ್ಕೆ ಹೋಗಿದ್ದರು. ದಾರಿ ಯಲ್ಲಿ ಈ ವಿಮಲೆಯು, ಮತ್ತು ಈಕೆಯ ಗೆಳತಿಯು ಗಂಟು ಬಿದ್ದರು. ಗಂಟು ಬಿದ್ದು ನನ್ನ ಮಗನಿಗೆ, “ನೀವು ನನ್ನ ಕೆಲಸ ವನ್ನು ಪೂರ್ಣ ಮಾಡುವಿರಾ” ಎಂದು ಕೇಳಿದಳು. ಅದಕ್ಕೆ ನನ್ನ ನಿರ್ಮಲಾಂತಃಕರಣದ ಮಗನು “ತಾಯೀ ನನ್ನ ಕಡೆಗೆ ನಿನ್ನ ದೇನು ಕೆಲಸವಿರುವದು? ನನ್ನ ಕಡೆಯಿಂದ ಆಗುವಂತೆ ಇದ್ದರೆ ಮಾಡುವೆನು. ಎಂದು ಅಂದನು. ಆಗ ವಿಮಲೆಯು ನನ್ನದೇನು ಅಷ್ಟು ಮಹತ್ವದ ಕೆಲಸವಿಲ್ಲ ನಿಮ್ಮ ಕಡೆಯಿಂದ ಆಗುವಂಥಾದ್ದೇ ಇರುತ್ತದೆ. ಅದು ಏನಂದರೆ— ನೀವು ನನ್ನಕೂಡ ಸಂಭೋಗ ಮಾಡಬೇಕು ಎಂದಳು. ಆಗ ನನ್ನ ಮಗನು “ಛೀ ತಾಯಿ

ಯುವರೇ ಹೀಗೆ ಕೆಟ್ಟ ಮಾತುಗಳನ್ನು ಆಡಬೇಡಿರಿ." ಇದು ನಿಮಗೆ ಶೋಭಿಸುವದಿಲ್ಲ. ನೀವು ನನಗೆ ಪ್ರತ್ಯಕ್ಷ ಮಾತೆಯಂತೆ ತೋರುವಿರಿ. ಅಂದ ಬಳಿಕ ಇಂಥ ಕೆಲಸವು ಪ್ರಾಣಹೋದರೂ ನನ್ನಿಂದ ಆಗಲಾರದು, ಎಂದು ಅಂದನು. ಇಷ್ಟಕ್ಕೆ ವಿಮಲೆಯು ಕೋಪವನ್ನು ತಾಳಿ ಅವನಿಗೆ ತಾನು ತಂದ ತಿಂಡಿಯನ್ನು ತಿನಿಸಿ, ಹಳ್ಳದ ನೀರನ್ನು ಕುಡಿಸಿ, ಆತನ ಕೂಡ ತಾಯಿಮಕ್ಕಳಂತೆ ಮಾತಾಡುತ್ತ, ಯುಕ್ತಿಯಿಂದ ಅವನಿಗೆ ಚೂರಿಯನ್ನು ಚುಚ್ಚಿ ಪ್ರಾಣವನ್ನು ತಕ್ಕೊಂಡಳು.

ನನ್ನ ನಿಷ್ಕಪಟಿಯಾದ ಮಗನು ಸರಳತನದಿಂದ ವರ್ತಿಸಲಿಕ್ಕೆ ಹೋಗಿ ಈಕೆಯ ಕೈಯಿಂದ ಸಾವಿಗೆ ಈಡಾದನು. ಆದ್ದರಿಂದ ಪ್ರಭುಗಳೇ ಇದರ ಯೋಗ್ಯಾ ಯೋಗ್ಯ ವಿಚಾರವನ್ನು ಮಾಡಿ ಆಕೆಗೆ ತಕ್ಕ ಶಿಕ್ಷೆಯಾಗಬೇಕೆಂದು, ಕೈಯೊಡ್ಡಿ ಬೇಡಿಕೊಳ್ಳುತ್ತೇನೆ. ಈ ಪ್ರಕಾರವಾಗಿ ಅರ್ಜಿಯನ್ನು ತಯಾರಿಸಿ ರಾಜನ ಕಡೆಗೆ ಕಳಿಸಿದರು.

## ೪ ನೇ ಪ್ರಕರಣ.

ಮುಂದೆ ಕೆಲವು ತಿಂಗಳುಗಳು ಗತಿಸಿ ಹೋದ ಮೇಲೆ ಶೆಟ್ಟಿಯ ಅರ್ಜಿಯು ವಿಚಾರಣೆಯು ಪ್ರಭುವಿನ ಮುಂದೆ, ನಡೆಯಿತು. ವಿಮಲೆಗೂ ನೋಟೀಸಗಳು ಬಂದವು ಆಗ ವಿಮಲೆಯ ಪತಿಗೂ, ಮನೆಯವರಿಗೂ ಈ ನೋಟಿಸಿನ ಮೇಲೆ ಬರೆದ ವಾರ್ತೆಯನ್ನು ಓದಿ ಅನಿವಾರ ದುಃಖವಾಯಿತು. "ಅಯ್ಯೋ ಇನ್ನೇನು ಮುಂದೆಗತಿ, ವಿಮಲೆಯ ಪರಿಣಾಮವು ನೆಟ್ಟಗಾಗಲಾ

ರದು ಏಲ್ಕೆ ನೀಚಳೇ, ಕುಲಘಾತಕಿಯೇ ಏನು ಭಯಂಕರ ಪ್ರಸಂಗವನ್ನು ತಂದೆ ಮನೆಯನ್ನು ಬಿಟ್ಟು ಹೋರಬೀಳು ಎಂದು ಸದ್ಗುಣಿಯಾದ ವಿಮಲೆಯನ್ನು ದಬ್ಬಿ ಬಿಟ್ಟರು.

ವಿಮಲೆಯು "ದೇವಾ ನಾನೆಂತು ದೈವಹೀನಳು ನಾನು ಯಾವ ಕೆಟ್ಟ ಕರ್ಮವನ್ನು ಮಾಡಿದ್ದೆನು ನನ್ನ ಮೇಲೆ ಇಂಥ ಸುಳ್ಳು ಆರೋಪವನ್ನು, ಆ ನನ್ನ ಕೈಯೊಳಗಿಂದ ಪಾರಾದ ನರಾಧಮನು ತಂದಿರುವನು ಇರಲಿ. ಅದರ ಯೋಗ್ಯಾಯೋಗ್ಯ ನಿರ್ಣಯವನ್ನು ರಾಜನ ಮನಸ್ಸಿನಲ್ಲಿ ಹೊಕ್ಕು ನೀನೇ ಕೊಡಿಸುವವನು. ಎಂದು ಬಾದೇಶವನೆ ಅತ್ತು, ಅತ್ತು ಶೋಕ ಮಾಡ ಹತ್ತಿದಳು. ಅಯ್ಯೋ ಈ ಕಲಿಯುಗದಲ್ಲಿ ನಿಜವಾಗಿ ವರ್ತಿಸುವವರ ದಿವಸವೇ ಇಲ್ಲ. ಅದರ ಮೇಲೆಯೇ ಯಾವಾಗಲೂ, ಸಂಕಟದ ಪರ್ವತಗಳು ಬಂದು ಬೀಳುತ್ತವೆ. ಸೌಖ್ಯವಂತೂ ತಿಲ ಮಾತ್ರವಾದರೂ ಆಗುವದಿಲ್ಲ. ಎಂದು ಪರಿ ಪರಿಯಿಂದ ಶೋಕ ಮಾಡಹತ್ತಿದಳು.

ಅದೇ ದಿವಸ ರಾತ್ರಿಯಲ್ಲಿ ಆಕೆಗೆ ಒಂದು ಸ್ವಪ್ನವು ಬಿತ್ತು ಸ್ವಪ್ನದಲ್ಲಿ ಒಬ್ಬ ಮುಪ್ಪಿನ ಮುದುಕನು ಬಂದಂತಾಗಿ ವಿಮಲೆಗೆ:— ಮಗಳೇ ನೀನು ಎಳ್ಳಷ್ಟಾದರೂ ಕಾಳಜೀ ಮಾಡಬೇಡ. ನಿನಗೆ ಒದಗಿರುವ ಸಂಕಟದೊಳಗಿಂದ ನಾನು ಪಾರುಮಾಡುತ್ತೇನೆ. ನಿನ್ನ ಪಾತಿವೃತ್ಯದ ಧರ್ಮವೇ ನಿನ್ನನ್ನು ಕಾಪಾಡುವದು. ಆದ್ದರಿಂದ ಶೋಕಿಸಬೇಡ ಇಷ್ಟು ಅಂದಾಕ್ಷಣವೇ ಆ ಮುದುಕನು ಮಾಯವಾದನು. ಕೂಡಲೆ ಆಕೆಗೆ ಎಚ್ಚರಿಕೆಯಾಯಿತು ನೋಡುತ್ತಾಳೆ ತನ್ನ ಹೊರ್ತಾಗಿ ಯಾರೂ ಇಲ್ಲ ಆಕೆಯು ತನಗೆ ಬಿದ್ದಿರುವ ಸ್ವಪ್ನವು ಶುಭ ಚಿನ್ಹವೆಂದೇ ಭಾವಿಸಿದಳು.

ಮರುದಿವಸ ರಾಜಸಭೆಯಲ್ಲಿ ಶೆಟ್ಟಿಯ ನ್ಯಾಯದ ನಿರ್ಣಯವು ಪ್ರಾರಂಭವಾಯಿತು. ವಿಮಲೆಯು ಹಾಜರಾದಳು. ಪ್ರಧಾನಿಯು ಬಹು ಕುಶಲನಿದ್ದನು. ರಾಜನಂತೂ ವಿಮಲೆಯ ಮೇಲೆ ಬಹಳ ಸಿಟ್ಟಾದನು. ಇತ್ತ ಕಡೆಗೆ ರಾಜನು ಸಿಟ್ಟಾದದ್ದನ್ನು ನೋಡಿ, ಶೆಟ್ಟಿಯು ಮುಂದೆ ಆಗಲೆಯೆನು:— ನೋಡಿದಿರಾ! ನಾವು ಆಕೆಯ ಮೇಲೆ ಹೊರಿಸಿದ ಸುಳ್ಳು ಆರೋಪದ ಮಹಿಮೆಯನ್ನು, ರಾಜನಂತೂ ಇನ್ನು ಮೇಲೆ ಈಕೆಗೆ ದೇಹಾಂತ ಶಿಕ್ಷೆಯನ್ನು ವಿಧಿಸುವನು. ಎಂದು ಗುಣಗುಟ್ಟಹತ್ತಿದನು.

ಇದನ್ನು ಆ ಚತುರನಾದ ಪ್ರಧಾನಿಯು ಲಕ್ಷ್ಯಕೊಟ್ಟು ಕೇಳಿ, ಕೇಳದವನಂತೆ ಕೂತಿದ್ದನು. ಈ ನ್ಯಾಯದಲ್ಲಿವನು ನಿರ್ಣಯವನ್ನು ಕೊಡಬೇಕೆಂದು, ರಾಜನಿಗೆ ಸ್ವಲ್ಪ ಚಿಂತೆಬಿತ್ತು.

ಆಗ ಪ್ರಧಾನಿಗೆ:— ಈ ನ್ಯಾಯದ ನಿಜವಾದ ಸಂಗತಿಯು ಹತ್ತಲೊಲ್ಲದು. ಹ್ಯಾಗೆ ಮಾಡಬೇಕು ಎಂದು ಕೇಳಹತ್ತಿದನು.

ಆಗ ಪ್ರಧಾನಿಯು:— ಜೀಯಾ! ಏನೂ ಚಿಂತಿಸಬೇಡ. ನಮಗೆ ಯಾವ ಸಂಗತಿಯು ಬೇಕಾಗಿದೆಯೋ ಅದೇ ನಮ ಹತ್ತರ ಸಿಕ್ಕಿದೆ. ನೋಡನೋಡುವದರೊಳಗಾಗಿಯೇ ಆ ಸಂಗತಿಯನ್ನು ಗೊತ್ತು ಹಚ್ಚುವೆನು. ಎಂದು ಅಂದವನೇ ಪೋಲೀಸರನ್ನು ಕರೆಯಿಸಿ “ಎಲೈ ಇವನನ್ನು ಖಂಬಕ್ಕೆ ಬಿಗಿದು, ನಿಜವಾದ ವೃತ್ತಾಂತವನ್ನು ಹೇಳುವವರೆಗೆ ಬಡೆಯಿರಿ ಬಿಡಬೇಡಿರಿ. ಎನ್ನಲು, ಪೋಲಿಸರು ಚನ್ನಾಗಿ ಥಳಿಸಿದರು. ಆದರೆ ನಾನು ಪ್ರಾಣ ಹೋದರೂ ಸಹ ವೃತ್ತಾಂತವನ್ನು ಹೇಳುವದಿಲ್ಲ ಎಂದು ಅಂದನು.

ಇದನ್ನು ಪ್ರಧಾನಿಗೆ ಹೋಗಿ ಶಿಪಾಯಿಗಳು ಹೇಳಿದರು. ಕೂಡಲೆ ಪ್ರಧಾನಿಯು ಸ್ವತಃ ಆತನ ಹತ್ತರ ಬಂದು, “ಎಲೈ

ನರಾಧಮನೇ, ನಿಜವಾದ ವೃತ್ತಾಂತವನ್ನು ಹೇಳು, ನನ್ನ ಹತ್ತರ ಮುಚ್ಚಿಡಬೇಡ. ಒಂದು ವೇಳೆ ನೀನು ಹೇಳದಿದ್ದರೆ, ನಿನ್ನ ಮೈದೊಗಲನ್ನು ಸುಲಿಸಿ ಕಣ್ಣು ಕಿತ್ತಿಸಿ, ಕೊಲ್ಲಿಸಿ ನಿನ್ನ ಮೃತವಾದ ಜೀವವನ್ನು ನಾಯಿ ನರಿಗಳ ಪಾಲಿಗೆ ಈಡು ಮಾಡಿಸುವೆನು. ಕಂಡಿಯಾ! ಸರಳತನದಿಂದ ಹೇಳಿದರೆ ಕ್ಷಮಿಸುವೆನು. ಎಂದು ಅಂದನು.

ಆಗ ಅವನು ಗಾಬರಿಯಾಗಿ ವಿಮಲೆಯ ಕಡೆಗೆ ಎಳ್ಳಷ್ಟಾದರೂ ತಪ್ಪಿಲ್ಲ. ಎಲ್ಲ ತಪ್ಪವು ಆ ಮೃತನಾದ ನನ್ನ ಗೆಳೆಯನ ಕಡೆಗೂ ನನ್ನ ಕಡೆಗೂ ಇರುತ್ತದೆ ಎಂದು ಸವಿಸ್ತರ ಸಂಗತಿಯನ್ನು ಹೇಳಿದನು.

ಆಗ ಪ್ರಧಾನಿಯು:— ಕಪಟಿಯೇ ನೀನು ಮತ್ತು ಶೆಟ್ಟಿಯು ಕೂಡಿ ನಿಷ್ಕಾರಣವಾಗಿ ಆ ಅಬಲೆಯ ಮೇಲೆ ಸುಳ್ಳು ಆರೋಪದ ಅರ್ಜಿಯನ್ನೂ, ಬರೆದಿರುವಿರೋ ಇಲ್ಲವೋ ಎನ್ನಲು ಹೌದು ಪ್ರಭುಗಳೇ ಬರೆದಿರುವೆವು.

ಪ್ರಧಾನಿಯು:— ಜೀಯಾ, ಕೇಳಿವಿಯಲ್ಲವೇ, ನಿಜವಾದ ವೃತ್ತಾಂತವನ್ನು, ಇನ್ನು ಮೇಲೆ ಬೇಕಾದ, ನಿರ್ಣಯವನ್ನು ವಿಚಾರಿಸಿ ಕೊಡಬೇಕು ಎಂದನು. ಆಗ ಅರಸನು- ಪ್ರಧಾನಿಗೆ, ಮಂತ್ರಿಯೇ, ಆ ವಿಮಲಾಬಾಯಿಯ ಅಂಬೋಣವೇನದೆ ಕೇಳು ಎಂದನು.

ಆಗ ಮಂತ್ರಿಯು:— ವಿಮಲಾಬಾಯಿಯವರೇ, ನಿಮ್ಮ ಅಂಬೋಣವೇನದೆ ಹೇಳಿರಿ. ಅಂದರೆ ಪ್ರಭುಗಳಿಗೆ ಬೇಗನೆ ನಿರ್ಣಯವನ್ನು, ಕೊಡಲಿಕ್ಕೆ ನೆಟ್ಟಗಾಗುತ್ತದೆ.

ಆಗ ವಿಮಲೆಯು:— ಮಂತ್ರಿ ಶ್ರೇಷ್ಠರೇ, ರಾಜಸಭೆಯಲ್ಲಿ ಆ ನರಾಧಮನ ಎದುರಿಸಿ ನಿಂತು, ಕೆಲವು ವೇಳೆ ಸ್ಪಷ್ಟವಾಗಿ ಮಾತಾಡಲಿಕ್ಕೆ ಅಪ್ಪಣೆಯನ್ನಿತ್ತರೆ, ನೆಟ್ಟಗಾಗುತ್ತದೆ ಎಂದಳು.

# ೫ ನೇ ಪ್ರಕರಣ.

ಆಗ ಮಂತ್ರಿಯು ಏನೂ ಅಡ್ಡಿ ಇಲ್ಲ, ಪ್ರಭುಗಳ ಮುಂದೆ ನಿರ್ಭಯದಿಂದ ನೀನು ಹೇಳುವ ನಿಜವಾದ ವೃತ್ತಾಂತವನ್ನು, ಸ್ಪಷ್ಟವಾಗಿ ಹೇಳಿಬಿಡು ಎಂದನು.

ಆಗ ವಿಮಲೆಯು ಧೈರ್ಯದಿಂದ ಆವೇಶಯುಕ್ತಳಾಗಿ " ಎಲೈ ನರಾಧಮನೇ ನೀನು ಮತ್ತು ನಿನ್ನ ಗೆಳೆಯನು ಕೂಡಿ, ಬೈರಾಗಿಯ ವೇಷವನ್ನು ತಾಳಿ, ಗುರುತನ್ನು ತಪ್ಪಿಸಿ ನಮ್ಮ ಪಾತಿವೃತ್ಯವನ್ನು ನಾಶಮಾಡುವದರ ದಶೆಯಿಂದಾ ಬಂದು ಗಂಟು ಬಿದ್ದಿರಿ. ನರಪಶುವೇ, ನೀವು ಹ್ಯಾಗೆ ನಮ್ಮ ಮೇಲೆ ಕಣ್ಣು ಇಟ್ಟು ಬಂದಿದ್ದಿರಿ ಅದರಂತೆಯೇ ನಿಮ್ಮ ತಾಯಿ, ಅಕ್ಕ ತಂಗಿಯರನ್ನು ಅಥವಾ ನಿಮ್ಮ ಹೆಂಡಂದಿರನ್ನು ಕೆಡಿಸಲಿಕ್ಕೆ ನಮ್ಮ ಮನೆಯವರು ಬಂದಿದ್ದರೆ, ನೀವು ಸುಮ್ಮನೆ ಕೂತು ಕೊಳ್ಳುತ್ತಿದ್ದಿರೋ?

ಪ್ರಭುಗಳೇ ನಾವು ಅಬಲೆಯರು. ಅರಣ್ಯದಲ್ಲಿ ಇವರು ನಮಗೆ ಗಂಟು ಬಿದ್ದು ಅಂಜಿಕೆಯನ್ನು ಹಾಕಿದರು. ಪರಿ ಪರಿಯಿಂದ ಹೇಳಿದೆವು ಕೇಳಲಿಲ್ಲ. ಇನ್ನು ಇವರು ನಮ್ಮನ್ನು ಘಾತಮಾಡದೆ ಬಿಡುವದಿಲ್ಲೆಂದು ತಿಳಿದು, ನಮ್ಮ ಪಾತಿವೃತ್ಯದ ರಕ್ಷಣಾರ್ಥವಾಗಿ, ಈ ಸಾಹಸವನ್ನು ಮಾಡಿದ್ದೇವೆ. ನಾವೇನು ಅನ್ಯಾಯವನ್ನು ಮಾಡಿಲ್ಲ. ಆದರೆ ಈ ನರಾಧಮನು ನಮ್ಮ ಮೇಲೆ ನಿಷ್ಕಾರಣವಾಗಿ ಸುಳ್ಳು ಆರೋಪವನ್ನು ಹೊರಿಸಿರುವನು, ಇದೆಲ್ಲ ಸಂಗತಿಯು ಪ್ರಭುಗಳಿಗೆ ಗೊತ್ತೇ ಆಗಿರುತ್ತದೆ. ಅಂದಬಳಿಕ ಇದರ ಯೋಗ್ಯಾಯೋಗ್ಯ ನಿರ್ಣಯವನ್ನು ಕೊಡಲು

ತಾವು ಸಮರ್ಥರೇ ಇರುತ್ತೀರಿ. ನನ್ನ ಕಡೆಗೆ ತಪ್ಪಿದ್ದರೆ ನನಗೆ ದೇಹಾಂತ ಶಿಕ್ಷೆಯನ್ನು ವಿಧಿಸಿದರೂ ಕೂಡ ಆನಂದದಿಂದ ಆ ಶಿಕ್ಷೆಯನ್ನು ಭೋಗಿಸುವೆನು. ಆನೆಯ ಕಾಲಿಗೆ ಕಟ್ಟಿ ಎಳಿಸಿದರೂ ಅದಕ್ಕೆ ಒಪ್ಪುವೆನು. ಇದಕ್ಕಿಂತ ಹೆಚ್ಚಿನ ಯಾವ ಸಂಗತಿಯನ್ನು. ಪ್ರಭುಗಳ ಮುಂದೆ ಹೇಳಲಿ ಎಂದಳು.

ಆಗ ರಾಜನು ಎಲ್ಲವನ್ನು ವಿಚಾರಿಸಿ 'ಮಾತೇ ನೀನು ಧನ್ಯಳು. ನನ್ನ ರಾಜ್ಯದಲ್ಲಿ ನಿನ್ನಂಥ ಸಾವಿರಾರು ವೀರ ಕನ್ಯೆಯರು ಜನಿಸಲಿಕ್ಕೆ ಬೇಕು. ನೀನು ಮಾಡಿದ ಸಾಹಸವು ಪೂರಾ ಸರಿಯಿರುತ್ತದೆ ನಿನಗೆ ಎಂಥ ಇನಾಮವನ್ನು ಕೊಟ್ಟರೂ ಕಡಿಮೆಯೇ ಸರಿ. ಮಂತ್ರಿಯೇ ಈಗಿಂದೀಗಲೇ ಈ ನರಪಶುವನ್ನು ಆನೆಯ ಕಾಲಿಗೆ ಕಟ್ಟಿ ಎಳಿಸಿರಿ ಎಂದನು


ಆಗ ಮಂತ್ರಿಯು:— ಜೀಯಾ, ತಡೆಯಿರಿ ತಡೆಯಿರಿ, ಆತನಿಗೆ ಇಷ್ಟು ಘೋರವಾದ ಶಿಕ್ಷೆಯು ಬೇಡ. ಯಾಕಂದರೆ, ಅವನು ನಿಜವಾದ ವೃತ್ತಾಂತವನ್ನು, ಹೇಳಿರುವನು. ಆದಕಾರಣ ಅವನಿಗೆ ಇದಕ್ಕಿಂತಲೂ ಕಡಿಮೆ ಶಿಕ್ಷೆಯನ್ನು ಕೊಡಬೇಕು.

ಆಗ ರಾಜನು " ಹೀಗೋ ಒಳ್ಳೇದು ಎಂದು ೨೦ ವರ್ಷಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದನು. ಮತ್ತು ಶೆಟ್ಟಿಗೆ ಕ್ಷಮೆ ಮಾಡಿ ಬಿಟ್ಟುಬಿಟ್ಟನು.

ವಿಮಲಾಬಾಯಿಗೆ ದರಬಾರದಿಂದ ಯೋಗ್ಯ ಸತ್ಕಾರವನ್ನು ಮಾಡಿ, ಅವರ ಮನೆಯವರನ್ನು ಕರೆಯಿಸಿ, " ಈಕೆಯ ಕಡೆಗೆ ಎಳ್ಳಷ್ಟಾದರೂ ತಪ್ಪಿಲ್ಲ. ಈಕೆಯು ದೇವತಾ ಸ್ತ್ರೀಯರ ಹತ್ತಿರ, ಕೂಡ್ರುವಷ್ಟು ಯೋಗ್ಯತೆಯುಳ್ಳವಳು ಇರುವಳು. ಈಕೆಯು ಪ್ರಾಣಹೋದರೂ ಕೂಡಾ ಪಾತಿವ್ರತ್ಯ ಧರ್ಮವನ್ನು ಎಂದೂ

ಬಿಡಲಾರಳು. ಈಕೆಯ ಯೋಗ್ಯತೆಯು ದೊಡ್ಡದಿರುವದು. ಆದ್ದರಿಂದ ನೀವು ಮನಸ್ಸಿನೊಳಗಿನ ಸಂಶಯವನ್ನು ಕಿತ್ತಿಹಾಕಿರಿ. ಈಕೆಯ ಕೂಡ ಚಂದವಾಗಿ ಬಾಳ್ವೆ ಮಾಡಿರಿ. ಅಂದರೇನೇ ನಿಮ್ಮ ಕಲ್ಯಾಣವಾಗುವದು, ಎಂದು ರಾಜನು, ಪರಿಪರಿಯಿಂದ ಹೇಳಿದನು. ಆಗ ಮನೆಯವರಿಗೂ ವಿಮಲೆಯ ವಿಷಯಕ್ಕೆ ಖಾತ್ರಿಯಾಗಿ ಆನಂದವಾಯಿತು. ಆಕೆಯನ್ನು ಕರಕೊಂಡು ಹೋದರು. ಮುಂದೆ ಪತಿಪತ್ನಿಯರು ಆನಂದದಿಂದ ಕಾಲಕಳೆಯ ಹತ್ತಿದರು. ವಿಶ್ವನಾಥಪಂತರ ಮನೆಯಂದರೆ, ಸೌಖ್ಯದ ತವರ ಮನೆಯಾಗಿತ್ತು. ಪಂತರಿಗೆ ಇಂಥ ಸಾಧ್ವಿಯಾದ ಪತ್ನಿಯು ಗಂಟುಬಿದ್ದದರಿಂದ ಕಡೆತನಕ ಅವರ ಕುಟುಂಬವು ಶಾಂತಿ ಸಾಮ್ರಾಜ್ಯದಲ್ಲಿ ವಾಸ ಮಾಡಹತ್ತಿತು.

ವಾಚಕರೇ ! ಇದೆಲ್ಲ ಕೀರ್ತಿಯು ಪ್ರಾಣ ಹೋದರೂ ಸಹ ತಮ್ಮ ಯೋಗ್ಯವಾದ ಕರ್ತವ್ಯಗಳನ್ನು ಬಿಡದೆ, ಪೂರ್ಣಗೊಳಿಸಿದ ಫಲವಲ್ಲವೇ?



# ಪರನಿಂದೆಯು ಪಾಪದ ಮಡುವು

ಈ ಜಗತ್ತಿನಲ್ಲಿ ಪರರ ನಿಂದೆಯನ್ನು ಮಾಡುವವರು ಎಷ್ಟೋ ಜನರು ತುಂಬಿರುವರು. ಅವರಿಗೆ ಈ ಮೇಲಿನ ಕರ್ತವ್ಯಗಳನ್ನು ತಪ್ಪದೆ ಮಾಡುವದರಿಂದ ನರಾಧಮ, ನರಪಶು, ನೀಚ ಮುಂತಾದ ಅನೇಕ ಬಿರುದುಗಳು ದೊರೆತಿರುತ್ತವೆ ಈ ಮಹನೀಯರು ಮನೆಯ ಕೂಳನ್ನು ತಿಂದು, ಇಡೀ ಆಯುಷ್ಯವನ್ನು ಎರಡನೆಯವರ ನಿಂದೆಯನ್ನು ಮಾಡುವದರಲ್ಲಿಯೇ ಕಳೆಯುವರು. ಅವರಿಗೆ ಪರನಿಂದೆಯನ್ನು ಮಾಡಿದ ಹೊರತಾಗಿ, ಅವರ ಆತ್ಮಕ್ಕೆ ಸಮಾಧಾನವೇ ಆಗುವದಿಲ್ಲ. ಈ ನರಾಧಮ ನಿಂದ್ಯವಾದ ಕರ್ತವ್ಯಗಳ ವರ್ಣನೆಯನ್ನು ಎಷ್ಟುಮಾಡಿದರೂ ತೀರದು. ಇವರು ಮಾಡುವ ನಿಂದೆಗೆ, ಹೇಡಿಗಳುಮಾತ್ರ ಅಂಜಿ, ತಾವು ಮಾಡತಕ್ಕ ಕರ್ತವ್ಯಗಳನ್ನೇ ಬಿಟ್ಟು, ಶೋಕಮಾಡುತ್ತ ಮನಸ್ಸಿಗೆ ಹಚ್ಚಿಕೊಂಡು, ಅಮೌಲ್ಯವಾದ ಆಯುಷ್ಯವನ್ನು ನಿರರ್ಥಕವಾಗಿ ಕಳೆಯುವರು. ಆದರೆ ತಿಳಿದವರು ಈ ನರಪಿಶಾಚ್ಚಿಗಳ ಪಾಂಚಜನ್ಯದ ಕಡೆಗೆ ಎಳ್ಳಷ್ಟಾದರೂ ಲಕ್ಷಕೊಡುವದಿಲ್ಲ. ಇವರ ಶಂಖ ಧ್ವನಿಯ ಕಡೆಗೆ ಲಕ್ಷಕೊಡುತ್ತಾ ಹೋದರೆ, ಇವರು ಮಾಡುವ ಕರ್ತವ್ಯಗಳು ಎಂದು ಕೊನೆಗಾಣಬೇಕು? ಅದ್ದರಿಂದ ಇವರು ಯೋಗ್ಯ ಕರ್ತವ್ಯಗಳನ್ನು ವೇಳೆಗೆ ಸರಿಯಾಗಿ ತಪ್ಪದೆ ಮಾಡುತ್ತ ತಮ್ಮ ಆಯುಷ್ಯವನ್ನು ಆನಂದಮಯವಾಗಿ ಮಾಡಿಕೊಳ್ಳುವರು. ಈ ನರಪಿಶಾಚ್ಚಿಗಳ ನಿಂದೆಯ ಪ್ರಭಾವವು ಕೇವಲ ಹೇಡಿಗಳ ಮೇಲೆಯೇ ಬೀಳುವದು.

ವಾಚಕರೇ, ಈ ನಿಂದೆಯ ಪ್ರಭಾವದಿಂದ ಒಂದು ಸಮಯಕ್ಕೆ ಸೌಖ್ಯಸಾಗರದಲ್ಲಿ ಮೆರೆಯುವ ಕುಟುಂಬವು ರಸಾತಳಕ್ಕೆ

ಹೋಗುವದು, ಮತ್ತು ಇದೇ ನಿಂದೆಯ ಪ್ರಭಾವದಿಂದ ಅತ್ಯಂತ ಹೀನಸ್ಥಿತಿಯಲ್ಲಿದ್ದ ಕುಟುಂಬವು ವೈಭವಾಲಯದಲ್ಲಿ ಸಂತೋಷದಿಂದ, ವಾಸಮಾಡುವದು. ನೀವು ನಿಮ್ಮ ಯೋಗ್ಯವಾದ ಕರ್ತವ್ಯಗಳನ್ನು ಆರಂಭ ಮಾಡುವಾಗಲೂ ಮಾಡಿದ ಮೇಲೆಯೂ ನೀವು ಮಾಡತಕ್ಕ ಕರ್ತವ್ಯಗಳನ್ನು ನೋಡಿ, ನಿಂದಾದೇವಿಯ ಭಕ್ತರು ನಿಮ್ಮನ್ನೂ, ನೀವು ಮಾಡುವ ಕಾರ್ಯಗಳನ್ನೂ ನಿಮೂರ್ಲ ಮಾಡುವವರ ಸಲುವಾಗಿ ಯಾವಾಗಲೂ ಸಿದ್ಧರಿರುತ್ತಾರೆ. ಇದನ್ನು ಲಕ್ಷದಲ್ಲಿಡಿರಿ. ಒಮ್ಮೆ ಇವರಕಡೆಗೆ ನೀವು ನೋಡಿದರೆ ಸಾಕು, ನಿಮ್ಮನ್ನು ಇವರು ನೋಡ ನೋಡುವದರೊಳಗಾಗಿ ನಿರಾಶಿಯುಳ್ಳವರನ್ನಾಗಿಮಾಡಿ, ನೀವು ಕೈಕೊಂಡಿರುವ ಕಾರ್ಯಕ್ಕೆ ನಾನಾತರದ ವಿಘ್ನಗಳನ್ನು ತಂದು, ಅದನ್ನು ನಾಮಶೇಷವಾಗಿ ಮಾಡಿಬಿಡುವರು. ನಮಗೆ ತಿಳಿದರೂ ಕೂಡಾ ತಿರುತಿರುಗಿ ಆ ಭಕ್ತರು ನಮ್ಮ ವಿಷಯಕ್ಕೆ ಏನನ್ನುತ್ತಾರೆ. ಇವರು ಹೀಗೆಂದ ಬಳಿಕ ನಾವು ಹ್ಯಾಗೆ ಮಾಡಬೇಕು. ಮಾಡಬೇಕೋ ನಮ್ಮ ಕೆಲಸವನ್ನು ಮಾಡಬಾರದೋ ಈ ಭಕ್ತರು ಅನ್ನುವದೇ ವಿಹಿತವೋ? ಎಂಬ ನಾನಾತರದ ಕಲ್ಪನೆಗಳನ್ನು ಮನಸ್ಸಿನಲ್ಲಿ ತಂದುಕೊಂಡು ಹತವೀರ್ಯರಾಗಿ ಹಿಡಿದ ಯಶೋಮಂದಿರದ ಮಾರ್ಗವು ತಪ್ಪಿ ಯಾವಾಗಲೂ ಅಧೋಗತಿಯ ರಾಜ್ಯದಲ್ಲಿ, ವಾಸಮಾಡುವ ಪ್ರಸಂಗವು ಪ್ರಾಪ್ತವಾಗುವದು. ಪರನಿಂದೆಯನ್ನು ಮಾಡುವದೆಂದರೆ, ಕೇವಲ ಪಾಪವೆಂಬ ಹೊಳೆಯ ತಿರುಗಣಿಯ ಮಡದಲ್ಲಿ ಗಿರಿಗಿರಿ ಒಂದೇ ಸವನೆ ತಿರುಗುವದು, ನಿಂದೆಯಲ್ಲಿ ಅನೇಕ ಪ್ರಕಾರಗಳುಂಟು. ಕೇವಲ ಯಾವಾಗಲೂ ನಿಂದೆಯನ್ನು ಮಾಡುವದು, ಇದೊಂದು ಪ್ರಕಾರವು. ಮತ್ತು ಮುಖದ ಮುಂದೆ ಸ್ತುತಿಯನ್ನು ಮಾಡಿ, ಕೂಡಲೆ ಹಿಂದಿನಿಂದ ನಿಂದೆಯನ್ನು ಮಾಡು

ಲಿಕ್ಕೆ ಆರಂಭಿಸುವದು. ಒಮ್ಮೊಮ್ಮೆ ನಿರ್ಲಜ್ಜತನದಿಂದ ಪ್ರತ್ಯಕ್ಷ ವಾಗಿ ಅವರ ಮುಂದೆಯೇ ನಿಂದೆಯನ್ನು ಮಾಡುವದು. ಮತ್ತು ಕೋಡಿಗನ ಹಾಗೆ ಒಂದೇ ಸವನೆ ಹಲ್ಲನ್ನು ತೆಗೆಯುವದು. ಹೀಗೆ ಅನೇಕ ಪ್ರಕಾರಗಳಿರುತ್ತವೆ. ದೇಶದಲ್ಲಿ ನಿಂದಾದೇವಿಯ ಭಕ್ತರು ನಿರ್ಮೂಲವಾಗಲಿಕ್ಕೆ ಬೇಕು. ಅಂದರೇನೇ ನಮ್ಮೆಲ್ಲರ ಉದ್ಯೋಗವು ಉತ್ತಮ ರೀತಿಯಿಂದ ನಡೆದು, ನಾವು ಯಾವಾಗಲೂ ಸೌಖ್ಯವೆಂಬ ಆಲಯದಲ್ಲಿ, ಸಂತೋಷದಿಂದ ವಾಸ ಮಾಡುವೆವು. ನಿಂದಾದೇವಿಯ ಭಕ್ತರು ನಾಶಹೊಂದಿದರೂ ಕೂಡ ನಮ್ಮ ಉದ್ಯೋಗವು ಉತ್ತಮ ರೀತಿಯಿಂದ ನಡೆದೀತೆಂದೂ ಹೇಳಲಿಕ್ಕೆ ಬರುವದಿಲ್ಲ. ಯಾಕಂದರೆ ನಮ್ಮಲ್ಲಿ ಕೆಲವು ದುರ್ಗುಣಗಳು ಮನೆ ಮಾಡಿಕೊಂಡು ಕೂತಿರುತ್ತವೆ. ಅವುಗಳನ್ನು ಹೊಡೆದೋಡಿಸಲಿಕ್ಕೆ ಬೇಕು. ಅವು ಯಾವವೆಂದರೆ, ಪರಾವಲಂಬನ, ಕಪಟತನ, ವೈಗಳ್ಳತನ, ಆಲಸ್ಯ ಮತ್ಸರ, ಡಾಂಭಿಕತನ, ಗರ್ವ ದುರಭಿಮಾನ ಮುಂತಾದ ಅನೇಕ ದುರ್ಗುಣಗಳು ತುಂಬಿರುತ್ತವೆ. ಇವನ್ನೆಲ್ಲ ಹೊಡೆದೋಡಿಸಿ ಧೈರ್ಯ, ಸ್ವಾವಲಂಬಿತ್ವ ಆತ್ಮವಿಶ್ವಾಸ ನಿಷ್ಕಪಟತನ, ನಮ್ರತನ, ಚಟುವಟಿಕೆ ಮುಂತಾದ ಸದ್ಗುಣಗಳನ್ನು ಬರಮಾಡಿಕೊಂಡು ಸಜ್ಜಾಗಿ ನಿಂದಾದೇವಿಯ ಭಕ್ತರ ಎದುರಿಗೆ ನಿಂತು ನಾವು ನಮ್ಮ ತಕ್ಕ ಉದ್ಯೋಗವನ್ನು ಆರಂಭ ಮಾಡಿದರೆ ತೀರಿತು. ಆಗಂತೂ ನಿಂದಾದೇವಿಯ ಭಕ್ತರ ಕೈಕಾಲೇ ಹೋಗುವವು. ನಮ್ಮ ಮೇಲೆ ಅವರ ಅಮಲವೇ ಸಾಗುವದಿಲ್ಲ. ಅವರು ನಿಷ್ಕಾರಣವಾಗಿ ನಮ್ಮ ನಿಂದೆಯನ್ನು ಮಾಡಿದ ತಪ್ಪಿಗಾಗಿ ಯಾವಾಗಲೂ ಪಾಪದ ಮಡುವಿನಲ್ಲಿ ನಿದ್ದೆಯನ್ನು ಹಿಡಿದ ಭೋಗರೆಯಂತೆ ಗಿಮಿಗಿಮಿ ಬುಡಮೇಲಾಗಿ ಒಂದೇ ಸವನೆ ತಿರುಗಹತ್ತುವರು. ವಾಚಕರೇ ನಾವು ಮಾತ್ರ ಮೇಲೆ ಹೇಳಿದಂತೆ ವರ್ತಿಸುತ್ತಾ, ಎರಡನೇಯವರ ನಿಂದೆಯನ್ನು ಮನಸೋಕ್ತವಾಗಿ ಮಾಡ

ಲಿಕ್ಕೆ ಏನೂ ಆತಂಕವಿಲ್ಲ, ಅಂತಾತಿಳಕೊಳ್ಳಬಾರದು. ಇಡೀ ಆಯುಷ್ಯದಲ್ಲಿಯೂ ಪರನಿಂದೆಯನ್ನು ಮಾಡುವ ಪ್ರಸಂಗವು, ನಮ್ಮ ಮೇಲೆ ಬಾರದಂತೆ ಎಚ್ಚರಿಕೆಯಿಂದ ಇರತಕ್ಕದ್ದು.

ಈ ಜಗತ್ತಿನಲ್ಲಿ ಮಾನ, ಅಪಮಾನ, ಸುಖ, ದುಃಖ, ದಾರಿದ್ರ್ಯ, ದೈವುಳ್ಳತನ ಇವು ಎಲ್ಲರಿಗೂ ಇದ್ದೇ ಇರುವವು. ಅಂದ ಮೇಲೆ ನಾವು ನಿಷ್ಕಾರಣವಾಗಿ ಎರಡನೇಯವರನ್ನು ಹಿಯಾಳಿಸಿ, ಪಾಪಕ್ಕೆ ಯಾಕೆ ಗುರಿಯಾಗಬೇಕು. ನಮ್ಮ ಮೇಲೆ ಅವರಂತೆಯೇ ಪ್ರಸಂಗವು ಬರುವದಿಲ್ಲೆಂದು ಯಾತರ ಮೇಲಿಂದ ಹೇಳುತ್ತೀರಿ. ಒಂದು ವೇಳೆ ಅಂಥ ಹೀನ ಪ್ರಸಂಗವು ನಮಗೆ ಪ್ರಾಪ್ತವಾದ ಸಮಯದಲ್ಲಿ, ನಮ್ಮನ್ನು ಅವರು ಹೀಯಾಳಿಸಿದರೆ, ನಮಗ ಕೆಟ್ಟ ವೆನಿಸುವದಿಲ್ಲವೋ? ಅನ್ನಿಸುವದು.

ನಮ್ಮ ಸಮಾಜದಲ್ಲಿ ಒಂದು ಅತ್ಯಂತನಿಂದ್ಯ ಪ್ರಕಾರವಾದ ಕೆಟ್ಟ ಚಟವು ಬಿದ್ದಿರುವದು. ಆ ಚಟವು ಯಾವದೆಂದರೆ, ಯಾವ ನಾದರೂ ಒಬ್ಬ ಬಂಧು ಸ್ತುತ್ಯವಾದ ಉದ್ಯೋಗವನ್ನು ಆ ರಂಭ ಮಾಡಿದರೆ ತೀರಿತು ಅವನಿಗೆ ತಮ್ಮಿಂದ ಕೈಲಾದ ಮಟ್ಟಿಗೆ, ತನು, ಮನ ಧನದಿಂದ ಸಹಾಯ ಮಾಡುವದಂತೂ ಒತ್ತಟ್ಟಿಗೇ ಉಳಿಯಿತು. ಆದರೆ ಅವನು ಕೈಕೊಂಡಿರುವ ಯೋಗ್ಯ ವಾದ ಉದ್ಯೋಗವನ್ನು ನೋಡಿ" ಸಂತೋಷವಾಯಿತು ಆತನ ಉದ್ಯೋಗದ ಉತ್ಕರ್ಷವಾಗಲಿ ಹೀಗೆ ನಿರ್ಮಲಾಂತಃಕರುಣ ದಿಂದ ಸಮಾಧಾನವನ್ನು ಕೂಡಾ ವ್ಯಕ್ತಪಡಿಸುವದಿಲ್ಲ ಮನು ಷ್ಯನು ಯಾವದಾದರೊಂದು ಸ್ತುತ್ಯ ಉದ್ಯೋಗವನ್ನು ಆರಂಭ ಮಾಡುವಾಗಲೂ ಮತ್ತು ಮಾಡಿದಮೇಲೆಯೂ ಮನೆಯವರಿಂದಾ ಗಲೀ ಅಥವಾ ಇತರರಿಂದಾಗಲೀ ಆತನು ಕೈಕೊಂಡಿರುವ ಉದ್ಯೋಗಕ್ಕೆ, ಉತ್ತೇಜನವನ್ನು ಕೊಡುತ್ತಾ ಹೋದರೆ,

ಆತನಿಗೆ ಆನಂದವಾಗಿ ಮಾಡುವ ಉದ್ಯೋಗವನ್ನು ಮನಮುಟ್ಟಿ ದಕ್ಷತೆಯಿಂದ ಅತ್ಯಂತ ಉತ್ತಮವಾಗುವ ಹಾಗೆ ಒಳ್ಳೇಹುರುಪಿನಿಂದ ಮಾಡಹತ್ತುವನು. ಅದೇ ಒಂದುವೇಳೆ ಅವನಿಗೆ ಒಂದೇ ಸವನೆ ನಿಂದಿಸಹತ್ತಿದರೆ, ಮನಸ್ಸಿನಲ್ಲಿ ಇಲ್ಲದ ಸಂದೇಹವು ಉತ್ಪನ್ನವಾಗಿ, ಅವನು ಮಾಡುವ ಉದ್ಯೋಗವು ನಾಶಹೊಂದಿ ಮನಸ್ಸಿಗೆ ಯಾವದೂ ಬೇಡಾಗಿ ಹಣೆಗೆ ಕೈ ಹಚ್ಚಿಕೊಂಡು ಕೂಡ್ರುವ ಪ್ರಸಂಗವು ಬರುವದು.

ಯಾರು ಧೈರ್ಯವಂತರೂ, ಆತ್ಮವಿಶ್ವಾಸವುಳ್ಳವರೂ ಸ್ವಾವಲಂಬಿಗಳು ಇರುವರೋ ಅವರು ಈಗಿನಿಂದಾ ದೇವಿಯ ಭಕ್ತರಿಗೆ, ಎಂದೂ ಆದರ ಸತ್ಕಾರವನ್ನು ಮಾಡರು. ಇವರು ಬೊಗಳುವ ಕಡೆಗೆ ಲಕ್ಷಕೊಡದೆ, ತಮ್ಮ ಇಷ್ಟವಾದ ಕಾರ್ಯಗಳನ್ನು ಲಕ್ಷಪೂರ್ವಕವಾಗಿ, ಯಾರಗೋಜಿಗೂ ಹೋಗದೆ ಮಾಡುತ್ತಾ ಹೋಗುವರು.

ಆದ್ದರಿಂದಲೇ ಇಂಥ ವೀರಶಾಲಿಗಳು ಯಾವಾಗಲೂ ಉತ್ಕರ್ಷಮಂದಿರದಲ್ಲಿ ವಾಸಮಾಡುವರು. ಅಂದಮೇಲೆ ನಾವಾದರೂ ನಮ್ಮಲ್ಲಿದ್ದ ದುರ್ಗುಣಗಳನ್ನು ಹೊಡೆದೋಡಿಸಿ, ಸದ್ಗುಣಗಳ ಕಳವು ಮಾಡಿ, ನಿಂದಾದೇವಿಯ ಭಕ್ತರಿಗೆ ಶರಣುಹೊಡೆದು ಸ್ವಾವಲಂಬಿಗಳಾಗಿ, ನಮ್ಮ ಮಾಡತಕ್ಕ ಕಾರ್ಯಗಳನ್ನು ರವಿ, ಸೋಮರಂತೆ, ವೇಳೆಗೆ ಸರಿಯಾಗಿ ಮಾಡುತ್ತಾ ಹೋದರೆ, ನೋಡ ನೋಡುವದರೊಳಗಾಗಿ ಆನಂದಮಯವಾದ ಉತ್ಕರ್ಷ ಮಂದಿರಕ್ಕೆ ಹೋಗಿ ತಲ್ಪುವೆವು. ಆ ಮೇಲೆ ಕೇಳುವದೇನು ಉತ್ಕರ್ಷ ಮಂದಿರದ ಹೆಬ್ಬಾಗಿಲದಮೇಲೆ ಕೂತು ಯಶೋದುಂಧುಭಿಯನ್ನು ಹೊಡೆಯುತ್ತಾ ಸಂತೋಷದಿಂದ ವಾಸಮಾಡುವೆವು. ಇದನ್ನು ಆ ನಿಂದಾದೇವಿಯ ಭಕ್ತರು, ಗೂಗೆಯ ಹಾಗೆ ನೋಡುತ್ತಾ ಕೂತು ಕೊಳ್ಳುವರು.

# ಸ್ವಾವಲಂಬಿಯಾದ ಸದಾಶಿವನು-

ಸುವರ್ಣಪುರವೆಂಬಲ್ಲಿ ಸದಾನಂದರಾಯರೆಂಬ ಪೆನಶನ್ ಹೊಂದಿದ ಗೃಹಸ್ಥರು ವಾಸಿಸುತ್ತಿದ್ದರು. ಇವರು ಮನೆಯಿಂದ ಒಳ್ಳೇ ಶ್ರೀಮಂತರಿದ್ದರು. ಇವರಿಗೆ ವಿದ್ಯಾಖಾತೆಯಲ್ಲಿ ಇನಸ್ಪೇಕ್ಟರರ ಜಾಗೆಯು ದೊರೆತಿತ್ತು. ಇವರ ಜಾಣತನಕ್ಕೆ ಮೆಚ್ಚಿ ವರಿಷ್ಠ ಅಧಿಕಾರಿಗಳು, ಇವರನ್ನು ಮುಖ್ಯ ಇನಸ್ಪೇಕ್ಟರರನ್ನಾಗಿ ಮಾಡಿಬಿಟ್ಟರು. ಇವರಿಗೆ ತಿಂಗಳೊಂದಕ್ಕೆ ೧೦೦೦ ರೂಪಾಯಿ ಪಗಾರವಿತ್ತು. ಮುಂದೆ ೫೦೦ ರೂಪಾಯಿ ಪೆನಶನ್ ಪಡೆಯುಹತ್ತಿದರು. ಇವರಿಗೆ ಬಹಳ ದಿವಸಗಳ ವರೆಗೆ, ಮಕ್ಕಳೇ ಆಗಿದ್ದಿಲ್ಲ. ಪತಿಪತ್ನಿಯರು ಯಾವಾಗಲೂ ಚಿಂತಾಮಗ್ನರಾಗಿರುತ್ತಿದ್ದರು. ಹೀಗೆ ಕೆಲವು ವರ್ಷಗಳನ್ನು ಚಿಂತೆಯಲ್ಲಿ ಕಳೆಯುತ್ತಿರುವಾಗ ಈಶಕೃಪೆಯಿಂದ, ಇವರಿಗೆ ಒಬ್ಬ ಮುತ್ತಿನಂಥ ಮಗನು ಜನಿಸಿದನು. ಇವನೇ ನಮ್ಮ ಕಥಾನಾಯಕನು. ಇವನು ಹುಟ್ಟಿದ ವೇಳೆಗೆ ರಾಯರು ಇನ್ನೂ ಕೆಲಸದ ಮೇಲೆಯೇ ಇದ್ದರು ಒಬ್ಬನೇ ಅಪರೂಪ ಮಗನು ಹುಟ್ಟಿದ್ದರಿಂದ ಬಹಳವಾಗಿ ಪ್ರೀತಿಸುತ್ತಿದ್ದರು. ಕೆಲವು ವರ್ಷಗಳು ಗಮಿಸಿದ ಮೇಲೆ ಮಗನಿಗೆ ವಿದ್ಯಾಭ್ಯಾಸವನ್ನು ಮನೆಯಲ್ಲಿಯೇ ಕಲಿಸಲಿಕ್ಕೆ ಆರಂಭಮಾಡಿದರು. ಸದಾಶಿವನು ಬಹಳ ಚುರುಕು ಬುದ್ಧಿಯುಳ್ಳವನಿದ್ದನು ಕೆಲವು ತಿಂಗಳಲ್ಲಿಯೇ ಚನ್ನಾಗಿ ಅಭ್ಯಾಸ ಮಾಡಿ ತಂದೆಯ ದಿಕ್ಕನ್ನೇ ತಪ್ಪಿಸಿದನು

ಮುಂದೆ ರಾಯರು ಸದಾಶಿವನನ್ನು ಶಾಲೆಗೆ ಹಾಕಿದರು. ಇವನು ೬-೭ ವರ್ಷಗಳೊಳಗಾಗಿ ತಾನು ಮನಸ್ಸಿನಿಂದ, ನಿಶ್ಚಯಿಸಿದಷ್ಟು ಶಿಕ್ಷಣವನ್ನು ಪೂರ್ಣವಾಗಿ ಮುಗಿಸಿದನು. ಈ ವೇಳೆಗೆ

ಸದಾಶಿವನಿಗೆ ೧೮ನೇ ವರ್ಷವು ಆರಂಭವಾಗಿತ್ತು. ಇದೇ ಸಮಯಕ್ಕೆ ರಾಯರು ವಾರ್ಧಕ್ಯದಿಂದ ಮರಣ ಹೊಂದಿದರು. ಎಲ್ಲರಿಗೂ ಅತಿಶಯ ದುಃಖವಾಯಿತು. ಎಲ್ಲ ಮನೆತನದ ಭಾರವು ಇವನ ಮೇಲೆಯೇ ಬಿದ್ದಿತು. ಸದಾಶಿವನಲ್ಲಿ ಧೈರ್ಯ, ಪ್ರಾಮಾಣಿಕತನ, ಸ್ವಾವಲಂಬಿತ್ವ, ದೃಢನಿಶ್ಚಯ, ಆತ್ಮವಿಶ್ವಾಸ, ಆತ್ಮಸಂಯಮನ, ಚಟುವಟಿಕೆ, ನಿಷ್ಕಪಟತನ, ನಮ್ರತನ ಮುಂತಾದ ಅನೇಕ ಸದ್ಗುಣಗಳು ಮನೆಮಾಡಿಕೊಂಡಿದ್ದವು. ವಾಚಕರೇ ಸದ್ಗುಣಿಗಳಾದ ನರರಿಗೆ ಉತ್ಕರ್ಷ ಮಂದಿರಕ್ಕೆ ಹೋಗಲಿಕ್ಕೆ ಅವಕಾಶವೇ ? ಎಂದೂ ಇಲ್ಲ. ಅವರು ನೋಡ ನೋಡುವದರೊಳಗಾಗಿಯೇ ಉಗಿಬಂಡಿಯು ಹೋಗುವಂತೆ, ಅತಿ ತೀವ್ರವಾಗಿ ತಮ್ಮ ಇಚ್ಛಿತ ಸ್ಥಳವಾದ ಉತ್ಕರ್ಷ ಮಂದಿರಕ್ಕೆ ಹೋಗಿ ಅಲ್ಲಿ ಸಂತೋಷದಿಂದ ನಲಿದಾಡುವರು. ಇತ್ತ ಸದಾಶಿವನು ವಿವಾಹಕ್ಕೆ ಯೋಗ್ಯವಾದನು. ಇವನು ಶ್ರೀಮಂತಿಕೆಯಲ್ಲಿ ಹುಟ್ಟಿ ಬೆಳೆದದ್ದರಿಂದ ಈತನಿಗೆ ದುಃಖವು ಎಳ್ಳಷ್ಟಾದರೂ ಗೊತ್ತಿದ್ದಿಲ್ಲ ಸದಾನಂದ ರಾಯರು ಸಂಪಾದಿಸಿದ ಹಣವನ್ನೆಲ್ಲ ಮನಿಯಲ್ಲಿಯೇ ಇಟ್ಟಿದ್ದರು. ಹೀಗೆ ಮಾಡದೆ ಬಡ್ಡಿಗೆ ಹಚ್ಚಿ, ವಿಮೆಯನ್ನು ಇಳಿಸಿ, ಅಥವಾ ಬ್ಯಾಂಕಿನಲ್ಲಿ ಇಟ್ಟಿದ್ದರೆ ನೆಟ್ಟಗಾಗುತ್ತಿತ್ತು. ಇಲ್ಲವೆ ಒಂದು ವೇಳೆ ಹೊಲಗಳನ್ನು ಕೊಂಡು ಬಿಟ್ಟಿದ್ದರೂ ನೆಟ್ಟಗಾಗುತ್ತಿತ್ತು. ಆದರೆ ರಾಯರು ಇವುಗಳ ಪೈಕೀ ಒಂದನ್ನು ಮಾಡಲಿಲ್ಲ. ದೈವ ಗತಿಯು ವಿಚಿತ್ರವಾದದ್ದು ಒಂದಾನೊಂದು ದಿವಸ ಸದಾಶಿವನು ಊರಿಗೆ ಹೋದ ಸಮಯದಲ್ಲಿ ಕಳ್ಳರು ಕನ್ನಾಕೊರೆದು ಎಲ್ಲ ಆಸ್ತಿಯನ್ನು ಒಯ್ದು ಬಿಟ್ಟರು. ಇವನು ಊರಿಂದ ಬಂದು ನೋಡುತ್ತಾನೆ. ಮನೆಯಲ್ಲಿ ಈ ಪ್ರಕಾರ ಸ್ಥಿತಿಯಾಗಿರುವದು. ತಾಯಿಯು ಒಂದೇಸವನೆ ಅಳುತ್ತ ಕುಳಿತಿದ್ದಳು. ಆಗ ಸದಾಶಿವನು " ತಾಯೇ ದುಃಖಿಸಬೇಡ ನಮ್ಮ

ಹೋದ ಆಸ್ತಿಯು ಇಂದಿಲ್ಲ ನಾಳೆ ಶಿಕ್ಕೇ ಶಿಗುವದು. ಯಾಕಂದರೆ ಅದೇನು ತಿನೇಯುವರನ್ನು, ಠಕ್ಕಿಸಿ ಅಥವಾ ಅವರ ಕುತ್ತಿಗೆಯ ಮೇಲೆ ಚೂರಿಯನ್ನಿಟ್ಟು ಸಂಪಾದಿಸಿದ ಹಣವಲ್ಲ. ತಾತನು ತನ್ನ ಸ್ವಂತ ಶ್ರಮದಿಂದ ಸಂಪಾದಿಸಿದ ಹಣವಿರುತ್ತದೆ" ಎಂದು ಪರಿಪರಿಯಿಂದ ತಾಯಿಯನ್ನು ಸಮಾಧಾನಗೊಳಿಸಿದನು. ಸದಾ ಶಿವನಿಗೂ ಅಪಾರ ದುಃಖವಾಯಿತು; ಆಗುವದು ಸ್ವಾಭಾವಿಕವು ಈಗಂತೂ ಇವನಿಗೆ ಮೂರ್ತಿಮಂತ ದಾರಿದ್ರ್ಯವು ಪ್ರಾಪ್ತವಾದಂತಾಯಿತು. ಇರಲಿ. " ಸತ್ಯಕ್ಕೆ ಸಾವಿಲ್ಲ " ಎಂಬಂತೆ ನ್ಯಾಯದಿಂದ ಸಂಪಾದಿಸಿದ ಹಣವು ಕಳೆದರೂಕೂಡ ಅದು ಒಂದಿಲ್ಲೊಂದು ದಿವಸ ದೊರತೇ ದೊರೆಯುವದು. ಕಳವಾದ ದಿವಸದಿಂದ ೨ ವರ್ಷಗಳ ವರೆಗೆ ಬೇಕಾದಷ್ಟು ಯತ್ನ ಮಾಡಿದರೂ ಅದರ ಸುಳಿವೇ ಹತ್ತಲೊಲ್ಲದು

ಒಂದು ದಿವಸ ಸದಾಶಿವನ ಗೆಳೆಯನು ತನ್ನ ಸೋದರ ಮಾವನ ಊರಿಗೆ ಹೋಗಿದ್ದನು. ಅದು ಸುವರ್ಣಪುರದಿಂದ ೩ ಮೈಲವಿತ್ತು. ಅಲ್ಲಿ ಹೋದಬಳಿಕ ಒಂದು ದಿವಸ ವಸಂತನು ಮಾರುತಿಯ ದೇವಾಲಯಕ್ಕೆ ಹೋದಾಗ ಕಮಾಥರ್ಮ ಸಂಯೋಗದಿಂದ, ಅದೇ ದಿವಸ ವಸಂತನು ಹೋದ ವೇಳೆಗೆ, ಅಲ್ಲಿಯೋ ಪರಿಗೆ ಒಂದು ಮೂಲೆಗೆ, ನಾಲ್ಕು ಜನರು ತಮ್ಮತಮ್ಮೊಳಗೆ ಮಾತಾಡುತ್ತ ಕುಳಿತಿದ್ದರು. " ಯಾನಲೇ ಭೀಮಾ ಆ ಸುವರ್ಣಪುರದಾಗಾ ಯೊಡ್ಡ ವರ್ಷ ಅಚ್ಚೀಕ ಸದಾನಂತ ಪಂತಗೋಳ ಮನ್ಯಾಗಾ ಹೊಡದ ಬ್ಯಾಟಿ ಇನ್ನ ನಮಗಾ ನಾಕ ನಾಕ ತಲಿ ಕುಂತಕನ್ಯಾಸಿ ತಿಲ್ಲಾಪಕ ಬರಕತಿ ನಾವ್ಯಾನ ಇನ್ನು ಶಿಗಾಂಗಿಲ್ಲ. ಬಿಡನೀ ಪಾರತದೀವ, ತಿರುಗಿ ಯಾಡ್ಡ ವರ್ಸ ಆಗಿ ಹೋದೂ ಇನ್ಯಾನ ರಾಜಾನಂಗ ಚೈನೀ ಭೋಗಸೂದು ಖತಿ " ಈ

ಪ್ರಕಾರವಾಗಿ ತಮ್ಮ ತಮ್ಮೊಳಗೆ ಅವರು ಸಾವಕಾಶವಾಗಿ ಮಾತಾಡುವದನ್ನು ವಸಂತನು ಲಕ್ಷಗೊಟ್ಟು ಕೇಳಿ, ಕೇಳದವನಂತೆ ಕೂತಿದ್ದನು. ಮುಂದೆ ಮಾತಿಗೆಮಾತು ತೆಗೆದು, ಯುಕ್ತಿಯಿಂದ ಅವರ ಹೆಸರು, ಅವರಅಡ್ಡ ಹೆಸರು ಮುಂತಾದವುಗಳನ್ನು ಕೇಳಿಕೊಂಡು ತನ್ನ ಊರಿಗೆ ಹೊರಟು ಬಂದನು. ಬಂದ ಬಳಿಕ ಸದಾಶಿವನ ಮನೆಗೆ ಹೋಗಿ "ಮಿತ್ರಾ ನಿನ್ನ ಹೋದ ಆಸ್ತಿಯೆಲ್ಲ ತಿರುಗಿ ಶಿಗುವದು" ಎಂದು ಹೇಳಹತ್ತಿದನು.

ಆಗ ಸದಾಶಿವನು:— "ವಸಂತಾ ಹುಚ್ಚರೇ ಹಿಡದಿಲ್ಲ ಅಲ್ಲಾ. ಏನಪಾ ೨ ವರ್ಷಗಳು ಆಗಿ ಹೋದವು. ಪೋಲೀಸರು ಬೇಕಾದಷ್ಟು ಹೆಣಗಾಡಿದರೂ ಅದರ ಪತ್ತೆಯೇ ಇನ್ನೂ ವರೆಗೆ ಹತ್ತಲಿಲ್ಲ. ಅಂದಬಳಿಕ ಇನ್ನೇನು ಶಿಗುವದು ಹುಚ್ಚಾ" ಎಂದು ಅನ್ನಹತ್ತಿದನು. ಆಗ ವಸಂತನು "ಸದಾಶಿವಾ, ಶಿಕ್ಕರೆ ಅದರೊಳಗಿನ ಅರ್ಧಭಾಗವನ್ನು ನನಗೆ ಕೊಡುವಿಯಾ" ಎಂದು ಚೇಷ್ಟೆಯಿಂದಾ ಕೇಳಹತ್ತಿದನು. ಆಗ ಸದಾಶಿವನು ಅರ್ಧಭಾಗವನ್ನು ಕೊಡುವೆನು ಎಂದು ಅಂದನು. ಆಗ ವಸಂತನು:— "ಬೇಡ ಮಾಹಾರಾಯಾ ೨ ನೇಯವರು ಕೊಟ್ಟದ್ದು ಎಷ್ಟು ದಿವಸ ಪೂರೈಸುವದು ನಿನ್ನ ಆಸ್ತಿಯು ನಿನಗೆ ದೊರೆತರೆ ಸಾಕು ನನಗೆ ಆನಂದವಾಗುವದು" ಎಂದು ಅಂದನು

ಮುಂದೆ ಕೆಲವು ದಿವಸಗಳು ಗವಿುಸಿ ಹೋದ ತರುವಾಯ ಸದಾಶಿವನ ಮುಂದೆ, ತಾನು ಊರಿಗೆ ಹೋದ ಸಮಯದಲ್ಲಿ ಗೊತ್ತಾದ ಸಂಗತಿಯನ್ನು ಸವಿಸ್ತಾರವಾಗಿ ಹೇಳಿದನು. ಆಗ ಸದಾಶಿವನು ಅವನನ್ನು ಅಪ್ಪಿಕೊಂಡು "ವಸಂತಾ ನೀನು ಎಷ್ಟು ಜಾಣನಿರುವಿಯೋ ಎಂದು ಕೊಂಡಾಡಹತ್ತಿದನು. ಆಗ ವಸಂತನು:— ಹುಚ್ಚಾ ಇದರಲ್ಲಿ ನನ್ನ ಜಾಣತನವೇನಿರುವದು

ಅದು ತಿರುಗಿ ದೊರೆಯುವವೇಳೆಯೋ ಬಂದಿರುತ್ತದೆ. ಅಂತಾ ಆ ವೃತ್ತಾಂತವು ನನ್ನ ಕಿವಿಗೆ ಬಿತ್ತು. ಇರಲಿ ಇನ್ನು ಮೇಲೆ ವಿಲಂಬಮಾಡಿ, ಉಪಯೋಗವಿಲ್ಲ. ಬೇಗನೆ ಹೋಗಿ ಪೋಲೀಸ ರಿಗೆ ವರ್ದಿಯನ್ನು ಕೊಟ್ಟು ಬಿಡೋಣ ಎಂದು ನಿಶ್ಚಯಿಸಿ, ಅದರಂತೆ ಹೋಗಿ ಎಲ್ಲ ಸಂಗತಿಯನ್ನು ವಿಶದವಾಗಿ ಹೇಳಿ ಬಿಟ್ಟರು ಇನ್ನುಮೇಲೆ ಪೋಲೀಸರಿಗೆ ಅವಕಾಶವೇ ಕೂಡಲೆ ಪೋಲೀಸರು ವೇಷವನ್ನು ಬದಲಾಯಿಸಿ, ಬೈರಾಗಿಯ ವೇಷವನ್ನು ಹಾಕಿಕೊಂಡು, ಆ ಹಳ್ಳಿಗೆ ಹೋಗಿ ಧರ್ಮಶಾಲೆಯಲ್ಲಿ ಇಳಕೊಂಡರು ಅವರು ಬಂದದಿವಸವೇ ಭಿಕ್ಷೆಗೆಂದು ಊರಲ್ಲಿ ಹೋದರು. ತಿರಗುತ್ತ ತಿರಗುತ್ತ ಅವರ ಮನೆಗೆ ಹೋಗಿ, ಮಾತಿಗೆ ಮಾತು ತೆಗೆದು ಯುಕ್ತಿಯಿಂದ ಅವರು ಊರಲ್ಲಿ ಇರುವರೋ ಅಥವಾ ಇಲ್ಲವೋ ಎಂಬವರ ಶೋಧನನ್ನು ಮಾಡಲಾಗಿ, ಇಲ್ಲದ ಸುದ್ದಿಯು ಅವರ ಮನೆಯವರಿಂದಲೇ ಹತ್ತಿತು. ಇನ್ನೊಂದು ನಾಲ್ಕು ದಿವಸಕ್ಕೆ ಬರುತ್ತಾರೆಂದು ಹೇಳಲಾಗಿ ಇವರು ನಾಲ್ಕು ಮುಕ್ಕಾಮಗಳನ್ನು ಒಗೆದರು. ಅದರಂತೆ ಅವರು ನಾಲ್ಕು ದಿವಸಗಳಾದ ಬಳಿಕ ಊರಿಗೆ ಬಂದರು. ಇವರು ಬಂದ ದಿವಸವಾದರೂ ದಿನಾಲು ಹೋಗುವಂತೆ ಭಿಕ್ಷೆಗೆ ಹೋದರು. ಹೋದವರೇ ಝೋಳಿಗೆಯಲ್ಲಿಯ ಕೈ ಬೇಡಿಗಳನ್ನು ತೆಗೆದು ಅವರಿಗೆ ಹಾಕಿದರು. ಆಗ ಅವರು 'ಇದ್ಯಾನಪಾ ನಮ್ಮ ಸುತ್ತಾ ಏ ಬಾವಾಗೋಳರ್‍ಯಾ ಯಾನ ನಿಮ್ಮ ಮೈಯಾಗಿನ ಸೊಕ್ಕೊ ಯಾನರೇ ಐತಿ ಇಲ್ಲೊ ಅಲ್ಲರ್‍ಯೋ ಅಪ್ಪಗೋಳರ್‍ಯಾ ಅಡ್ಡ ಕಡದರ ೭ ಮೊಳಾ ಆಗ ತೀರಿ ಉದ್ದ ಕಡದರ ೩ ಮೊಳಾ ಆಗತೀರಿ ನಮ್ಮ ಊರ ಘೂಳೀ ಬಿಟ್ಟಾಂಗ ಆಗೇತಿ ನಿಮಗ್ಯಾನ ದುಡೀಲಾಕ ಬ್ಯಾನಿ ಬಂದೋದ ಸಾಗವಾನೀ ತೊಲೀ ಆಗೀದಿರಿ. ಅಲ್ಲರೋ ಮಕ್ಕಳರ್‍ಯಾ ನಮ್ಮ ಕೈಯಾಗ ಯಾಕ ನಕಲೀ ಬೇಡಿ ಹಾಕತೀರಿ

ನಮಗೆ ಅಂಜಿಕೀ ಹಾಕಲಾಕ, ಈ ಬೇಡಿ ಎಲ್ಲೀದು ತುಡುಗ ಮಾಡಿಕ್ಯಾಸ ತಂದಿದೀರಿ? ಖರೇ ಹೇಳರಿ. ಇಲ್ಲದಿರಕ ನಿಮ್ಮ್ಯಾನ ಕೊಂದ ಹಾಕತೀವು. ಇವನ್ನ ನಿಮ್ಮ ಕೈಯ್ಯಾಗ ಹಾಕಿ ಕ್ಯಾಸ ಆ ಸುವರ್ಣ ಪುರಕ್ಕ ಹೋಗಿಕಾಸ ಕಚೇರ್ಯಾಗ ಒಯ್ದು ಫೌಜದಾರ ಸಾಬರ ಮುಂದ ಇವರು ನಮ್ಮ ಮನೀ ಒಡದಾರ ಅತ್ತ ತಿಳದು ಹೇಳಿ ಆ ಹಳದೀ ಬಣ್ಣದ ಶಿಪಾಯಿ ಗೋಳ ಕೈಯ್ಯಾಗ ಎಳದಕೊಟ್ಟು ಕ್ಯಾಸ ನಿಮ್ಮ ಮಜಾ ಮಾಡತೀವ. ಆ ಮ್ಯಾಗ ನೀವ ಸುದ್ದೀಮ್ಯಾಗ ಬರತೀರಿ ತಿಳೀತ್ಯಾಸ. ಎಂದು ಒಂದೇ ಸವನೆ ಹಲ್ಲು ತಿನ್ನ ಹತ್ತಿದರು. ಆಗ ವೇಷಧಾರಿಯಾದ ಶಿಪಾಯಿಗಳು ಒಂದೇ ಸವನೆ ಬಿದ್ದು ಬಿದ್ದು ನಗಲಾರಂಭಿಸಿದರು. ಅದಕ್ಕೆ ಅವರು "ಯಾನೋ ಭೀಮಾ ಇವು ಮಂಗ್ಯಾನಗತೇ ಬರೇ ಹಲ್ಲೇ ತಗೀತಾವ ಯಾನ ಜರಾ ಸುದ್ದೀಮ್ಯಾಗ ಇದ್ದಾವಿಲ್ಲ. ಯಾನ ಖಂಬಕ್ಕ ಬಿಗದಕ್ಯಾಸ ಯಗಾಡ್ದ ಏಟಾ ಕುಡೂಣೋ ಅಂತಾ ಅನ್ನ ಹತ್ತಿದರು. ಇವರು ವಯಸ್ಸಿನಿಂದ ೪೦-೪೫ ವರ್ಷದವರಿದ್ದರು. ಗಡ್ಡಗಳು ಬಿಳ್ಳಗಾಗಲಿಕ್ಕೆ ಆರಂಭಿಸಿದ್ದವು.

ಶಿಪಾಯಿಗಳು:—ಏ ಮುದಿಗೂಗಿಗಳಿರ್ಯಾ ನಿಮ್ಮ ಆಯುಷ್ಯವು ಇಂದಿಗೇ ತೀರಿತೆಂದು ತಿಳಿಯಿರಿ. ನಮ್ಮ ಕೂಡಾ ಧರ್ಮಶಾಲೆಗೆ ನಡೆಯಿರಿ. ಅಲ್ಲಿ ನಿಮಗೊಂದು ಮಜಾ ಮಾಡಿ ತೋರಿಸತೀವ ಎಂದು ಅನ್ನ ಹತ್ತಿದರು. ಆಗ ಇವರು ಯಾನ ಹುಚ್ಚ ಆದಾವ ಇವಾ ಮಜಾ ಮಾಡಿ ತೋರಸತಾವ ಅತ್ತ ನಡಿರೋ ಇವತರ ಮಜಾರೇ ಹೇತಾದ ಐತಿ ನೋಡೋಣ ಆ ಮ್ಯಾಗ ಈ ಮಕ್ಕಳಿಗೆ ನಮ್ಮ ಮಜಾ ತೋರಸೂಣು. ನಡಿರೋ ಎಂದು ನಾಲ್ವರೂ ಧರ್ಮಶಾಲೆಗೆ ಹೋದರು. ಹೋದ ಬಳಿಕ ಶಿಪಾಯಿಗಳು ವೇಷವನ್ನು ತೆಗೆದು ನಿಜವಾದ ವೇಷವನ್ನು ಧರಿಸಿ ನಿಂತುಬಿಟ್ಟರು. ಇದನ್ನು ನೋಡಿ

ಯುಂತೂ ಅವರ ಕೈಕಾಲೇ ಹೋದವು. ಥರಥರ ಒಂದೇ ಸವನೆ ನಡುಗಲಾರಂಭಿಸಿದರು. ನಾಲ್ವರಿಗೂ ನಾಲ್ಕು ಕಾಲುಬೇಡಿಗಳನ್ನು ಹಾಕಿದರು. ಅವರ ದಿಕ್ಕವೇ ತಪ್ಪಿಹೋಯಿತು. ಇನ್ನು ಮೇಲೆ ನಮ್ಮ ಪರಿಣಾಮವು ನೆಟ್ಟಗಾಗುವದಿಲ್ಲೆಂದು, ಮನಗಂಡರು ಇವರನ್ನು ಸುವರ್ಣಪುರಕ್ಕೆ ತಂದು ಫೌಜದಾರರ ಮುಂದೆ ನಿಲ್ಲಿಸಿದರು, ಫೌಜದಾರನು ಆ ನಾಲ್ಕೂ ಜನರಿಗೆ ಚನ್ನಾಗಿ ಥಳಿಸಲಿಕ್ಕೆ ಆರಂಭಮಾಡಿದನು ಬೇಕಾದಷ್ಟು ಬಡೆದರೂ ಕಬೂಲ ಮಾಡಲೊಲ್ಲರು. ಆ ಮೇಲೆ ಫೌಜದಾರನು ಪೋಲಿಸರಿಗೆ ಕರೆದು “ ಎಲೈ ಒಂದು ಹದನಾದ ಚೂರಿಯನ್ನು ತರ್ರಿ ಅದನ್ನು ಅವರ ಕುತ್ತಿಗೆಯಲ್ಲಿ ಬೆನ್ನ ಹಿಂದೆ ಚುಚ್ಚಿ ನಿಜವಾದ ಸಂಗತಿಯನ್ನು ಹೇಳುವ ವರೆಗೆ ಉಪವಾಸದಿಂದ ಇರಲಿಕ್ಕೆ ಹಚ್ಚಿರಿ. ಒಂದು ವೇಳೆ ಇವರು ನಿಜವಾದ ಸಂಗತಿಯನ್ನು ಹೇಳಿದಲ್ಲಿ ಕೂಡಲೆ ಈ ನಾಲ್ವರಿಗೂ ಕ್ಷಮೆಮಾಡಿಸಿ ಬಿಡುವೆನು ಎಂದು ಅಂದನು.

ಆಗ ಅವರು ನಿಜವಾಗಿಯೇ ತಮ್ಮ ಬಿಡುಗಡೆಯಾಗುವದೆಂದು ತಿಳಿದು ನಿಜವಾದ ಸಂಗತಿಯನ್ನು ಹೇಳಿದರು. ಬಳಿಕ ಫೌಜದಾರರು ಕ್ಷಮೆಮಾಡಿದವನಂತೆ ತೋರಿಸಿ, ಪೋಲೀಸರಿಗೆ “ ಎಲೈ ಇವರು ನಿಜವಾದ ಸಂಗತಿಯನ್ನು ಹೇಳಿದ್ದರಿಂದ ಮತ್ತು ಇನ್ನು ಮೇಲೆ ಇಂಥ ಅಪರಾಧವನ್ನು ಮಾಡುವದಿಲ್ಲೆಂದು ಶರಣು ಬಂದದರಿಂದ ಅವರನ್ನು ಬಿಟ್ಟುಬಿಡಿರಿ ” ಎಂದು ಸನ್ನೆಯನ್ನು ಮಾಡಿದರು. ಇತ್ತ ಇವರು ನಾವು ಪಾರಾದೇವೆಂದು ಆನಂದಪಡಹತ್ತಿದರು ಫೌಜದಾರರು ಒಯ್ದು ಆಸ್ತಿಯಪೈಕೀ ೧/೨ ಭಾಗವನ್ನು ಕೊಟ್ಟುಬಿಡಿರಿ ಎಂದು ಅವರಿಗೆ ಮೊದಲೇ ರಮಿಸಿ ಹೇಳಿದ್ದರು. ಇದರಿಂದ ಅಂತೂ ಅವರಿಗೆ ಬಹಳೇ ಸಂತೋಷವಾಗಿತ್ತು ಫೌಜದಾರರು ಕೂಡಲೆ ಒಂದು ಮೋಟಾರವನ್ನು ತರಿಸಿ ಗುಪ್ತ

ರೀತಿಯಿಂದ ನಿಮನ್ನು ನಿಮ್ಮ ಊರಿಗೆ ಕಳಿಸುತ್ತೇನೆಂದು ಹೇಳಿ ಅವರನ್ನು ಮೋಟಾರದಲ್ಲಿ ಕೂಡ್ರಿಸಿಕೊಂಡು, ಶಿಪಾಯಿಸಹಿತ ವಾಗಿ ಅಲ್ಲಿಯೇ ನೆರೆಹಳ್ಳಿಗೆ ಹೋದರು. ಯಾಕಂದರೆ ಆದಿವಸ ವರಿಷ್ಠ ಅಧಿಕಾರಿಗಳ ಮುಕ್ಕಾಮು ಅಲ್ಲಿಯೇ ಇತ್ತು. ಕಳ್ಳರು ಗಾಬರಿಗೊಂಡರು. ಪೋಲಿಸರು ನೀವು ಏನೂ ಕಾಳಜೀ ಮಾಡ ಬೇಡಿರಿ ನಿಮಗೆ ಚನ್ನಾಗಿ ತಿಳಿಸುತ್ತೇವೆಂದು ಅನ್ನುತ್ತ ಒಂದೇ ಸವನೆ ನಗಹತ್ತಿದರು. ಹೀಗೆ ಅವರು ನಗುವದನ್ನು ನೋಡಿ, ಇವರು ಮತ್ತಿಷ್ಟು ಗಾಬರಿಯಾದರು. ಫೌಜದಾರರು ಅವರಿಗೆ ನನ್ನ ಮುಂದೆ ಹೇಳಿದಂತೆಯೇ ಸಾಹೇಬರ ಮುಂದೆಯೂ ಹೇಳಿ ರಿ ಅದರಲ್ಲಿ ತಪ್ಪಬೇಡರಿ. ಇದು ಮುಗಿದಾಕ್ಷಣವೇ ನಿಮ್ಮನ್ನು ಊರಿಗೆ ಕಳಿಸುವೆವು ಎಂದು ಅಂದರು. ಆಗ ಇವರಿಗೆ ತುಸು ಸಮಾಧಾನವೆನಿಸುತು. ಆಗ ಅವರು ತಮ್ಮ ತಮ್ಮೊಳಗೆ ' ದೊಡ್ಡ ಸಾಬರ ಮುಂದಸೂ ಈ ಹಕೀಕತ್ತಿ ಹೇಳಾಕಬೇಕ ಕಾಣತತಿ ಫೌಜಿ ದಾರಸಾಬರ ಮಾತು ಖರೆ ಐತಿ ಸಾಬರಿಗೂ ದಯಾ ಬಂದಕ್ಯಾಸ ನಮಗ ಮಾಫೀ ಮಾಡಿಬಿಡತಾರ" ಎಂದು ಅನ್ನ ಹತ್ತಿದರು.

ಮ್ಯಾಜಿಸ್ಟ್ರೇಟರ ಮುಂದೆ ಈ ನಾಲ್ಕು ಆರೋಪಿಗಳ ಜಬಾ ಬವು ಆಯಿತು. ಎಲ್ಲ ಆಸ್ತಿಯನ್ನೂ ತರಿಸಿದರು. ಈ ನಾಲ್ವರಿಗೂ ೨೦ ವರ್ಷಗಳ ಕರೇನೀರಿನ ಶಿಕ್ಷೆಯು ವಿಧಿಸಲ್ಪಟ್ಟಿತು. ಸದಾಶಿ ವನ ಆಸ್ತಿಯು ಸದಾಶಿವನಿಗೆ ದೊರೆಯಿತು. ಸದಾಶಿವನಿಗೂ ಅವನ ತಾಯಿಗೂ ಅತ್ಯಾನಂದವಾಯಿತು. ವಸಂತನು ' ಏನಪಾ ಸದಾಶಿವಾ, ನಿನ್ನ ಆಸ್ತಿಯು ನನ್ನ ಹೇಳಿಕೆಯಂತೆ ತಿರುಗಿ ದೊರೆ ಯಿತಿಲ್ಲವೋ ' ಎಂದು ಕೇಳಿದನು. ಆಗ ಸದಾಶಿವನು ' ಹೌದು ಮಿತ್ರಾ ನನ್ನ ಆಸ್ತಿಯು ತಿರುಗಿ ದೊರೆಯುಲಿಕ್ಕೆ ನೀನೇ ದೇವ ರಾಗಿ ಬಂದಿ ನಿನ್ನ ಅಭಿನಂದನೆಯನ್ನು, ಎಷ್ಟುಮಾಡಿದರೂ ತೀರದು.

ಎಂದು ಅವನನ್ನು ಹಾಡಿಹರಸಹತ್ತಿದನು

ವಾಚಕರೇ ಸದಾಶಿವನಂಥ ಜಾಣವೀರನು ಸುವರ್ಣಪುರದಲ್ಲಿ ಯಾರೂ ಇಲ್ಲೆನ್ನಲಿಕ್ಕೆ ಏನೂ ಅಡ್ಡಿ ಇಲ್ಲ. ಕೆಲವು ದಿವಸಗಳು ಗತಿಸಿ ಹೋದತರುವಾಯ ಇವನು ಆಸ್ತಿಯ ೪ ಭಾಗವನ್ನು ಬಡಬಗ್ಗರಿಗೂ, ಅನಾಥಾಲಯಗಳಿಗೂ ಜೀರ್ಣೋದ್ಧಾರವಾಗುವ ದೇವಾಲಯಗಳಿಗೂ, ಸಹಾಯಮಾಡಿ ಉಳಿದ ಆಸ್ತಿಯ ಪೈಕೀ ಕೆಲವು ಹಣವನ್ನು ವಿಮೆಯಲ್ಲಿ ತೊಡಕಿಸಿ ಕೆಲವು ಹಣವನ್ನು ಬ್ಯಾಂಕಿನಲ್ಲಿಟ್ಟು ಉಳಿದ ಎಲ್ಲ ಹಣದಿಂದ ಹೊಲಗಳನ್ನು, ಕೊಂಡುಬಿಟ್ಟನು. ಮುಂದೆ ಈತನ ಸೋದರ ಮಾವನು, ಇವನಿಗೆ ಅನುರೂಪವಾದ ವಧುವನ್ನು ಹುಡುಕಿ ವಿವಾಹವನ್ನು ಮಾಡಿದನು. ಇಂದಿನಿಂದ ಇವರ ಸಂಸಾರ ಚಕ್ರಕ್ಕೆ, ಕೀಲಿಯನ್ನು ಕೊಟ್ಟಂತಾಯಿತು.

## ೭ ನೇ ಪ್ರಕರಣ.

ಸದಾಶಿವನು ಕೇವಲ ಸ್ವಾವಲಂಬಿತ್ವದ ಭಕ್ತನು. ಇವನಿಗೆ ಪರಾವಲಂಬನವು ಎಳ್ಳಷ್ಟಾದರೂ ಸೇರುತ್ತಿದ್ದಿಲ್ಲ. ಇವನು ಅತೀ ಸನಾತನಿಯೂ ಅಲ್ಲ. ಅತೀ ಸುಧಾರಕನೂ ಅಲ್ಲ. ಇವನು ಇರುವ ಮನೆಯು ಬಹಳೇ ಹಳೇದಾಗಿತ್ತು. ಇವನು ತುಸು ಹೊಸ ಪದ್ಧತಿಗೆ ಮೆಚ್ಚಿದವನು. ಅದರಂತೆ ಹೊಸ ಪದ್ಧತಿಗನುಸರಿಸಿ ಮನೆಯನ್ನೆಲ್ಲ ಕೆಡಹಿಸಿ ಬಂಗ್ಲೆಯ ನಮೂನೆಯಂತೆ ಮನೆಯನ್ನು ಕಟ್ಟಿಸಿದನು. ಮನೆಯಲ್ಲಿ ಅಂತೂ ನೀರಿನ ೩೦ ನಳಗಳಿದ್ದವು. ಮನೆಯ ಮುಂದಿನ ಅಂಗಳದಲ್ಲಿ ಸುಮಾರು ಒಂದು ಅರ್ಧ

ಫರ್ಲಾಂಗದ ವರೆಗೆ ನಾನಾತರದ ಹೂವಿನ ಗಿಡಗಳನ್ನು ತುಳಸೀ ಗಿಡಗಳನ್ನು ಹಚ್ಚಿಸಿದನು. ಮತ್ತು ನಳದಿಂದ ಅವಕ್ಕೆ ನೀರು ಹೋಗುವ ಹಾಗೆ ವ್ಯವಸ್ಥೆಯನ್ನು ಮಾಡಿಸಿದನು. ಮನೆಯನ್ನು ಕೇವಲ ನಂದನವನದ ಹಾಗೆ ಮಾಡಿಬಿಟ್ಟನು. ಯಾವನಾದರೊಬ್ಬ ಪಾಂತಸ್ಥನು ಇವನ ಮನೆಯನ್ನು ಕಂಡಾಕ್ಷಣಕ್ಕೆ ಅವನ ಮನಸ್ಸಿಗೆ ತುಸು ಶಾಂತಿಯುಂಟಾಗುವದು. ಮತ್ತು ಗತಕಾಲದ ದುಃಖವನ್ನು ಕೂಡಾ ಕೆಲವು ವೇಳೆ ಮರೆಯುವನು.

ಸದಾಶಿವನು ನೌಕರಿಯನ್ನು ಎಂದೂ ಮಾಡಲಿಲ್ಲ ಆದರೆ ತನ್ನ ಮನೆಯ ನೌಕರನಾಗಿದ್ದನು. ಇವನು ತನ್ನ ಆಯುಷ್ಯವನ್ನು ಅಮೃತದಂತೆ ಉಪಯೋಗ ಮಾಡುತ್ತಿದ್ದನು. ಮತ್ತು ಎಲ್ಲರಿಗೂ ಯಾವಾಗಲೂ "ಬಾಂಧವರೇ ಈ ಜಗತ್ತಿನಲ್ಲಿ ವೇಳೆಯಷ್ಟು ಮಹತ್ವದ್ದು ಯಾವದೂ ಇಲ್ಲ. ಆದ್ದರಿಂದ ನಿಷ್ಕಾರಣವಾಗಿ ವೇಳೆಯನ್ನು ಕೆಟ್ಟಕಾರ್ಯಗಳಲ್ಲಿ ಕಳೆಯಬೇಡಿರಿ. ಯಾವಾಗಲೂ ಉತ್ತಮವಾದ ಕಾರ್ಯಗಳನ್ನೇ ಮಾಡಿರಿ. ವೇಳೆಯನ್ನು ಕೇವಲ ಅಮೃತದಂತೆ ಉಪಯೋಗ ಮಾಡಿಕೊಳ್ಳಿರಿ. ನನ್ನ ದೃಷ್ಟಿಯಿಂದ ವೇಳೆಯೆಂದರೆ ಭೂಲೋಕದ ಅಮೃತವೆಂದೇ ತಿಳಿಯುತ್ತೇನೆ. ನೀವು ಬೇಕಾದ ಪದಾರ್ಥಗಳನ್ನು ಕಳಕೊಂಡರೂ ಜೀವದಿಂದಿದ್ದರೆ ಮತ್ತೆ ಅವನ್ನು ಪ್ರಯತ್ನ ಮಾಡಿ ಒಂದು ವೇಳೆ ದೊರಕಿಸಬಹುದು. ಆದರೆ ಕಳೆದು ಹೋದ ಒಂದೇ ಒಂದು ನಿಮಿಷವು ನೀವು ಪ್ರಾಣವನ್ನು ಕೊಟ್ಟರೂ ಕೂಡಾ ತಿರುಗಿ ಬರಲಾರದು. ಅಂದಬಳಿಕ ವೇಳೆಯ ಮಹತ್ವವು ಎಷ್ಟಿರುತ್ತದೆ. ಇದನ್ನು ನೀವೇ ವಿಚಾರ ಮಾಡಿರಿ. ಎಂದು ಮೇಲಿಂದ ಮೇಲೆ ಜನರಿಗೆ ಹೇಳುತ್ತಿದ್ದನು. ಇವನು ತಾನು ಮಾಡುವ ಪ್ರತಿಯೊಂದು ಕಾರ್ಯವನ್ನು ಲಕ್ಷಪೂರ್ವಕವಾಗಿ ಚನ್ನಾಗಿ ಮಾಡುತ್ತಿದ್ದನು. ತನ್ನ ಕೆಲಸವನ್ನು

ತಿನೇಯುವರಿಗೆ ಒಪ್ಪಿಸಿ ಅವರ ಮೇಲೆ ಅವಲಂಬಿಸಿ ಪರಾವಲಂಬಿಯಾಗಿ ಎಂದೂ ಕೂಡ್ರುತ್ತಿದ್ದಿಲ್ಲ. ಯಾಕಂದರೆ ಅವರು ಹೇಳಿ ಕೇಳಿ ತಿನೇಯುವರು ಅಂದ ಮೇಲೆ ಅವರು ತಮ್ಮ ಸ್ವಂತ ಕೆಲಸವನ್ನು ಲಕ್ಷಗೊಟ್ಟು ಮಾಡಿದಂತೆ ಯಾಕೆ ಮಾಡ್ಯಾರು? ಒಂದು ವೇಳೆ ಮಾಡಿದರೂ ಕೂಡಾ ಚನ್ನಾಗಿ ಆಗುವದು ಅಶಕ್ಯವು.

ಇವನು ಯಾವಾಗಲೂ ದುರ್ಜನರಿಂದ ದೂರೇ ಇರುತ್ತಿದ್ದನು ದುರಭಿಮಾನವು ಈತನಿಗೆ ಎಳ್ಳಷ್ಟಾದರೂ ಸೇರದು ಇವನ ಉಡುಪು ತೊಡಪುಗಳು ಸಾದಾ ಇದ್ದು ನಿರ್ಮಲವಿರುತ್ತಿದ್ದವು. ಒಣಡೌಲನ್ನು ಎಂದೂ ಮಾಡುತ್ತಿದ್ದಿಲ್ಲ. ಇವನ ದಿನಚರ್ಯವು ಅವರ್ಣನೀಯವಾಗಿತ್ತು. ಇವನು ದಿನಾಲು ಬೆಳಗಿನ ೪ ಘಂಟೆಗೆ ತಪ್ಪದೆ ಏಳುವನು. ಎದ್ದು ಕೆಲವುವೇಳೆ ಪರಮೇಶ್ವರನ ಚಿಂತನೆಯನ್ನು ಮಾಡಿ, ದೊಡ್ಡ ದೊಡ್ಡ ಸಾಧುಸತ್ಪುರುಷರ ದರ್ಶನಲಾಭವನ್ನು ತೆಗೆದುಕೊಂಡು, ಪ್ರಾತರ್ವಿಧಿಯನ್ನು ತೀರಿಸಿಕೊಂಡು ಕೂಡಲೆ ಸ್ನಾನಮಾಡುವನು ತನ್ನ ಇಡೀ ಆಯುಷ್ಯದಲ್ಲಿ ಪ್ರಾತಃಸ್ನಾನವನ್ನು ಎಂದೂ ಬಿಡಲಿಲ್ಲ. ಸ್ನಾನ ಸಂಧ್ಯಾ ಮೊದಲಾದವುಗಳನ್ನು ತೀರಿಸಿಕೊಂಡು, ಅದೇ ಕತ್ತಲೆಯನ್ನು ನಾಶಪಡಿಸಿ, ಸಕಲರಿಗೂ ತನ್ನ ತೇಜೋಮಯವಾದ ಪ್ರಕಾಶವನ್ನು ಕೊಡಲಿಕ್ಕೆಂದು ಆಗಮಿಸುವ ರತ್ನಾಕರನ ದಾರಿಯನ್ನು ನೋಡುತ್ತ ಕೂಡ್ರುವನು. ಸುವರ್ಣಮಯವಾದ ತನ್ನ ಕಿರಣಗಳನ್ನು ಸಕಲ ಸೃಷ್ಟಿಯಮೇಲೆ ಕೆಡಹಿ, ಸಕಲರನ್ನು ಸಂತೋಷಗೊಳಿಸುವ ದಿನಮಣಿಯು ಬಂದಾಕ್ಷಣವೇ ಆನಂದದಿಂದ ಆ ಮಂಗಲಮಯನಾದ ಮರೀಚನ ದರ್ಶನವನ್ನು ತೆಗೆದುಕೊಂಡು, ಒಳ್ಳೇ ಹುರುಪಿನಿಂದ ಅವನಿಗೆ ಸಾಷ್ಟಾಂಗ ಪ್ರಣಿಪಾತವನ್ನು ಹಾಕಹತ್ತುವನು, ತಾನು ಗೊತ್ತುಮಾಡಿಕೊಂಡ ವಂದನೆಗಳು ಮುಗಿದಬಳಿಕ,

ತನ್ನ ನಿತ್ಯದ ಉದ್ಯೋಗಕ್ಕೆ ಆರಂಭಮಾಡುವನು. ಈತನು ತನ್ನ ಮನೆಯ ಸಮೀಪದಲ್ಲಿಯೇ ಒಂದು ದೊಡ್ಡ ಗೋವುಗಳ ಮನೆಯನ್ನು ಕಟ್ಟಿಸಿದ್ದನು. ಸುಮಾರು ಒಂದು ಅರವತ್ತು ಆಕಳುಗಳನ್ನು ಜೋಕೆ ಮಾಡಿದ್ದನು. ದಿನಾಲು ಅವುಗಳಿಂದ ಬಂದ ಹಾಲನ್ನು ಊರಲ್ಲಿಯ ಬಡಬಗ್ಗರ ಶಿಶುಗಳಿಗೆ ಕೊಡುವನು.

ವಾಚಕರೇ:— ನೀವು ಒಂದುವೇಳೆ ಹೀಗೆ ಅನ್ನಬಹುದು ಅವನಿಗೇನುಕಡಿಮೆ, ಮನೆಯಿಂದಂತೂ ಆಗರ್ಭ ಶ್ರೀಮಂತನಿರುವನು. ಆದರೆ ನಮ್ಮ ಸಮಾಜದಲ್ಲಿ ಇವನಿಗಿಂತಲೂ ದೊಡ್ಡ ಶ್ರೀಮಂತರಿರುವರು. ಆದರೆ ಇಂಥ ಶ್ರೀಮಂತರನ್ನು ತಗೊಂಡು ಏನು ಮಾಡುವದು. ಶ್ವಾನಗಳೂ ಕೂಡಾ ಇವರನ್ನು ಮನ್ನಿಸಲಾರವು. ಬರೇ ಹಣವನ್ನಷ್ಟು ನೇತ್ರಗಳಿಂದ ನೋಡುತ್ತ ಆನಂದ ಪಡುವರು. ಹೊಟ್ಟೆಗೂ ಸಹ ಪೂರಾ ತಿನ್ನುವದಿಲ್ಲ. ಬೈರಾಗಿಗಳಂತೆ ತಿರುಗುವರು. ಮೈತುಂಬ ಅರಿವೆಯನ್ನು ಕೂಡ ಹಾಕಿಕೊಳ್ಳುವದಿಲ್ಲ. ಅಂದ ಬಳಿಕ ಇಂಥ ಶ್ರೀಮಂತರು ಲಕ್ಷಾವಧಿ ಜನರಿದ್ದರೂ ವ್ಯರ್ಥವೇಸರಿ. ಆದರೆ ಸದಾಶಿವನು ಮಾತ್ರ ಇಂಥ ಕಂಗಾಲ ಶ್ರೀಮಂತನಲ್ಲ ನಿಜವಾದ ಲಕ್ಷ್ಮೀಪುತ್ರನು. ಅಂತೆಯೇ ಆ ಊರದ ನಾಗರೀಕರು “ನಮ್ಮ ನಗರದ ಕಲ್ಪವೃಕ್ಷವೆನ್ನುತ್ತಿದ್ದರು. ಇವನ ಕೀರ್ತಿಯು ಸುಮಾರು ೫೦ ಹರದಾರಿಗಳವರೆಗೆ ಪಸರಿಸಿತ್ತು. ಸರಕಾರದಲ್ಲಿಯೂ ಕೂಡ ಇವನಿಗೆ ಮಾನ ಮರ್ಯಾದೆಗಳನ್ನು ಬಹಳಮಾಡುತ್ತಿದ್ದರು. ಇವನೇ ಆ ಸುವರ್ಣಪುರದಲ್ಲಿಯ ದೊಡ್ಡ ಪಂಚನು ಕಾಯದೇ ಕೌನ್ಸಿಲ್ ಮುನಸೀಪಾಲಟಿ, ಲೋಕಲ್ ಬೋರ್ಡ, ಮುಂತಾದವುಗಳ ಚುನಾವಣಿಗೂ ನಿಲ್ಲುತ್ತಿದ್ದನು. ಯಾವಾಗಲೂ ಇವನೇ ಆರಿಸಿ ಬರುತ್ತಿದ್ದನು. ಚುನಾವಣಿಗೆ ಸದಾಶಿವರಾಯರು ನಿಂತಾರೆಂದು ತಿಳಿದರೆ

ಸಾಕು. ಮತಗಳ ಸುರಿಮಳೆಯೇ ಆಗುತ್ತಿತ್ತು. ಯಾಕೆಂದರೆ ನಿಷ್ಪಕ್ಷಪಾತತನದಿಂದ ಕಾರ್ಯವನ್ನು ಮಾಡುತ್ತಿದ್ದನು. ಜನರ ಕಲ್ಯಾಣವೇ ತನ್ನ ಕಲ್ಯಾಣವೆಂದು ತಿಳಿಯುತ್ತಿದ್ದನು. ಈ ಪ್ರಕಾರವಾಗಿ ಎಲ್ಲರಿಗೂ ಬೇಕಾಗಿದ್ದನು. ಇವನಂತೆಯೇ ಇವನಿಗೆ ಹುಟ್ಟಿದ ಮಗುವಾದರೂ ಒಂದು ರತ್ನದಂತೆ ಇತ್ತು. ಸದಾಶಿವನು ಅದಕ್ಕೆ ಅಪರೂಪವಾದ ಕಮಲಾಕರನೆಂದು ಹೆಸರಿಟ್ಟಿದ್ದನು. ತಂದೆ ತಾಯಿಗಳು ಇವನನ್ನು ಬಹಳವಾಗಿ ಪ್ರೀತಿಸುತ್ತಿದ್ದರು.

ಇಷ್ಟೇ ಅಲ್ಲ. ಇಡೀ ನಾಗರಿಕರು ಸಹ ಇವನು ಯಾರ ಮಗನೆಂದು ಕೇಳಿದರೆ, ನಮ್ಮ ಕಲ್ಪವೃಕ್ಷಕ್ಕೆ ಸಹಾಯ ಮಾಡಲು ಬಂದಿರುವ ಚಿಂತಾಮಣಿಯನ್ನುತ್ತಿದ್ದರು.

ಸದಾಶಿವನಿಗೆ ಸೃಷ್ಟಿ ಸೌಂದರ್ಯವನ್ನು ನೋಡುವ ಕುತೂಹಲವು ಹೆಚ್ಚು. ಆದ್ದರಿಂದ ಅವನು ದಿನಾಲು ನಿಸರ್ಗ ದೇವತೆಯ ಆನಂದಮಯವಾದ ನೋಟವನ್ನು ನೋಡಲಿಕ್ಕೆ ಎಂದೂ ಮರೆಯನು.

ಒಂದಾನೊಂದು ದಿವಸ ಇವನೂ ಇವನ ಗೆಳೆಯನಾದ ವಸಂತನೂ ಕೂಡಿ, ಅಲ್ಲಿಯೇ ಎರಡು ಮೈಲುಗಳ ಮೇಲಿರುವ ನದಿಯ ಕಡೆಗೆ ಅಡ್ಡಾಡಲಿಕ್ಕೆ ಹೋದರು. ಆಗ ವಸಂತಕಾಲವಿತ್ತು. ನದಿಯ ಜಲವಂತೂ ಅತ್ಯಂತ ನಿರ್ಮಲವಿತ್ತು. ನೀರಿನಲ್ಲಿ ಮುಖವನ್ನು ನೋಡಿದರೆ ಪ್ರತಿಬಿಂಬವು ಕಾಣಬೇಕು. ಇಷ್ಟು ನಿರ್ಮಲವಾಗಿದ್ದವು. ಅಲ್ಲಿಯೇ ಒಂದು ಫರ್ಲಾಂಗದ ಮೇಲೆ ಒಂದು ಖಡಕವಿತ್ತು. ಅದು ಒಂದು ಚಿಕ್ಕ ತಡಸಲವೇ ಆಗಿತ್ತು

ಅಲ್ಲಿಯ ನೀರು ಒಂದೇ ಸವನೆ ಅಖಂಡವಾಗಿ ಸಕಲರಿಗೂ ದಿವ್ಯವಾದ ಸಂದೇಶವನ್ನು ಹೇಳುವಂತೆ ಇಂಪಾದ ಸಪ್ಪಳವನ್ನು ಮಾಡುತ್ತ ಹರಿಯುತ್ತಿತ್ತು.

ಆಗ ಸದಾಶಿವನುಃ— "ವಸಂತಾ ನೋಡಿದಿಯಾ ಈ ನೀರು ಯಾರ ದಾರಿಯನ್ನು ನೋಡುತ್ತದೆಯೋ ನೋಡು, ಇದರಲ್ಲಿ ಎಷ್ಟು ಸ್ವಾವಲಂಬಿತ್ವವಿರುವದು. ತನ್ನ ಕರ್ತವ್ಯವನ್ನು ಎಷ್ಟು ಉತ್ತಮರೀತಿಯಿಂದ ಮಾಡಹತ್ತಿರುವದು. ಅಗೋ ಅತ್ತ ಪಶ್ಚಿಮದಿಕ್ಕಿನಕಡೆಗೆ ನೋಡು ಸೂರ್ಯನಾರಾಯಣನು ತನ್ನ ಕರ್ತವ್ಯವನ್ನು ಮುಗಿಸಿ ವಿಶ್ರಾಂತಿಗಾಗಿ ಹೊರಟಿರುವನು. ಅಹಾ! ಇವನೆಷ್ಟು ಸ್ವಾವಲಂಬಿಯು ಮತ್ತು ಮಿತವ್ಯಯಿಯು? ಈತನು ತನ್ನ ಕಾರ್ಯವನ್ನು ದಿನಾಲು ತಪ್ಪದೆ ಆನಂದದಿಂದ ಕೊನೆಗಾಣಿಸುವನು. ಮತ್ತು ಯಾರ ದಾರಿಯನ್ನು, ನೋಡನು. ಮತ್ತು ಯಾರ ಮೇಲೆಯೂ ಅವಲಂಬಿಸಿ ಕೂಡ್ರಲಾರನು. ಅಕೋ ಅತ್ತ ಪೂರ್ವದಿಕ್ಕಿನಕಡೆಗೆ ನೋಡು, ಸವಿತೃನ ಸಹೋದರನಾದ ಶಾಂತ ಮೂರ್ತಿಯಾದ ಸೋಮನು ತನ್ನ ಕಾರ್ಯವನ್ನು ಕೊನೆಗಾಣಿಸಲು ಬಂದಿರುವನು. ಅಹಾ! ಈ ನಿಸರ್ಗ ದೇವತೆಯು ನಮ್ಮೆಲ್ಲರಿಗೆ ಎಷ್ಟು ದಿವ್ಯವಾದ ಸಂದೇಶವನ್ನು ಹೇಳುವಳು ನೋಡು ಈಕೆಯ ಸಂದೇಶದಮೇರೆಗೆ, ನಾವು ತಪ್ಪದೆ ವರ್ತಿಸಿದಲ್ಲಿ ನಮ್ಮ ಸೌಖ್ಯಕ್ಕೆ ಎಣೆಯೇ ಇಲ್ಲ. ವಸಂತಾ ಈ ಜಗತ್ತಿನಲ್ಲಿಯ ಪೂರ್ಣ ಸೃಷ್ಟಿ ಸೌಂದರ್ಯವನ್ನು ನೋಡಬೇಕಾದರೆ, ನಮ್ಮ ನೇತ್ರಗಳೂ ಸಾಲವು. ಮತ್ತು ಆಯುಷ್ಯವಾದರೂ ಸಾಲುವದಿಲ್ಲ ಅಂದಮೇಲೆ ಜಗದೀಶನ ಮಹಿಮೆಯನ್ನು ಎಷ್ಟೆಂದು ಹೇಳಲಿ. ಇರಲಿ. ಒಟ್ಟಿಗೆ ನನ್ನ ನಿಶ್ಚಿತವಾದ ಮತವೆಂದರೆ, ಪ್ರತಿಯೊಬ್ಬ ಮನುಷ್ಯನು ಸ್ವಾವಲಂಬಿಯೂ, ಆತ್ಮವಿಶ್ವಾಸಿಯೂ, ನಿಷ್ಕಪಟಿಯೂ, ಮಿತವ್ಯಯಿಯೂ, ಆಗಲಿಕ್ಕೆ ಬೇಕು. ಅಂದರೆನೇ ನಮ್ಮ ರಾಷ್ಟ್ರದ ಉತ್ಕರ್ಷವಾಗುವದು.

ವಸಂತಾ ಎಲ್ಲಿಯವರೆಗೆ ನಮ್ಮ ಸಮಾಜದಲ್ಲಿ ಪರನಿಂದೆಯನ್ನು ಮಾಡುವ ನೀಚರ, ಅಕ್ಕತಂಗಿ ಮೊದಲಾದವರನ್ನು

ಕೂಡಲಕ್ಷಿಸದೆ, ಪರಸ್ತ್ರೀಯರನ್ನು ತಮ್ಮ ನೀಚವಾದ ದೃಷ್ಟಿಯಿಂದನೋಡುವ ನರಪಶುಗಳ, ಪರಾವಲಂಬಿಗಳ ಮತ್ತು ಮನೆಯ ಅಶನವನ್ನು ತಿಂದು ಹಾಲಿನಲ್ಲಿ ಉಪ್ಪು ಬೆರೆಸುವಂಥ ಕಾರ್ಯಗಳನ್ನು ಮಾಡುವ ದುಷ್ಟರ ಸಂಖ್ಯೆಯು ಕಡಿಮೆಯಾಗದ ಹೊರತು, ನಮ್ಮ ಸಮಾಜವು ಸುಧಾರಿಸಲಾರದು. ಏತಾ್ರ ಮನೆಯ ಕೂಳನ್ನು ತಿಂದು ಪರರಿಗೆ ಮನಬಂದಂತೆ ಹೆಸರಿಡುವದು ಅವರು ಮಾಡುವ ವಂದನೀಯವಾದ ಕಾರ್ಯಗಳನ್ನು ಮುರಿಬಡಿಯಲಿಕ್ಕೆ ಹವಣಿಸುವದು. ಇಂಥ ನೀಚವಾದ ಕೆಲಸವನ್ನು ಮಾಡುವ ಕಾರಣವು ಈ ದುಷ್ಟರಿಗೇಕೆ? ಈ ನೀಚರೇನು ಅವರ ಸಂಕಟವನ್ನು ದೂರಮಾಡುವರೇ ಎಂದೂ ಇಲ್ಲ. ಅಂದಬಳಿಕ ಹೀಗೆ ಶ್ವಾನಗಳಂತೆ ಬೊಗಳುವ ಫಲವೇನು?' ಅಂತಾ ಅನ್ನಲಾಗಿ ವಸಂತನುः– '' ಸದಾಶಿವಾ, ಆ ನೀಚರಿಗೆ ಹೀಗೆ ಮಾಡಿದ ಹೊರತು ಅವರ ಆತ್ಮಕ್ಕೆ ಸಮಾಧಾನವೇ ಆಗುವದಿಲ್ಲ ''

ಆಗ ಸದಾಶಿವನು:– ಅವರ ಆತ್ಮವಾದರೂ ಎಂಥದಿರುವದೋ ಅವರಿಗೂ, ಅವರ ಆತ್ಮಕ್ಕೂ ಧಿಃಕಾರವಿರಲಿ. ನಮಗೆ ಇಂಥ ದುರ್ವಿಚಾರಗಳು ಸ್ವಪ್ನದಲ್ಲಿ ಸಹ ಬರಲಾರವು. ಇದೊಂದು ನಮ್ಮ ಸುದೈವವೇ ಸರಿ.

ವಾಚಕರೇ ನೋಡಿದಿರಾ! ಸದಾಶಿವನ ಉದಾತ್ತ ತತ್ವಗಳನ್ನು, ನಮ್ಮ ದೇಶದಲ್ಲಿ ಇಂಥ ಸದ್ಗುಣಿಗಳಾದ ಎಷ್ಟೋ ನರರತ್ನಗಳು ಜನಿಸಲಿಕ್ಕೆಬೇಕು. ಅಂದರೆ ನಮಗೂ, ನಮ್ಮ ದೇಶಕ್ಕೂ ಸೌಖ್ಯವು ಪ್ರಾಪ್ತವಾಗುವದು. ಸದಾಶಿವನ ಮನೆತನವೆಂದರೆ ಒಂದು ಆದರ್ಶಕುಟುಂಬವಾಗಿತ್ತು.

ಕೂದಲೆಳೆಗೆ ಕುತ್ತಿಗೆಯಮೇಲೆ ಚೂರಿಯನ್ನಿಟ್ಟು ಮತ್ತು ಮೇಲೆ ಸಂಭಾವಿತರಂತೆ ವರ್ತಿಸುವ ಗೋಮುಖ ವ್ಯಾಘ್ರವನ್ನು

ನೋಡಿದಾಕ್ಷಣಕ್ಕಂತೂ ಅತ್ಯಂತ ಶಿಟ್ಟಾಗುವನು. ಅವರಿಗೆ ಸಾಯುವ ಪ್ರಸಂಗಬಂದರೂ ಸಹಾಯವನ್ನು ಎಂದೂ ಮಾಡುತ್ತಿದ್ದಿಲ್ಲ. ಸದಾಶಿವನ ಪತ್ನಿಯಾದರೂ, ಅವನಂತೆಯೇ ಸದ್ಗುಣಿಯಾಗಿದ್ದಳು. ಅವನಿಗೆ ಈಶ್ವರಕೃಪೆಯಿಂದ ಎಲ್ಲತರದ ಅನುಕೂತೆಗಳು ಲಭಿಸಿದ್ದವು.

ಮನುಷ್ಯನು ಎಷ್ಟೇ ಶ್ರೀಮಂತನಿರಲಿ, ಅವನಿಗೂ ಅನೇಕ ಸಂಕಟಗಳು ಒದಗುವವು. ಅದರಂತೆ ಸದಾಶಿವನಿಗಾದರೂ ಪ್ರಪಂಚದಲ್ಲಿ ಅನೇಕ ಸಂಕಟಗಳು ಒದಗುತ್ತಿದ್ದವು. ಆದರೆ ಎದೆಗುಂದದೆ ಯುಕ್ತಿಯಿಂದ ಪಾರಾಗುತ್ತಿದ್ದನು. ಅವನೂ ಅವನ ಕುಟುಂಬದವರು ಯಾವಾಗಲೂ ಸಂತೋಷ ಸಾಮ್ರಾಜ್ಯದಲ್ಲಿ ವಾಸಿಸುತ್ತಿದ್ದರು. ಇದೆಲ್ಲ ಸದಾಶಿವನ ಕೀರ್ತಿಯು ಬೆಳೆಯಲಿಕ್ಕೆ ಅವನು ಸದ್ಗುಣಸಂಪನ್ನನಿದ್ದು ಯಾವಾಗಲೂ, ಸ್ವಾವಲಂಬನ, ಆತ್ಮವಿಶ್ವಾಸ ಮುಂತಾದ ಸಂಸಾರಸಾಗರವನ್ನು ಪಾರುಮಾಡುವಂಥ ಶಕ್ತಿಯುಳ್ಳ ಮಂತ್ರಗಳ ಜಪವನ್ನು ತಪ್ಪದೆ ಮಾಡುತ್ತಬಂದ ಫಲವಲ್ಲವೇ !

# ಸಜ್ಜನರ ಸಂದೇಶವು.

ಯಾವ ಮನುಷ್ಯನು ಸಜ್ಜನರ ಸಂದೇಶದಂತೆ ತನಗೆ ಶಕ್ಯವಿದ್ದಷ್ಟರ ಮಟ್ಟಿಗೆ ತಪ್ಪದೆ ವರ್ತಿಸುವನೋ ಅವನು ಯಾವಾಗಲೂ ಸಂತೋಷಸಾಗರದಲ್ಲಿ ಈಸಾಡುವನು. ಅವನಿಗೇ ವಿಜಯಲಕ್ಷ್ಮಿಯು ಮಾಲೆಯನ್ನು ಹಾಕುವಳು. ಆ ದಿವ್ಯವಾದ ಸಂದೇಶದಂತೆ, ಎಲ್ಲರೂ ವರ್ತಿಸತಕ್ಕದ್ದು. ಆ ಸಂದೇಶವು ಯಾವದೆಂದರೆ, " ಎಲೈ ಮಾನವರೇ ಜಗದೀಶನು ನಿಮಗೆ ಶ್ರೇಷ್ಠವಾದ ಜನ್ಮವನ್ನು ಕೊಟ್ಟಿರುವನು. ಇದರ ಯೋಗ್ಯ ಉಪಯೋಗವನ್ನು ಮಾಡಿಕೊಳ್ಳಿರಿ. ವ್ಯರ್ಥವಾಗಿ ಆಯುಷ್ಯವನ್ನು ಹಾಳು ಮಾಡಿಕೊಳ್ಳಬೇಡಿರಿ. ವೇಳೆಯನ್ನು ಕೇವಲ ಅಮೃತದಂತೆ, ಉಪಯೋಗ ಮಾಡಿಕೊಳ್ಳಿರಿ. ಶರೀರ ಸಂಪತ್ತಿಯನ್ನು ಯೋಗ್ಯ ರೀತಿಯಿಂದ ರಕ್ಷಣೆ ಮಾಡಿರಿ. ಯಾವಾಗಲೂ ಸತ್ಕರ್ಮವನ್ನೇ ಮಾಡುತ್ತಾ ಹೋಗಿರಿ. ಈ ಕಲಿಯುಗದಲ್ಲಿ ಜಪ, ತಪ ಮುಂತಾದ ಕಠಿಣ ವ್ರತಗಳನ್ನು ಮಾಡಲಿಕ್ಕೆ ಶಕ್ಯವಿಲ್ಲ. ಆದ್ದರಿಂದ ಪರಮೇಶ್ವರನ ಪರಮ ಪವಿತ್ರವಾದ ನಾಮಸ್ಮರಣೆಯೇ ಮಹತ್ವವಾದದ್ದು. ಆದ್ದರಿಂದ ದಿನಾಲು ನಿಮಗೆ ಎಷ್ಟೇ ಉದ್ಯೋಗವಿದ್ದರೂ, ಅದರಲ್ಲಿಯೇ ತುಸು ವೇಳೆಯನ್ನು ಸವಡುಮಾಡಿಕೊಂಡು, ಆ ವೇಳೆಯಲ್ಲಿ ಏಕಚಿತ್ತದಿಂದ ಜಗದೀಶನ ಮಂಗಲಮಯವಾದ ನಾಮಸ್ಮರಣೆಯನ್ನು ತಪ್ಪದೆ ಮಾಡಿರಿ. ನಿಮಗೆ ದಿನಾಲು ಪ್ರತ್ಯಕ್ಷವಾಗಿ ತೋರುವ ದಿನಮಣಿಗೆ, ತಪ್ಪದೆ ಶಕ್ಯವಿದ್ದಷ್ಟು ಸಾಷ್ಟಾಂಗ ಪ್ರಣಿಪಾತವನ್ನು ಹಾಕಿರಿ. ಇವರಲ್ಲಿ ಸ್ವಾರ್ಥ ಪರಮಾರ್ಥಗಳೆರಡೂ ಸಾಧಿಸುವವು. ಆದ್ದರಿಂದ ರತ್ನಾಕರನಿಗೆ ನಮಸ್ಕಾರವನ್ನು

ಹಾಕಲಿಕ್ಕೆ ಎಂದೂ ಮರೆಯಬೇಡಿರಿ. ಯಾವ ಮಾತೆಯ ಹಾಲಿನಿಂದ ರೋಗಿಗಳು ನಿರೋಗಿಗಳಾಗುವರೋ, ಶಿಶುಗಳು ಪುಷ್ಟವಾಗುವವೋ, ಅದೇ ಹಾಲಿನಿಂದ, ಸುರರು ಸಂತೋಷ ದಿಂದ ಸ್ನಾನಮಾಡುವರು. ದೇವತೆಗಳಿಗೂ ಪೂಜ್ಯವಾದ ಆಗೋ ಮಾತೆಯ ಸೇವೆಯನ್ನು ತನು, ಮನ ಧನದಿಂದ ಶಕ್ಯವಿದ್ದಷ್ಟು ಮಾಡುವದು ನಿಮ್ಮೆಲ್ಲರ ಆದ್ಯಕರ್ತವ್ಯವಿರುತ್ತದೆ. ಅದನ್ನು ನೀವು ಮಾಡಲೇಬೇಕು. ಇದರಿಂದ ನಿಮಗೆ ಪರಮ ಪುಣ್ಯವು ಲಭಿಸುವದು. ನೀವು ಸಕಲರ ಕೂಡ ಪ್ರೇಮದಿಂದ ವರ್ತಿಸಿರಿ. ಪರಸ್ತ್ರೀಯರಕೂಡ ಭಗಿನಿಯರಂತೆ ವರ್ತಿಸಿರಿ. ಯಾವಾಗಲೂ, ಸ್ವಾವಲಂಬನ, ನಿಃಸಂಶಯ, ಆತ್ಮವಿಶ್ವಾಸ, ಧೈರ್ಯ, ಪ್ರಾಮಾ ಣಿಕತನ, ನಿಷ್ಕಪಟತನ, ನಮ್ರತನ, ಚಟುವಟಿಕೆ, ಪರೋಪ ಕಾರ ಈ ನವರತ್ನಗಳಿಂದ, ಕೂಡಿದ ಜಪಮಾಳೆಯನ್ನು ಯಾವಾ ಗಲೂ ನಿಮ್ಮ ಹತ್ತರ ಇಟ್ಟುಕೊಳ್ಳಿರಿ. ಅದನ್ನು ಎಂದೂ ಕಳೆಯ ಬೇಡಿರಿ ಎರಡನೇಯವರ ಮನಸ್ಸಿಗೆ ಹತ್ತುವ ಹಾಗೆ ಕೆಟ್ಟ ಮಾತುಗಳನ್ನು ಎಂದೂ ಆಡಬೇಡಿರಿ. ಮತ್ತು ಮನೆಯ ಕೂಳನ್ನು ತಿಂದು, ನಿಷ್ಕಾರಣವಾಗಿ ಎರಡನೇಯವರ ಉಸಾಬರಿಯನ್ನು ಮಾಡಿ, ಮಂಗನಹಾಗೆ ಹಲ್ಲನ್ನು ತೆಗೆಯಬೇಡಿರಿ. ಬಿದ್ದವರನ್ನು ನೋಡಿ ನಗಬೇಡಿರಿ. ಅವರನ್ನು ಎಬ್ಬಿಸುವ ಪ್ರಯತ್ನವನ್ನು ಮಾಡಿರಿ ಒಣ ದುರಭಿಮಾನಕ್ಕೆ ಬಿದ್ದು ಮನೆಮಾರುಗಳನ್ನು, ಕಳಕೊಳ್ಳಬೇಡಿರಿ ಗರ್ವವೆಂಬ ರಾಕ್ಷಸನ ಗೆಳೆತನವನ್ನು ಎಂದೂ ಮಾಡಬೇಡಿರಿ. ಯಾಕಂದರೆ ಅವನು ಹೇಳಿ ಕೇಳಿ ರಾಕ್ಷಸನು ಅವನ ಸಂಗವನ್ನು ಮಾಡಿದರೆ, ನಿಮ್ಮನ್ನು ಕ್ಷಣಮಾತ್ರದಲ್ಲಿ ನುಂಗಿ ನೀರು ಕುಡಿದು ಬಿಡುವನು. ಆದ್ದರಿಂದ ಅವನ ಸಂಗತಿ ಯು ಉಪಯೋಗದ್ದಲ್ಲ. ಯಾರಿಗೂ ಒಂಟಿ ಹೆಸರಿನಿಂದ ಕರೆಯ ಬೇಡಿರಿ. ಕೆಟ್ಟ ವ್ಯಸನಗಳಿಗೆ ಒಳಗಾಗಬೇಡಿರಿ. ಯಾವಾಗಲೂ

ಉದ್ಯೋಗವನ್ನು ಮಾಡಿರಿ. ಆಗರ್ಭ ಶ್ರೀಮಂತನಿದ್ದರೂ ಕೂಡಾ, ಅವನು ಉದ್ಯೋಗವನ್ನು ಮಾಡಲಿಕ್ಕೆಬೇಕು, ಅಂದ ಮೇಲೆ ಉದ್ಯೋಗದ ಮಹತ್ವವು ಎಷ್ಟಿರುತ್ತದೆಂಬದನ್ನು, ಬೇರೆ ಹೇಳಬೇಕಾಗಿಲ್ಲ. ಯಾವಾಗಲೂ ಉತ್ತಮವಾದ ಪುಸ್ತಕಗಳ ವಾಚನವನ್ನು ಮಾಡಿರಿ. ಕ್ಷಣ ಕ್ಷಣಕ್ಕೆ ಕೆಟ್ಟ ಕೆಲಸಗಳನ್ನು ಮಾಡಿ ಮೇಲೆ ಸಂಭಾವಿತರಂತೆ ವರ್ತಿಸುವ ನರಪಶುಗಳ, ಗೆಳೆತನವನ್ನು ಎಂದೂ ಮಾಡಬೇಡಿ. ದೊಡ್ಡ ದೊಡ್ಡ ಸಾಧು ಸತ್ಪುರುಷರ, ಪರಾಕ್ರಮಿ ಶಾಲಿಗಳ ಮತ್ತು ದೇವರ ಚಿತ್ರಗಳನ್ನು ನಿಮ್ಮ ಗೃಹದಲ್ಲಿ ಹಚ್ಚಿ ದಿನಾಲು ಅವುಗಳ ದರ್ಶನ ಲಾಭವನ್ನು ತೆಗೆದುಕೊಂಡೆ ನಿಮ್ಮ ಉದ್ಯೋಗಕ್ಕೆ ಕೈಹಚ್ಚಿರಿ. ನಿಮಗೆ ಶಕ್ಯವಿದ್ದಷ್ಟು ಸೃಷ್ಟಿ ಸೌಂದರ್ಯವನ್ನು ನೋಡಲಿಕ್ಕೆ ಎಂದೂ ಮರೆಯಬೇಡಿರಿ. ಮನಸ್ಸಿನಲ್ಲಿ ಕೆಟ್ಟ ವಿಚಾರಗಳಿಗೆ ಸ್ಥಳವನ್ನು ಎಂದೂ ಕೊಡಬೇಡಿರಿ. ಯಾವಾಗಲೂ ಆನಂದಮಯವಾದ ಮತ್ತು ಉತ್ಸಾಹದಿಂದ ತುಂಬಿ ತುಳುಕುವ ವಿಚಾರಗಳ ಸಂಗ್ರಹವನ್ನೇ ಮಾಡಿರಿ. ಎರಡನೇಯವರ ಆದರ ಸತ್ಕಾರವನ್ನು ಮಾಡುವಾಗ, ನೀವು ಪಾವರಕ್ಷೆಯಕ್ಕಿಂತಲೂ ಕಡಿಮೆಯಾಗಬೇಡಿರಿ. ನಿಮ್ಮ ಯೋಗ್ಯವಾದ ಮರ್ಯಾದೆಯನ್ನು ಇಟ್ಟುಕೊಂಡೇ, ಅವರ ಆದರ ಸತ್ಕಾರವನ್ನು ಮಾಡಿರಿ. ಈ ಜಗತ್ತಿನಲ್ಲಿ ವೇಳೆಯು ಅತಿ ಮಹತ್ವದ್ದು, ಬೇಕಾದ ಧನ ದೌಲತ್ತನ್ನು ಕಳಕೊಂಡರೂ, ಒಂದು ವೇಳೆ ಅದನ್ನು ತಿರುಗಿ ದೊರಕಿಸಬಹುದು. ಆದರೆ ಹೋದ ವೇಳೆಯು ಮಾತ್ರ, ಎಂದೂ ತಿರುಗಿ ಬರಲಾರದು. ಆದ್ದರಿಂದ ದೇವತೆಗಳು ಅಮೃತವನ್ನು ಹ್ಯಾಗೆ ಉಪಯೋಗ ಮಾಡಿಕೊಳ್ಳುವರೋ, ಅದರಂತೆಯೇ ನೀವು ವೇಳೆಯ ಉಪಯೋಗವನ್ನು ಮಾಡತಕ್ಕದ್ದು. ಒಟ್ಟಿಗೆ ಹೇಳುವದೇನಂದರೆ, ಮೇಲೆ ಹೇಳಿದಂತೆ ತಪ್ಪದೆ ವರ್ತಿಸುತ್ತ ಹೋಗಿರಿ

ಅಂದರೆ ನಿಮಗೆ ಇಹಪರಗಳಲ್ಲಿ ಸೌಖ್ಯವು ಪ್ರಾಪ್ತವಾಗುವದು. ನಿಮಗೆ ಬೇಕಾದಷ್ಟು ಸಂಕಟಗಳು ಒದಗಿದರೂ ಕೂಡ, ಈಶ ಕೃಪೆಯಿಂದ ಅದರೊಳಗಿಂದ ನೀವು ಪಾರಾಗುವಿರಿ. ಮತ್ತು ಅನಂತ ಕೀರ್ತಿಯನ್ನು ಪಡೆಯುವಿರಿ.

---

# ಯೋಗ್ಯದಿಂದ ವೆಚ್ಚಮಾಡುವದೇ ವೈಭವದ ತಳಹದಿಯು.

ಈ ಜಗತ್ತಿನಲ್ಲಿ, ಯಾವ ಮನುಷ್ಯನು ಪ್ರತಿಯೊಂದು ಕಾರ್ಯದಲ್ಲಿ, ತನ್ನ ಯೋಗ್ಯತೆಯನ್ನು ಅರಿತುಕೊಂಡು ವೆಚ್ಚ ಮಾಡುವನೋ, ಅವನು ಯಾವಾಗಲೂ ವೈಭವಾಲಯದಲ್ಲಿ ವಾಸಿಸುವನು. ಯಾವನು ಇವನ್ನು, ಅರಿತುಕೊಳ್ಳದೆ ಮನಬಂದಂತೆ ಜನರು ಹೇಳುವ ಭರಿಗೆಬಿದ್ದು, ಮತ್ತು ಒಣ ದೊಡ್ಡಸ್ತಿಕೆಯ ಅಭಿಮಾನಕ್ಕೆ ಬಿದ್ದು, ಸಿಕ್ಕ ಸಿಕ್ಕಂತೆ ವೆಚ್ಚಮಾಡಿ ಅಧೋಗತಿಯ ಸಾಮ್ರಾಜ್ಯಕ್ಕೆ ಪಲಾಯನ ಮಾಡುವನು. ಯಾವ ಜನರು ನಿಷ್ಕಾರಣವಾಗಿ ಇವನನ್ನು ಭರಿಗೆ ಹಾಕುವರೋ, ಅದೇ ಜನರು ಇವನಿಗೆ ಪ್ರಾಪ್ತವಾದ ಹೀನ ಸ್ಥಿತಿಯನ್ನು ಕಂಡು ಹೀಯಾಳಿಸುವರು. ಸಹಾಯ ಮಾಡುವದಂತೂ ಒತ್ತಟ್ಟಿಗೇ ಉಳಿಯಿತು. ನೋಡಿದಿರಾ! ಅವಿಚಾರದ ಪರಿಣಾಮವನ್ನು; ಸಮಾಜದಲ್ಲಿ ಪ್ರತಿಯೊಬ್ಬ ಸಂಸಾರಿಕನಿಗೆ ಪದೇ ಪದೇ ವೆಚ್ಚಮಾಡುವ ಪ್ರಸಂಗವು

ಬಂದೇ ಬರುವದು. ಆ ವೇಳೆಗೆ ಇಲ್ಲೆನ್ನಲಿಕ್ಕೆ ಬರುವದಿಲ್ಲ. ಯಾಕಂದರೆ ನಮಗೂ ಅಂಥ ಪ್ರಸಂಗಗಳು ಇದ್ದೇ ಇರುವವು. ಅಂದಬಳಿಕ ಒಬ್ಬರಿಗೊಬ್ಬರು ಸಹಾಯವನ್ನು ಮಾಡಲಿಕ್ಕೆ ಬೇಕು. ಮಾಡದೆ ಇರುವದು ನಿರ್ಲಜ್ಜತನವು. ನಾವು ಯಾವಾಗಲೂ ನಮ್ಮ ಯೋಗ್ಯತೆಗೂ, ಆದಾಯಕ್ಕೂ ಅನುಸರಿಸಿ ವೆಚ್ಚವನ್ನು ಮಾಡಲಿಕ್ಕೆಬೇಕು. ಹೀಗೆ ಮಾಡಿದಲ್ಲಿ ನಮಗೆ ಹೀನಸ್ಥಿತಿಯು ಎಂದೂ ಬರಲಾರದು. ಕೆಲವು ಜನರ ತಿಳುವಳಿಕೆಯು ಹೀಗೆ ಇರುವದಲ್ಲಾ " ಏನರೀ ಎಷ್ಟು ಫಂಡಗಳು, ಎಷ್ಟು ವರ್ಗಣಿಗಳು ನಮ್ಮ ತಲೆಯೆದ್ದು ಹೋಗಿರುತ್ತದೆ. ಒಬ್ಬನು ಅನ್ನುತ್ತಾನೆ ಕೀರ್ತನಕ್ಕೆ ಸಹಾಯ ಮಾಡಿರಿ. ಇನ್ನೊಬ್ಬನು ಅನ್ನುತ್ತಾನೆ. ದೇವಾಲಯದ ಜೀರ್ಣೋದ್ಧಾರಕ್ಕೆ ಸಹಾಯ ಮಾಡಿರಿ. ಮತ್ತೊಬ್ಬನು ಬರುತ್ತಾನೆ. ಶಿಕ್ಷಣಕ್ಕೆ ಸಹಾಯ ಮಾಡಿರಿ. ಬೇರೊಬ್ಬನು ಬರುತ್ತಾನೆ ನಮಗೆ ಸಂಭಾವನೆಯನ್ನು ಕೊಡಿರಿ. ಏನು ಒಂದೋ ಎರಡೋ ಎಷ್ಟೆಂತ ಹೇಳಬೇಕು ಹೇಳಲು ಅಸಾಧ್ಯವು ಅಂದಬಳಿಕ ಇವರಿಗೆ ಹಣವನ್ನು ಕೊಡಬೇಕಾದರೆ ನಮಗೆ ಅಸಾಧ್ಯವು. ಈಗಿನ ಪರಿಸ್ಥಿತಿಯಲ್ಲಿ ನಮ್ಮ ಪ್ರಪಂಚವನ್ನು ಸಾಗಿಸಿಕೊಂಡು ಹೋಗುವದು ಕಠಿಣವಾಗಿದೆ ಅಂದ ಮೇಲೆ ಇವರು ಎಲ್ಲರು ಬೇಡಿದಷ್ಟು ಕೊಡುತ್ತಾ ಹೋದರೆ, ನಾವು ಕ್ಷಣಮಾತ್ರದಲ್ಲಿ ಅಧೋಗತಿಯ ರಾಜ್ಯಕ್ಕೆ ಹೋಗಲಿಕ್ಕಿಲ್ಲವೇ ? ಎಂದು ಅನ್ನಬಹುದು.

ನೀವು ಅನ್ನುವದು ನಿಜವಿರುತ್ತದೆ. ಹ್ಯಾಗಂದರೆ ಅವರು ಬೇಡಿದಷ್ಟು ಕೊಡುತ್ತಾಹೋದರೆ, ನಾವು ನಿಶ್ಚಯವಾಗಿಯೇ ಅಧೋಗತಿಯ ರಾಜ್ಯಕ್ಕೆ ಹೋಗುತ್ತೇವೆ. ಇದೇನು ಸತ್ಯ ಆದರೆ ನಮಗೆ ಶಕ್ಯವಿದ್ದಷ್ಟು ಕೊಡುತ್ತಾಹೋದರೆ ಮೇಲಿನಂಥ ಪ

ಸಂಗವು ನಮಗೆ ಎಂದೂ ಬರುವದಿಲ್ಲ. "ಜಮೆಯಿದ್ದಲ್ಲಿ ವೆಚ್ಚ ಇರಲಿಕ್ಕೇ ಬೇಕು." ಇದು ಸೃಷ್ಟಿಯ ನಿಯಮವೇ ಇರುತ್ತದೆ. ಆದರೆ ಒಂದೇಸವನೆ ಜಮೆಯನ್ನೇ ಮಾಡುತ್ತೇನೆಂದರೂ ಅಶಕ್ಯವು. ಮತ್ತು ಒಂದೇಸವನೆ ವೆಚ್ಚ ಮಾಡುತ್ತೇನೆಂದರೂ ಅಶಕ್ಯವು. ಆದರೆ ಜಮೆಯು ಮತ್ತು ವೆಚ್ಚವು ನಿಸರ್ಗ ನಿಯಮಾನುಸಾರವಾಗಿ ನಡೆಯತಕ್ಕವೇ. ನಾವು ಮಾತ್ರ ಬುದ್ಧಿ ಚಾತುರ್ಯದಿಂದ ಅದರ ಉಪಯೋಗವನ್ನು ಮಾಡತಕ್ಕದ್ದು. ಅಂದರೇನೇ ನಮಗೆ ನಿಜವಾದ ಸುಖವು ದೊರಕುವದು. ನಾವು ಸಮಾಜದೊಳಗೆ ಹಾಸ್ಯಾಸ್ಪದವಾಗುವಂಥ ಯಾವ ಕೆಲಸವನ್ನು ಮಾಡಕೂಡದು. ನಮ್ಮಲ್ಲಿ ಒಂದು ದೊಡ್ಡ ದುರ್ಗುಣವು ಸೇರಿಕೊಂಡಿರುವದು. ಅದರಿಂದಲೇ ನಾವು ಸಾಲುಗಾರರಾಗಿ ನಮಗೆ ಭಿಕ್ಷಾಂದೇಹಿ ಅನ್ನುವ ಪ್ರಸಂಗವು ಬರತೊಡಗಿರುವದು ಅದು ಯಾವದೆಂದರೆ, ನಾವು ಯಾವಾಗಲೂ ಎರಡನೇಯವರ ಬಾಹ್ಯಾಕಾರವನ್ನೇ ಅನುಸರಿಸುತ್ತೇವೆ. ಆದರೆ ಅವರಲ್ಲಿ ಯಾವ್ಯಾವ ಸದ್ಗುಣಗಳಿರುವವು. ಅವರು ಇಷ್ಟು ಮುಂದೆ ಬರಲಿಕ್ಕೆ ಕಾರಣವೇನು ಅವರ ವಿಚಾರವನ್ನು ನಾವು ಮಾಡುವದಿಲ್ಲ. ಉದಾಹರಣಾರ್ಥವಾಗಿ ಒಬ್ಬನು ಜಾಣ ವಕೀಲನಿರುತ್ತಾನೆಂದು ತಿಳಿಯುವಾ, ಅವನು ಇಷ್ಟು ಜಾಣನಾಗಿ ಮುಂದೆ ಬರಲಿಕ್ಕೆ ಯಾವ್ಯಾವ ಯತ್ನವನ್ನು ಮಾಡಿದನು. ಇದರ ಕಡೆಗೆ ನಮ್ಮ ಲಕ್ಷವು ಹೋಗುವದಿಲ್ಲ ಆದರೆ ಅವನ ವೇಷದಕಡೆಗೆ ಲಕ್ಷವು ಹೋಗುತ್ತದೆ. ಆ ಮೇಲೆ ಕೇಳುವದೇನು, ಹೃದಯದಲ್ಲಿ ಎರಡು ಅಕ್ಷರಗಳು ಕೂಡಾ ಹೊರಡುವದಿಲ್ಲ. ಆದರೆ ಬ್ಯಾರಿಸ್ಟರನ ವೇಷವನ್ನು ಧರಿಸುತ್ತೇವೆ.

ಆಮೇಲೆ ಆ ವೇಷಕ್ಕೆ ತಕ್ಕವೆಚ್ಚವನ್ನು ಮಾಡುತ್ತ ಡೌಲಿಗೆ ಬಿದ್ದು ಹಾಳಾಗಿ ಹೋಗುತ್ತೇವೆ. ನಾವು ನಿಜವಾಗಿ ಬ್ಯಾರಿ

ಸ್ಟರರಾಗಬೇಕೆಂದು ಯತ್ನಿಸುವದಿಲ್ಲ. ಆದರೆ ಬ್ಯಾರಿಸ್ಟರನ ಸೋಗವನ್ನು ಮಾತ್ರ ಹಾಕುತ್ತೇವೆ. ಸೋಗವನ್ನು ಹಾಕಿದ ಮಾತ್ರಕ್ಕೆ ಬ್ಯಾರಿಸ್ಟರರಾದಂತಾಯಿತೇ? ಎಂದೂ ಇಲ್ಲ. ನಮ್ಮಲ್ಲಿ ಇಂಥ ಅನೇಕ ದುರ್ಗುಣಗಳು ಸೇರಿಕೊಂಡಿರುತ್ತವೆ. ಅವುಗಳನ್ನು ಬಿಡದ ಹೊರತು ನಾವು ಎಂದೂ ಮುಂದಕ್ಕೆ ಬರಲಾರೆವು. ಇರಲಿ. ಇನ್ನೂ ತುಸು ಹಿಂದಿನ ವಿಷಯದ ಕಡೆಗೆ ತೆರಳುವಾ. ನಾವು ಯಾವ ಕಾರ್ಯದ ಸಲುವಾಗಿ, ಹಣವನ್ನು ವರ್ಗಣೀ ರೂಪದಿಂದ ಬೇಡಲಿಕ್ಕೆ ಹೋಗುತ್ತೇವೋ, ಆ ಸಮಯಕ್ಕೆ ಇಷ್ಟೇ ಕೊಡಬೇಕೆಂದು ಜುಲುಮೆ ಮಾಡಬಾರದು. ಅವರು ಸಂತೋಷ ದಿಂದ ಕೊಟ್ಟಷ್ಟು ಸ್ವೀಕರಿಸಬೇಕು. ಅವರಂತೆ ಸಹಾಯ ಮಾಡು ವವರಾದರೂ ಎಲ್ಲವನ್ನು ವಿಚಾರಮಾಡಿ, ಯೋಗ್ಯವಾದ ವರ್ಗ ಣಿಯನ್ನು ಕೊಡಬೇಕು. ಅವರು ಕೊಟ್ಟದ್ದು ತಕ್ಕೊಳ್ಳುತ್ತಾ ರೆಂದು ಮನಸ್ಸಿಗೆ ಬಂದಹಾಗೆ ಅತೀ ಕ್ಷುಲ್ಲಕ ರೂಪವಾಗಿ ಕೊಡ ಬಾರದು. ಜನರಿಗೆ ಕ್ಷುಲ್ಲಕವಾಗಿ ತೋರಿದರೂ ತಮ್ಮ ಯೋಗ್ಯ ತೆಗೆ ತಕ್ಕದ್ದು ಇರಬೇಕು. ಇರಲಿ.

ವಾಚಕರೇ ಹಣವನ್ನು ವೆಚ್ಚಮಾಡುವದರಲ್ಲಿಯೂ ಬಹಳ ಜಾಣತನವಿರುತ್ತದೆ ಕೆಲವು ಕಂಜೂಷ ಜನರು ಹೊಟ್ಟೆಗೂ ಸಹ ಪೂರಾ ತಿನ್ನದೆ, ಬರೇ ಗಂಟನ್ನೇ ಕೂಡಹಾಕುತ್ತ ಆಯು ಷ್ಯದ ಹಾನಿಯನ್ನು ಮಾಡಿಕೊಳ್ಳುವರು. ಕೆಲವು ಜನರಂತೂ ಹಿಂದೆ ಮುಂದೆ ಯಾವ ವಿಚಾರವನ್ನು ಮಾಡದೆ, ತೌಡನ್ನು ತೂರಿದ ಹಾಗೆ ವರ್ಷಾನುವರ್ಷ ಸಂಪಾದಿಸಿಟ್ಟ ಹಣವನ್ನು ನಿಮಿಷಮಾತ್ರ ದಲ್ಲಿ ನಾಶಮಾಡಿ ಬಿಡುವರು. ಒಂದೊಂದು ಪ್ರಸಂಗದಲ್ಲಿ ಒಂದು ಪೈದ ವರೆಗೆ ಕೃಪಣತನವನ್ನು ಮಾಡಬೇಕಾಗುತ್ತದೆ. ಮತ್ತೊಂದು ಪ್ರಸಂಗದಲ್ಲಿ ರೂಪಾಯಿಗಟ್ಟಲೆ ವೆಚ್ಚವನ್ನು ಮಾಡಬೇಕಾಗು

ತ್ತದೆ. ಹ್ಯಾಗಂದರೆ ಉದಾಃ- ಪರೀಕ್ಷೆಗೆಂದು ವಿದ್ಯಾರ್ಥಿಗಳು ಕಾಲೇಜಿಗೆ ಹೋಗಿರುತ್ತಾರೆಂದು ತಿಳಿಯುವಾ, ಆ ಸಮಯದಲ್ಲಿ ಮನಸ್ಸನ್ನು ಸುಪ್ರಸನ್ನವಿಟ್ಟು ಯಾವ ಯಾವ ದಿವಸ ಯಾವ ಯಾವ ವಿಷಯಗಳು ಇರುತ್ತವೆಯೋ, ಅವುಗಳ ಬಗ್ಗೆ ಶಾಂತ ಚಿತ್ತದಿಂದ ಆ ವಿಷಯದ ಪರೀಕ್ಷೆಗೆ ಕೂಡ್ರುವ ಮೊದಲು ನೋಡಿ ಕೊಳ್ಳಬೇಕಾಗುತ್ತದೆ. ಇಂಥ ಮಹತ್ವದ ಸಮಯದಲ್ಲಿ ಖಾನಾ ವಳಿಗೆ ನಿಷ್ಕಾರಣವಾಗಿ, ಹಣವು ಹೋಗುತ್ತದೆಂದು, ಕೈಯಿಂದ ಕುದಿಸುತ್ತ ಮಹತ್ವದ ವೇಳೆಯನ್ನು ನಾಶಮಾಡುವದೆಂದರೆ, ಇದು ಮೂರ್ಖತನವು. ಅದರಂತೆ ಒಬ್ಬ ರೋಗಿಯು ಬೇನೆ ಯಿಂದ ನರಳುವ ಸಮಯದಲ್ಲಿ ಡಾಕ್ಟರರ ಕಡೆಯಿಂದ ಔಷಧ ಯವನ್ನು ಕೊಡಿಸಲಿಕ್ಕೆ ಖರ್ಚಾಗುತ್ತದೆಂದು ತಿಳಿದು, ಸುಮ್ಮನೆ ಕೂತುಕೊಳ್ಳುವದೆಂದರೆ ಇದು ಮೂರ್ಖತನವೇ ಸರಿ.

ಆದ್ದರಿಂದ ಪ್ರಿಯವಾಚಕರೇ ನಾವು ನಿಷ್ಕಾರಣವಾಗಿ ವೆಚ್ಚ ಮಾಡುವ ಪ್ರಸಂಗಬಂದಲ್ಲಿ ಕೈಯನ್ನು ಜಗ್ಗಿ ಹಿಡಿಯಲೇಬೇಕು. ಆಗ ಕೃಪಣರಿಗಿಂತಲೂ ಕೃಪಣರಾಗಲಿಕ್ಕೆ ಬೇಕು. ಮತ್ತು ಸಕಾ ರಣವಾಗಿ ವೆಚ್ಚವನ್ನು ಮಾಡುವ ಸಮಯದಲ್ಲಿ ಹಿಂದೆ ಮುಂದೆ ನೋಡದೆ ಯೋಗ್ಯರೀತಿಯಿಂದ ವೆಚ್ಚಮಾಡುತ್ತ ಹೋಗಲೇ ಬೇಕು. ಅಂದರೇನೇ ಹಣದ ಯೋಗ್ಯ ಉಪಯೋಗವಾಗುವದು. ವೈಭವದ ತಳಹದಿಯು ಯಾವದೆಂದರೆ, ಯೋಗ್ಯರೀತಿಯಿಂದ ಹಣವನ್ನು ವೆಚ್ಚಮಾಡುವದು. ಇದಂತೂ ಎಲ್ಲರಿಗೂ ಗೊತ್ತಾ ದಂತಾಯಿತು.

ಯೋಗ್ಯ ರೀತಿಯಿಂದ ವೆಚ್ಚಮಾಡುವ ಮನುಷ್ಯನು ನಿರ್ವ್ಯ ಸನಿಯೂ, ಉದ್ಯೋಗಿಯೂ ಮತ್ತು ಮಿತವ್ಯಯಿಯೂ ಇದ್ದ

ರಂತೂ ರತ್ನಕ್ಕೆ ಕುಂದಣವನ್ನು ಕೂಡಿಸಿದಂತಾಗುತ್ತದೆ. ಬಡವನಿರಲಿ, ಶ್ರೀಮಂತನಿರಲಿ, ಇಲ್ಲವೆ ಉದ್ಯೋಗವಂತನಿರಲಿ, ನಿರ್ವ್ಯಸನಿಗಳೂ ಮಿತವ್ಯಯಿಗಳೂ ಇದ್ದು ಮೇಲಿನ ನಿಯಮಗಳಂತೆ ತಪ್ಪದೆ ವರ್ತಿಸುತ್ತಾ ಇವರು ಯಾವಾಗಲೂ ವೈಭವಾಲಯದಲ್ಲಿ ವಾಸಿಸುವರು.

---

# ವಿನೋದ ಸಾಗರ.

**ರಾಮು:**— ಏನೋ ವಾಮನಾ ಧಾರವಾಡದಲ್ಲಿರುವ ವಾಸುದೇವಂದು ಮತ್ತು ನಿಂದು ಬಹಳ ದಿವಸಗಳ ಹಿಡಕೊಂಡು ಗೆಳೆತನ ಅದ ಅಂತ ಕೇಳಿನಿ ಖರೇ ಏನೋ?

**ವಾಮನ:**— ಎಲ್ಲಿದೋ ಮಹಾರಾಯಾ ಮೊನ್ನೆ ಮೊನ್ನೇರೇ ಅವಂದು ಖೂನ ಆಗೇದ.

**ರಾಮು:**— ವಾಸುದೇವಂದು ಖೂನ ಆತೇನೋ? ಅಯ್ಯೋ ಪಾಪ ಎಂಥ ಉತ್ತಮನೋ ಯಾವ ನೀಚರು ಖೂನ ಮಾಡಿರೋ ಬಡಪ್ರಾಣಿ ವ್ಯರ್ಥವಾಗಿ ಸತ್ತನು.

**ವಾಮನ:**— ಇಲ್ಲೋ ರಾಮಾ ಅವಾ ಜೀವಂತ ಇದ್ದಾನ. ಅವನಿಗೇನೂ ಆಗಿಲ್ಲ

**ರಾಮು:**— ಎಲೋ ಖಂಡೇಮಗನ ಮೊನ್ನೆ ಮೊನ್ನೆ ಖೂನ ಆಗೇದ ಅಂತ ಹೇಳತಿಲೋ.

**ವಾಮನ:**— ಏ ರಾಮಾ ಇನೋಡು ಹಾಂಗಲ್ಲಾ. ಮೊನ್ನೆ ಮೊನ್ನೆ ಅವಂದು ನಂದು ಗೆಳೆತನ ಆಗೇದ ಅಂದ.

**ರಾಮು:**— ಏ ಅಂದಾ, ಥೂ ಥೂ ನಿನಗ ಏನೇನು ತಿಳಿಯುವ ದಿಲ್ಲ ನೋಡು ಅವಂದು ನಂದು ಮೊನ್ನೆ ಮೊನ್ನೆ ಹೊಸಾ ಗುರುತ ಆಗೇದ ಅಂತ ಹೇಳಬಾರದ ಖೂನ ಆಗೇದ ಅಂಬೂ ಶಬ್ದಾ ಯಾವ ಸಾಲ್ಯಾಗ ಕಲಿತಿದ್ಯೋ ಮಳ್ಳ ಮಗನ.

*           *           *           *           *

**ಶಿಕ್ಷಕ:**— ವಿದ್ಯಾರ್ಥಿಗೆ– ಎಲೋ ಗೋವಿಂದಾ ಘಡಿಯಾರದಲ್ಲಿ ಎಷ್ಟು ಹೊಡೆದಿವೆ. ಬೇಗನೇ ನೋಡಿಕೊಂಡು ಬಾ.

**ಗೋವಿಂದ:**— ನೋಡಕೊಂಡು ಬಾದ್ರಿ? ಮಾಸ್ತರಿ ಏ ಮಾಸ್ತರಿ ನೋಡಿಕೊಂಡು ಬಂದ್ರಿ!

**ಶಿಕ್ಷಕ:**— ಏ ಮೂರ್ಖಾ ನೋಡಕೊಂಡು ಬಾ ಅಂದರ ಉರ ಪಾಟೀ ನನಗೇ ಕೇಳತಿ ಏನೋ?

**ಗೋವಿಂದ:**— ನೋಡಕೊಂಡು ಬಂದೇನರಿ ಮಾಸ್ತರ.

**ಶಿಕ್ಷಕ:**— ಆ ಮಗ್ಯಾಲ ಎಷ್ಟು ಹೊಡಿದೆವೆ ಹೇಳು. ಹಿಂಗ್ಯಾಕ ನಿಂತಿದಿ ಹಾಳೂರ ಹೂಡೇ ನಿಂತಾಂಗ.

**ಗೋವಿಂದ:**— ಇನೋಡ್ರಿ ಮಾಸ್ತರಿ ಮಾಸ್ತರಿ ಈನೋಡ್ರಿ ಈಗ ಎಂಟು ಹೊಡೆದು ಪಂಧರಾ ಮಿನಿಟಗಳಾಗಿವೆ.

**ಶಿಕ್ಷಕ:**—ಎಲೋ ಗೋಂದ್ಯಾ ನಿನಗೆ ಎಂದರೇ ಬುದ್ಧಿ ಬರುದೋ ಕ್ವಾಣ ಆಗೀದಿ ಕಲಿಸಿ ಕಲಿಸಿ ಬ್ಯಾಸತ್ತ ಹೋದೆ ಒಂದು ಕನಡಾ ಒಂದ ಮರಾಠಿ, ಒಂದ ಮರಾಠಿ ಒಂದು ಕನಡಾ ಇದೇನು ನನಿಂದ ಇನ್ನೂ ಹೋಗವಲ್ಲತು. ಏನರೇ ಮಾಡ ಬೇಕು. ನೆನಪಾದಾಗ ಇಟ ನೆನಪದಾಗ ಇನ್ನೊಮ್ಮೆ

ಯುದ್ವಾತದ್ವಾ ಹೇಳಕೋತ ಬಂದ್ರ್ಯೋ ಹೆಣಬೀಳ ಲತ್ತಿ ತಿಂತಿ ತಿಳತಿಲ್ಲೊ.

**ಗೋವಿಂದಃ—** ಮಾಸ್ತರ. ಲತ್ತೀ ಹ್ಯಾಂಗ ತಿಂತಾರಿ ನೀವು ಒಂದ ಥೋಡೇ ತಿಂದಕ್ಯಾಸ ತೋರಸಲಾ.

**ಶಿಕ್ಷಕಃ—** ಬಾಯಿ ಮುಚ್ಚು, ಮುಚ್ಚು ಬಾಯಿ ಏನಬೇಕೋ?

**ಗೋವಿಂದಃ—** ಎಂದೂ ಇಲ್ಲರೀ.

§ § § § §

**ವಕೀಲಃ—** ಶಿಪಾಯಿಗೆ– ಎಲೋ ಭೀಮಾ ಈ ಲಖೋಟಿಯನ್ನು ಬೇಗನೇ ಪೋಷ್ಟದಾಗ ಒಗದ ಬಾ ಟಪಾಲ ಕಟ್ಟುವ ವೇಳೆಯಾಗಿದೆ.

**ಭೀಮ:—** ರಾಸಾಬರ ಪೋಷ್ಟದ ಹದ್ಯಾಗ ಒಗದ ಕ್ಯಾಸ ಬಂದರೀ.

**ವಕೀಲಃ—** ಏ ಮಳ್ಯಾ ನಿನ್ನ ಬುದ್ಧಿಗೆ ಬೆಂಕೀ ಹಚ್ಚಲೀ. ಟಪಾಲ ಪೆಟ್ಟಿಗೇ ಒಳಗೆ ಒಗೆದ ಬಾರೋ, ಪೋಸ್ಟದ ಹದ್ಯಾಗೆ ಒಗದರ ಎಂದರೇ ಹೋದೀತೇನೋ ಲಗೂ ಓಡು ಐದೇ ಮಿನಿಟು ಉಳದಿವೆ.

**ಭೀಮಃ—** ಯಾಸರೀ ರಾಸಾಬರ ನೀವ ಪೋಸ್ಟದಾಗ ಒಗದ ಕ್ಯಾಸ ಬಾ ಅಂದ್ರಿ, ಮತ್ತ ಒಗದ ಬಂರಾಣಾ ಹಿಂಗ ಹೇಳತಿರಿ. ಯಾಸರೀ ಟಪಾಲ ಪೆಟ್ಟಿಗ್ಯಾಗ ಒಗದಕ್ಯಾಸ ಬಾ ಅತ್ತ ಎಲ್ಲಿ ಹೇಳಿದ್ರಿ. ಹಿಂಗಜರಾ ನೀವ ಹೇಳಿದ್ರ ಎಂದರೇ ಬಿಡತಿದ್ದ ಯಾಸರೀ ರಾಸಾಬರ?

**ವಕೀಲಃ—** ಎಲಾ ಇವನ ಏನ ಮೂರ್ಖ ಇದ್ದಾನೋ ಏ ನಿನ ಪುರಾಣ ಸಾಕೋ ಲಖೋಟೀ ಯಾರರೀ ಎತ್ತ್ಯಾರ ಜಡ

**ಭೀಮಃ**— ರಾಸಾಬರ ಇಸೋದ್ರಿ ವ್ಯಾದನೇ ಸುಟ್ಟೆಗಾಳಿ ವ್ಯಾದಾಂಗ ಹೋಗಿ ಟಿಪಾಲ ತರಬಿಸಿ, ನಿಮ್ಮ ನಿಮ್ಮ ಲಖೋಟೇ ಕೊಟ್ಟ ಬರತ್ಯಾನರೀ.

† † † † †

**ಶಾಮಾಚಾರ್ಯಃ**— ಏನರೀ ರಾಮಾಚಾರ್ಯರೇ ನೀವು ಕಾಶೀ ಯಾತ್ರೆಗೆ ಹೋಗಿದ್ದಿರಂತೆ?

**ರಾಮಾಚಾರ್ಯಃ**— ಹೌದು ಹೋಗಿ ಬಂದೆನು.

**ಶಾಃ**— ಹಾಗಾದರೆ ನೀವು ಏನೇನು ಬಿಟ್ಟು ಬಂದಿರಿ?

**ರಾಃ**— ನಾನು ಬರೇ ಬಾಯಿಲೇ ಮೆಕ್ಕೆಕಾಯಿ ತಿನ್ನುವದನ್ನು ಬೇವಿನರಸಾ ಕುಡಿಯುವದನ್ನು ಮತ್ತು ನಾಚಿಕೆಯನು ಬಿಟ್ಟು ಬಂದೆನು.

× × × × ×

**ಶಿಕ್ಷಕಃ**— ವಿದ್ಯಾರ್ಥಿಗೆ- ಎಲೋ ರಂಗಾ ಶಿವಾಜಿಯು ಯಾವ ಇಸ್ವಿಯಲ್ಲಿ ಹುಟ್ಟಿದನು?

**ರಂಗಃ**— ಮಾಸ್ತರೀ ಅದನ್ನ ನಾ ನಿಮುಗ ಕೇಳವ ಇದ್ದೇನರಿ.

**ಶಿಕ್ಷಕಃ**— ಎಲೋ ರಂಡೇ ಗಂಡಾ ೩ ವರ್ಷ ಆಯಿತು ಪಾಠ ಮಾಡತಿಲೋ ಏ ನಿನ್ನ ಬುದ್ಧಿ!

**ರಂಗಃ**— ಮರೀ ತದರೀ ಮಾಸ್ತರಿ. ಅದಕ್ಕ ಇತಿಹಾಸ ನೋಡಿ ಕೊಂಡು ಹೇಳಂದ್ರ. ತಪ್ಪೊದಿಲ್ಲ ನೋಡ್ರಿ. ಮಾಸ್ತರಿ.

‡ ‡ ‡ ‡ ‡

**ರಾಮಃ**— ಎಲೋ ಕೇಶವಾ ಈಗ ಎಷ್ಟು ಹೊಡದಿವೆ?

**ಕೇಶವಃ**— ಏಟಟೆನ್ ಆಗಿವೆ.

**ರಾಮ॥**—ಟನ್ನೋ ಹಂಡರವೇಟೋ ಮೂರ್ಖರ ಲೋಕತಾಳೇ ಗಣೀತ ಮಾಡತೀ ಏನು? ಇಂಗ್ರಜಿ ಸಾಲಿಅಗ ನಮಗ ನಿಗ್ರ ಆಗ್ಯಾವ ಕಸುಡಲೆ ಹೇಳಿದರ ಏನ ನಿಸ್ಮ ಮನಿ ಹೊಲಾ ಮಾರಿದಾಂಗ ಆಗತಾವ? ಎಂಟು ಹೊಡೆದು ಹತ್ತು ಮಿನಿಟಗಳಾಗಿವೆ ಆಂತಾ ಹೇಳಿದ್ದರ ನಿಂದ ಏನ ಲುಕ್ಸಾನ ಆಗತಿತ್ತಪಾ ಇನ್ನೊಮ್ಮೆ ಹಿಂಗ ಹೇಳತಬರಬ್ಯಾಡಾ.

÷ ÷ ÷ ÷ ÷

**ಶಿಕ್ಷಕ:**—ವಿದ್ಯಾರ್ಥಿಗಳಿಗೆ—ಎಲೈ ವಿದ್ಯಾರ್ಥಿಗಳೇ ಗಡಿಯಾರವು ನಿಮ್ಮ ಮನೆಯುಲ್ಲಿದ್ದರೆ ಅದರಿಂದ ನಿಮಗೆ ಅಭ್ಯಾಸಕ್ಕೆ ಏನೇನು ಉಪಯೋಗವಾಗುವದು.

ಆ ಎಲ್ಲ ವಿದ್ಯಾರ್ಥಿಗಳು ತಮಗೆ ತಿಳಿದಮಟ್ಟಿಗೆ ಹೇಳಿದರು. ಆದರೆ ಜಾಣನೆಂದು ಎಣಿಸಲ್ಪಡುವ ರಾಮನು:—

ಮಾಸ್ತರೀ ನಮ್ಮ ಮನೆಯುಲ್ಲಿ ಗಡಿಯಾರವು ಇರುವದರಿಂದ ಬಹಳೇ ಉಪಯೋಗವಾಗುತ್ತದೆ. ಏನ ಹೇಳಲಿ ಶಾಲೆಯುನ್ನು ತಪ್ಪಿಸಲಿಕ್ಕೆ ಬರುತ್ತದೆ. ಶಾಲೆಯುನ್ನು ತಪ್ಪಿಸಿ ತಿರುಗಾಡಲಿಕ್ಕೆ ಬರುತ್ತದೆ. ವೇಳೆಗೆ ಸರಿಯಾಗಿ ನಿಮ್ಮನ್ನು ಕೂಡಾ ತಪ್ಪಿಸಲಿಕ್ಕೆ ಬರುತ್ತದೆ. ಅದರಿಂದ ಅಭ್ಯಾಸವನ್ನು ಮಾಡುವ ಮತ್ತು ಶಾಲೆಗೆ ಹೋಗುವ ತ್ರಾಸವು ತಪ್ಪುತ್ತದೆ.

+ + + + +

**ಅನಂತರಾಯ:**— ಏನಪಾ ಅರವಿಂದಾ ನೀ ಒಳ್ಳೇ ಶಾಸ್ತ್ರಶುದ್ಧ ಉತ್ತಮ ಗಾಯನವನ್ನು ಮಾಡತೀ ಅಂತಾ ಕೇಳಿವಿ. ಅದಕ್ಕೆ ಒಂದು ಪದವನ್ನು ಅನ್ನು ನೋಡುವಾ.

**ಅರವಿಂದ:—** ಒಂದು ಪದವನ್ನು ಅನ್ನುತ್ತಾನೆ.
ತನನನ, ಚನನನ, ಘನನನ, ರರರರ, ಪರರರ, ತರರರ್ರ
ಆ ಆ ಆ.

**ಅ:—** ಸಾಕ ಬಿಡೋ ಮಹಾರಾಯಾ ತಲಿ ಎದ್ದಿತು. ಏನ ಅಪ್ಪನೆ ಧ್ವನಿ. ಏನ ಗಾಯನಾ ಧನ್ಯ ಧನ್ಯ. ಅರವಿಂದಾ ಈ ಪದ ವನ್ನು ಕಲಿಯುಲಿಕ್ಕೆ ಎಷ್ಟು ವರ್ಷಗಳ ವರಿಗೆ ಯತ್ನ ವನ್ನು ಮಾಡಿದ್ದಿ. ನಿನ್ನ ಗಾಯನವನ್ನು ಕೇಳಿದಾಕ್ಷಣಕ್ಕೆ ಎಷ್ಟೋ ಗರ್ಧಬಗಳೂ ಶ್ವಾನಗಳೂ ಸೂಕರುಗಳು ಏಕ ಕಾಲಕ್ಕೆ ಕೂಡಿದವು.

* * * * * * * * * * * *

**ಗೋವಿಂದ:—** ಎಲೋ ಶಾಮಾ ನಿನಗೆ ಸಾಯಕಲ್ ಮೇಲೆ ಕೂಡ್ರಲಿಕ್ಕೆ ಬರುತ್ತದೇನೋ?

**ಶಾಮ:—** ಗೋವಿಂದಾ ಏನವಿಚಿತ್ರ ಕೇಳತಿ ಕೂಡ್ರಲಿಕ್ಕೆಬಾರದೆ ಏನು ಮಾಡಿತು.

**ಗೋ:-** ಇಕೋ ಈ ನನ್ನ ಸಾಯಕಲ್ ಮೇಲೆ ಕೂತು ೧ ಮೈಲು ತಿರುಗಾಡಿ ಬಾ ನೋಡೋಣ.

**ಶಾ:—** ಎಂಥ ಹುಚ್ಚನೋ, ನೀನು ಸಾಯಕಲ್ ಮೇಲೆ ಬೇಕಾದ ವರು ಕೂಡ್ರಬಹುದು. ಆದರೆ ನಾನು ನಾಲ್ಕು ಗಾಲಿಗ ಳುಳ್ಳ ಸಾಯಕಲ್‌ದ ಮೇಲೆ ಚನ್ನಾಗಿ ಕೂಡ್ರಬಲ್ಲೆನು ಕಂಡಿಯಾ.

**ಗೋ:—** ಭಪ್ಪರೆ ಹುಡುಗಾ ಸರಿ. ಸರಿ. ನಿನಗೆ ಒಂದು ದೊಡ್ಡ ನಮಸ್ಕಾರಾ.

-+-+- -+-+- -+-+- -+-+-

ರಂಗಃ— ಎಲೋ ವಾಮನಾ ನಿನ್ನ ಪರೀಕ್ಷೆಯು ಇಳಿಯಿತಂತೆ ಪೇಡೇ ಕೊಡುವಿಯಾ!

ವಾಮನಃ— ಥೂ ಥೂ ಎಂಥ ಹುಚ್ಚಪ್ಪಾ ನೀನು ನಿನಗ ಏನೂ ತಿಳಿಯುವದಿಲ್ಲ ನೋಡು. ಪರೀಕ್ಷೆಯಲ್ಲಿ ನನಗೆ ಪಾಸದ ಹಿಂದೆ ನಾ ಎಂಬ ಬಹುಮಾನ ಬಿರುದು ಶಿಕ್ಕಿತು. ಇಷ್ಟೇ ಅಲ್ಲ ಇದಕ್ಕೂ ಹೆಚ್ಚಿನ ಬಿರುದು ಶಿಕ್ಕಿರುತ್ತದೆ ಬಿರುದು. ಅದೇನಂದರೆ ೬ ನೇ ಇಯತ್ತೆಯನ್ನು ಕಲಿಯುತ್ತಿದ್ದೆನು. ನನ್ನನ್ನು ಮತ್ತೆ ಹಿಂತಿರುಗಿ ೫ ನೇ ಯತ್ತೆಗೆ ಹಾಕಿಬಿಟ್ಟರು ಗೆಳೆಯಾ.

○ ○ ○ ○ ○

ವಾಸುದೇವರಾಯರು ಪ್ರತಿನಿತ್ಯದಲ್ಲಿಯೂ ಅಂಚೇಕಟ್ಟೆಗೆ ಹೋಗಿ "ಮಾಸ್ತರ ನಮ್ಮದೇನು ಅದ ಏನರೀ" ಅಂತಾ ಕೇಳಬೇಕು.

ಮಾಸ್ತರರು ಬೇಸತ್ತು—ರಾಯರ ನಿಮ್ಮದೇನ ಇರತದರೀ ಏನೂ ಇಲ್ಲರೀ ಅದಕ್ಕೆ ಮಹನೀಯರೇ ನಿಮಗೆ ದಿನಾಲು ಟಪಾಲು ಬರುವಹಾಗೆ ಒಂದು ಯುಕ್ತಿಯನ್ನು ಹುಡುಕಿ ತೆಗೆದಿದ್ದೇನೆ ಯುಕ್ತಿಯನ್ನು. ಅದೇನಂದರೆ ಮಿಸ್ಟರ ನೀವು ಓದುವದರಸಲುವಾಗಿ ದಿನ ಪತ್ರಿಕೆಯನ್ನು ಸುರುವು ಮಾಡಿರಿ. ಮಹಾರಾಯರೇ ಅಂದರೆ ನಮಗೆ ಕೇಳುವ ಕಾಟವೂ ಮತ್ತು ನಿಮ್ಮ ಎಡತಾಕುವ ಶ್ರಮವೂ, ಉಳಿಯುವದು. ತಿಳಿತೇನು ರಾಯರೇ?

... .. ...

ರಂಗಃ—ಏನೋ ಕೇಶವಾ ನಿಮ್ಮ ಊರಿಗೆ ಒಂದು ನಾಟಕ ಕಂಪನಿಯು ಬಂದಿರುತ್ತದಂತೆ, ಅದ್ಯಾವ ಕಂಪನಿಯೋ?

ಕೇಶವಃ—ಏನ ಹೇಳಲಿ ರಂಗಾ ಆ ಕಂಪನಿಯ ಹೆಸರು ಬಹಳ ಅಪ ರೂಪ. ಆ ಕಂಪನಿಗೆ “ ಧತ್ತೂರೀ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ ಎನ್ನುವರು,

ರಂಗಃ—ವಾಹವ್ವಾರೇ ಕೇಶವಾ ಅಲ್ಲೋ ಏನು ಅಂದವಾದ ಹೆಸ ರಿಟ್ಟಿರುವರು. ಅವರಿಗೆ ಎರಡನೇ ಹೆಸರವೇ ಸಿಗಲಿಲ್ಲವೇನು? ಇರಲಿ, ಇಂದು ಯಾವ ನಾಟಕವನ್ನು ಇಟ್ಟಿರುವರು?

ಕೇಶವಃ—ಈ ಹೊತ್ತು “ ಕಲ್ಲೋ ಪಂತನ ಕರ್ತವ್ಯ, ಅರ್ಥಾತ್ ಉದ್ಧಟತನದ ಪರಮಾವಧಿ. ಎಂಬ ಪ್ರಯೋಗವನ್ನು ಇಟ್ಟಿ ರುವರು

ರಂಗಃ—ಏನೋ ಕೇಶವಾ ಒಂದೊಂದ ಚಮತ್ಕಾರ ಹೆಸರ ಹೇಳ ತೀಲಾ ಇರಲಿ, ಆ ಕಂಪನಿಯಲ್ಲಿ ಉತ್ತಮ ಗಾಯನವನ್ನು ಮಾಡುವ ಒಬ್ಬ ನಟನು ಇದ್ದಾನಂತೆ ನಿಜವೇನೊ?

ಕೇಶವಃ—ಏನ ಹೇಳಲಿ ರಂಗಾ ಸ್ಟೇಜದ ಮೇಲೆ ಅವನ ಗಾಯನ ವು ನಡೆದ ವೇಳೆಗೆ ಥೇಟರದ ಹೊರಮಗ್ಗಲಿಗೆ ಕೊರವರ ಅ ಶ್ವಗಳೂ, ಸೂಕರುಗಳು ಆ ಇಂಪಾದ ಗಾಯನವನ್ನು ಕೇಳ ಲಿಕ್ಕೆ ಬರುವವು. ಇಷ್ಟೇ ಅಲ್ಲ. ಅವು ನಡನಡುವೆ ತಾವೂ ಆನಂದದಿಂದ ಸೂರವನ್ನು ಹಿಡಿಯುವವು. ಮತ್ತು ನೊಡ ಲಿಕ್ಕೆ ಬಂದ ಪ್ರತಿಯೊಬ್ಬ ಪ್ರೇಕ್ಷಕನು ಬರುವಾಗ ಮೆಂತೆ ಲಾರ್ಣಕವನ್ನು ತಪ್ಪದೆ ತರುವನು.

ರಂಗಃ—ಧನ್ಯ ಧನ್ಯ ಸಾಕು ಬಿಡು ಮಹಾರಾಯಾ ಇಷ್ಟಕ್ಕೆ ಮುಗಿಸಿಬಿಡು.

... .... ...

ಶಿಕ್ಷಕಃ—ವಿದ್ಯಾರ್ಥಿಗೆ—ಎಲೋ ವಾಮನಾ ಎಲ್ಲ ಹಬ್ಬಗಳಲ್ಲಿ ಶ್ರೇಷ್ಠವಾದ ಹಬ್ಬವು ಯಾವದು?

ವಾಮನ:— ಈ ನೋಡ್ರಿ ಮಾಸ್ತರೀ. ಮಾಸ್ತರೀ ಎಲ್ಲಾ ಹಬ್ಬದಾಗ್ರಿ ಹೋಳೀಹುಣ್ಣಿವೆ ದೊಡ್ಡದರೀ ಅಂದರೀ ಎಲ್ಲಾರು ಹೊಯಕೋಂದರೀ ನೀವು ಹೊಯಕೋತೀರಿ ಇಲ್ಲರಿ

ಶಿಕ್ಷಕ:—ಏ ಮಂಗಮಂಗನ ಬಹಳ ಶಹಾಣ್ಯಾ ಇದ್ದೀದಿ ಬಿಡು ಎಲೋ ಧಡ್ಡದಂಡೇ ಮಗನೇ ಇದೊಂದೇ ಪಾಠ ಮಾಡಿದ್ಯಾ ಮತ್ಯಾವ ಹಬ್ಬ ನೆನಪೇ ಆಗವಲ್ಲೂನ.

ವಾಮನ;—ಮಾಸ್ತರೀ ಇದೊಂದೇ ನೆನಪದಾಗ ಉಳಿತದರೀ ಬಾಕಿ ಎಲ್ಲಾ ಮರೀತಾವ್ರಿ ನಾನೇ ಏನಮಾಡ್ಲಿರಿ.

ಶಿಕ್ಷಕ:—ಸಾಕು ಸಾಕು ಏ ಮೂರ್ಖಾ ಬಾಯಿಮುಚ್ಚು

* * * *

ರಾಮರಾಯ;—ಏನರಿ ಗೋಪಾಳರಾಯರೀ ನಿಮಗೆ ಎಷ್ಟು ಮಂದಿ ಮಕ್ಕಳಿರುವರು?

ಗೋಪಾಳರಾಯರು;—ನನಗೆ ಐದುಮಂದಿ ಗಂಡು ಮಕ್ಕಳಿರುವರು.

ರಾಮ:—ಹಾಗಾದರೆ ನೀವು ಒಳ್ಳೇ ದೈವವಾನರಪಾ. ಒಳ್ಳೇದು ಅವರು ಏನೇನ ಉದ್ಯೋಗ ಮಾಡತಾರ;

ಗೋ:—ಏನ ಹೇಳಲಿ ರಾಮರಾಯಾ, ಅವರೆಲ್ಲರೂ ಸತ್ತಿದ್ದರೆ ನೆಟ್ಟಗಾಗುತ್ತಿತ್ತು.

ರಾಮ:— ಛೀ ಗೋಪಾಳರಾಯಾ ಹೀಗೆ ಮಾತಾಡಬೇಡಪಾ ಅವರು ಯಾವ್ಯಾವ ಕೆಲಸ ಮಾಡತಾರ ಹೇಳು

ಗೋ:—ಏನ ಹೇಳಲ್ಯೋ ರಾಮರಾಯಾ ಒಬ್ಬ ರಂಡೇಮಗಾ ತುಡುಗು ಮಾಡಿ ಶಿಕ್ಷಾ ಭೋಗಸತಾನ. ಮತ್ತೊಬ್ಬಮಗಾ ಈಗ ೮ ವರ್ಷ ಆಯಿತು ಮುಲ್ಕೀ ಪರೀಕ್ಷೆಗು ಸಾರಿಗೇನೇ ನಡಿಸ್ಯಾನ.

ಇನ್ನೊಬ್ಬವಾ ಉಂಡಮುಳಗ್ಯಾ ಇದ್ದಾನ. ನಾಲ್ಕನೆಯವಾ ಫರಾರೀ ಇದ್ದಾನ. ಐದನೆಯವಾ ದೇಶಭಕ್ತ ಇದ್ದಾನ. ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯ ಇಲ್ಲ. ಅನ್ನ ಹಾಂಗ ನನ್ನ ಸ್ಥಿತಿ ಆಗೇದ.

* * * * *

ಕಾಯಿ:—ಮಗೂ, ನಿನಗೆ ಬಾಳೀಹಣ್ಣಿನ ಸೀಕರಣೆಯನ್ನು ಕಲಸಲೋ ಅಥವಾ ಮಾವಿನ ಹಣ್ಣಿನ ಸೀಕರಣಿಯನ್ನು ಕಲಸಲೋ ಬೇಗನೆ ಹೇಳಪಾ ಅಡಿಗಿಗೆ ಹೊತ್ತಾಗಿದೆ.

ಮಗೂ:— ಅವ್ವಾ ಅವ್ವಾ ನನಗೆ ಇವೆರಡೂ ಸೇರುವದಿಲ್ಲ. ನೋಡು ಕುಂಬಳಕಾಯಿ ಸೀಕರಣಿ ಇಲ್ಲದಿರಕ ಪುಟ್ಟೀಕಾಯಿ ಸೀಕರಣಿ ಕಲಸಿದರನ ನಾ ತಿನ್ನುವಾತಾ ಇಲ್ಲದಿರಕ ನಮಗೇನೂ ಬ್ಯಾಡ.

ಕಾಯಿ:—ಛೀ ದಡ್ಡರಂಡೇಗಂಡಾ ಕುಂಬಳಕಾಯಿ ಪುಟ್ಟೀಕಾಯಿ ಸೀಕರಣಿ ಎಂದರೆ ಮಾಡತಾರೇನೋ? ಹುಚ್ಚಾ.

*** *** *** ***

ಕೇಶವಾಚಾರ್ಯ:-ಏನರಿ ಗೋಪಾಳಭಟ್ಟರೇ ವಿಠ್ಠಲಮಂದಿರದಲ್ಲಿ ಈಗ ಎರಡು ದಿವಸಗಳ ಹಿಡಕೊಂಡು ಕೀರ್ತನವದೆಯಂತೆ ಪಾತಾರಿಕಡೆಯವರು ಬಂದಿದ್ದಾರಂತೆ ಏನಾರೆ ಠೀಕ ಹೇಳತಾರೇನ?

ಗೋ:— ಏನಹೇಳಲಿ ಆಚಾರ್ಯರ ಅವರ ಕೀರ್ತನವು ಸುರುವು ಆದಾಕ್ಷಣಕ್ಕೆ ಪಾಂಚಜನ್ಯವನ್ನು ಹೊಡೆಯುವ ಪ್ರಸಂಗವು ಬರುತ್ತದೆ. ಇಷ್ಟೇ ಅಲ್ಲ ಮೊನ್ನಿನ ಕೀರ್ತನಕ್ಕಂತೂ ಕೀರ್ತನವು ಪ್ರಾರಂಭವಾದ ಕೂಡಲೆ ಆರತೀನೆ ಹಚ್ಚಿಬಿಟ್ಟರು

ರಾಮರಾಯಃ—ಮಗನಿಗೆ ಅರವಿಂದಾ ಪೇಟೆಗೆ ಹೋಗಿ ಮನೆಯೊಳಗೆ ಇಷ್ಟು ಮಸಾಲಿಸಾಮಾನು ತಂದು ಕೊಡಪಾ ಏನೇನು ಬೇಕು ಎಷ್ಟೆಷ್ಟುಬೇಕು ಕೇಳಿಕೊಂಡು ಹೋಗು.

ಅರವಿಂದ:—ಅಪ್ಪಾ ಅಪ್ಪಾ ನನಗ ಎಲ್ಲಾ ಗೊತ್ತದ ನಾ ತಗೊಂಡ ಬರತೀನಿ ಅಂತ ಅಂದವನೇ ಪೇಟೆಗೆ ಹೋಗಿಯೇ ಬಿಟ್ಟನು.

ಅಂಗಡಿಕಾರ:— ಬರ್ರಿ ರಾಯರ. ಕೂತುಕೊಳ್ಳಿರಿ. ಯಾಕ ಬಹಳ ದಿವಸ ಹಿಡಿದು ಅಂಗಡೀ ಕಡೆ ಉಚ್ಚ ಹಾಯದೇ ಇಲ್ಲ. ಏನರೇ ಬಕ್ಕಳ ಖರೇದೀ ಆಗಲಿ ಈ ಹೊತ್ತು.

ಅರವಿಂದಃ— ನನಗಿಷ್ಟು ಮಸಾಲೀ ಸಾಮಾನು ಕೊಡಪಾ ಟಿಪ್ಪಣಾ ಮಾಡು ಹೇಳುವೆನು.

ಅಃ— ಏ ರಾಮ್ಯಾ ಕಾಗದಾ ಮಸೀ ದೌತಿ ತಾರೋ ರಾಯರ ಟಿಪ್ಪಣಾ ಮಾಡೂಣು ಏನೇನ ಹೇಳಿರಿ ರಾಯರ.

ಅರವಿಂದಃ— ಒಂದ ಮಣಾ ಜೀರಿಗೆ, ೧ ಧಡೆ ಇಂಗು, ೧ ಚೀಲ ಖೊಬ್ರಿ, ಒಮ್ಮನ ಮೆಂತೆ, ಇಮ್ಮನ ಸಾಸವಿ, ೧ ರೂ. ಎಳ್ಳ, ೧ ಧಡೆ ದಾಲಚಿನ್ನಿ, ೧ ಚೀಲ ಉಪ್ಪು, ೧ ಧಡೆ ಲವಂಗ ೨ ಮಣ ಅರಿಷಿಣ ಹೀಗೆ ಎಲ್ಲಾ ಬರಕೋ.

ಅಂಗಡಿಕಾರಃ— ಏನರೀ ರಾಯರ ನಿಮಗೇನ ಹುಚ್ಚಗಿಚ್ಚ ಹಿಡದದ ಏನ? ಏನ ಕಿರಾಣೀ ಅಂಗಡೀ ಹಾಕತಿರೋ ಹಿಂಗ್ಯಾಕ.

ಅರವಿಂದಃ— ಕೊಡಪಾ ನಮ್ಮ ಅವ್ವಾ ಒಮ್ಮೆಗೇಲೇ ಮಸಾಲೀ ಸಾಮಾನು ಮಾಡಿ ಇಡಾಕಿ ಇದ್ದಾಳ.

ಅಂಗಡಿಕಾರಃ— ಏನರೀ ರಾಯರ ನನಗ ಎಲ್ಲೇರೇ ನಿಮ್ಮ ತಂದೆಯವರ ಕಡಿಂದ ಬೈಸೀರಿ ಮತ್ತ.

**ಅರವಿಂದಃ—** ಕುಡಸಾ ಡ್ರೈದರ ನಾ ತೀದಸಾವ ಇದ್ದೇನು.

**ಆಃ—** ಅವನ ಯಾದಿಯಂತೆ ಸಾಮಾನು ಕೊಟ್ಟೆನು.

**ಅರವಿಂದಃ—** ಗಾಡಿಯಲ್ಲಿ ಎಲ್ಲಾ ಸಾಮಾನು ಹೇರಿಕೊಂಡು ಮನಿಗೆ ಬಂದಾ. ಬಂದು ಎಲ್ಲಾ ತಾಯಿಗೆ ಮುಂದ ಹೇಳಿದಾ ತಾಯಿಯಂತೂ ಬೈದು ಬೈದು ಸಾಯಿಚ್ಚಿದಳು. ತಂದೆಗೆ ತಿಳಿಯಿತು. ತಂದೆಯಂತೂ "ನಿ ಅವ್ವಾನ್ಯ ನನ್ನ ಹೊಟ್ಟೀಲೇ ಹುಟ್ಟೋದಕಿಂತಾ ಒಂದ ಕಲ್ಲ ಆಗಬಾರದಿತ್ತ ನಾಳ್ಯ ಮುಂಡೇಮಗನ ಕತ್ತಿ ಆಗೇದಿ ಬುದ್ಧಿ ಎಲ್ಲಿ ಇಟ್ಟೇದಿ ಥೂ ನಿನ್ನ ಬುದ್ಧಿಗೆ ಬೆಂಕೀ ಹಚ್ಚಲೀ ನಿಮ್ಮ ಅಪ್ಪಾ ನಿಮ್ಮ ಮುತ್ಯಾ ಎಂದರೇ ಹೀಂಗ ಇಷ್ಟು ಮಸಾಲೀ ಸಾಮಾನ ತಂದಿದ್ದರೇನ ಹುಚ್ಚಪ್ಯಾಲಿ. ನಿನ್ನ ಮುಂದ ನಿಂತು ಶಂಖವಾದ್ಯ ಮಾಡುದು ಒಂದು ಉಳಿತು

§ § § § §

**ಶಿಕ್ಷಕಃ—** ವಿದ್ಯಾರ್ಥಿಗೆಃ- ಎಲೋ ಭೀಮಾ ಎಲ್ಲ ಆಹಾರಗಳಲ್ಲಿ ಮೃದುವಾದ ಆಹಾರವು ಯಾವದು!

**ಭೀಮಃ—** ಮಾಸ್ತರೇ ಎಲ್ಲ ಆಹಾರಗಳಲ್ಲಿ ಮೃದುವಾದ ಆಹಾರವು ಯಾವದೆಂದರೆ ಅವಲಕ್ಕಿ ಮಸರಾ ಇಲ್ಲದಿರಕ ಅಳ್ಳಿಟ್ಟರಿ.

**ಶಿಕ್ಷಕಃ—** ಥೂ ಖೋಡಿ ಹಿಂಗ ಹೇಳಿ ಎಲ್ಲಿರೇ ನನ್ನ ಮಾರಿಗೆ ಮಶೀಹಚ್ಚಿ ಪೆಡ್ದಾ ಸತತ ೧ ವರ್ಷ ಆತು ಘೋಕ ಹೊಡಿಶೀ ಮತ್ತ ಮ್ಯಾಲ ಅವಲಕ್ಕಿ ಮಸರಾ, ಅಳ್ಳಿಟ್ಟ ಅಂತ ಅಂತೀ ಅಂದವಮ್ಯಾಲ ಕಲಿಸಿದ ತಪ್ಪಿಗೆ ನನ್ನ ಕರ್ಮೋ ಏನ ನಿನ್ನ ಕರ್ಮೋ. ಮಹಾರಾಯಾ ನಿನಗೆ ಬರದಿರಕ ಸುಮ್ನ ಖೀಬ ನಿಂತಾಂಗ ನಿಂದ್ರಬಾರದ,

† † † † †

**ಅಂಗಡಿಕಾರ**— ರಾಯರ ನಮ್ಮ ಬಾಕೀ ಇಷ್ಟು ಕೊಡ್ರಿ ಬಹಳ ದಿವಸ ಆಯಿತು. ನಾವು ಅದ ಕಾಸಿ ಅದ ಬಡಿಯುವವರು.

**ರಾಯರು**— ಯಾಕ ಹ್ಯಾಂಗ ಕಾಣತದ ಶಿಕ್ಕ ಶಿಕ್ಕಾಂಗ ಕೇಳತೀ ಏನ ನಿನ್ನ ಬಾಕೀದ ಹಚ್ಚಿದಿ, ಏನ ನಿನ್ನ ಲೆಖ್ಖಾ ಮುಗಿಸಗೋತಾರೇನ? ಕೊಡತೀವಲಾ ಆದರ ಇನ್ನೊಮ್ಮೆ ಹಿಂದ ಕೇಳತ ಬರಬ್ಯಾಡ.

**ಅ**— ಏನಪಾ ನಿನಗ ಸಾಮಾನು ಕೊಟ್ಟದ್ದು ತಪ್ಪಾತೇನ? ಏನ ನಮ್ಮ ಅಂಗಡ್ಯಾಗ ಸಾಮಾನ ಇಡಲಿಕ್ಕೆ ಜಾಗಾ ಇದ್ದಿದ್ದಿಲ್ಲ ಅಂತಾ ನಿನ್ನ ಕರೆಕಳಿಸಿ ಕೊಟ್ಟೇವ?

**ರಾ**— ಯಾಕ ಬಾಯಿ ಬಾಹಾಳ ಬಿಡತೀ ಅಂಗಡೀ ಯಾಕ ನೀವು ಹಾಕೀರಿ ಗೊತ್ತ ಆದಏನ? ನಮ್ಮ ಅಡಚಣೀ ಸಾಗಿಸುವ ಸಲುವಾಗಿಯೇ ನೀವು ಅಂಗಡೀ ಹಾಕಿರುತ್ತೀರಿ. ತಿಳಿತೇನ? ನಾವು ಜರ ನಿಮ್ಮ ಬಾಕಿಗೆ ಧತ್ತೂರೀ ತೋರಿಸಿದೀವು ಅಂದ್ರ ಅಂಗಡ್ಯಾಗೀನ ಬಾರದಾನ ಮಾರೊ ಪ್ರಸಂಗ ಮೊದಲ ನಿನಗ ಬರತದ ನಮಗೇನ ಈ ಅಂಗಡಿ ಇಲ್ಲ ಮತ್ತೊಂದ ಅಂಗಡಿ "ಊರ ಸುಟ್ಟರ ಹನುಮಪ್ಪ ಹೊರಗೆ" ತಿಳೀತೇನ?

**ಸಂಪೂರ್ಣ**

# ತಿದ್ದುಪಡೆ.

| ಪುಟ | ವಳಿ | ತಪ್ಪಿದ್ದು | ದುರಸ್ತಿ |
|---|---|---|---|
| | | **ನೀತಿಸಂಗ್ರಹ** | |
| ೧೭ | | ನರಹಾವಳಿಯು | ನರಪಶುಗಳ ಹಾವಳಿಯು |
| ೨೦ | | ಸಾಗಿಸುವದೋ | ಸಾಗುವದೋ |
| ೩೧ | | ಆತ್ಮಹತ್ಯವನು | ಆತ್ಮಹತ್ಯವನ್ನು |
| ೩೨ | | ಹಾಗೆ | ಹ್ಯಾಗೆ |
| | | ಆಯುಷ | ಆಯುಷ್ಯ |
| | | **ದುಡ್ಡು** | |
| ೧೦ | ೧೯ | ನಿವು ಹತ್ತರ | ನಿಮ್ಮ ಹತ್ತರ |
| | ೨೧ | ಪಚಂಚದ | ಪ್ರಪಂಚದ |
| | | **ವಿದ್ಯಾರ್ಥಿಗಳು ನೆನಪಿನಲ್ಲಿಡತಕ್ಕ ಸಂಗತಿಗಳು** | |
| ೧೮ | ೪ | ಅಭ್ಯಾಸ ಬಂದು | ಅಭ್ಯಾಸದ ಒಂದು |
| ೩ ಪ್ಯಾರಾ | ೨ | ಮೆಲೆ ಹೇಳಿದ | ಮೇಲೆ ಹೇಳಿದ |
| | | **ಪರದೇಶಿಯಾದ ಪುರುಷೋತ್ತಮ** | |
| ೧೬ | ೧೭ | ಮುಪ್ಪಿನ ಸಮುಯುಕ್ಕೆ | ಮುಪ್ಪಿನ ಸಮಯಕ್ಕೆ |
| ೨೨ | ೧೮ | ಬಡಬ್ರಾಹ್ಮನ ಮಗಳು | ಬಡಬ್ರಾಹ್ಮಣನ ಮಗಳು |
| ೨೪ | ೯ | ಅಂದವಾಡ | ಅಂದವಾದ |
| ೨೫ | ೧೫ | ಅಧಿಕಾರಿಗಳನು | ಅಧಿಕಾರಗಳನ್ನು |

| ಪುಟ | ವಳಿ | ತಪ್ಪಿದ್ದು | ದುರಸ್ತಿ |
|---|---|---|---|
| | | ಕರ್ಮಸಾಗರದಲ್ಲಿ ಮುಳುಗಿದ ಕಾಳಿದಾಸನು | |
| ೩ ಪ್ರಾರಂ | ೪ | ಕನ್ಯಯನ್ನು | ಕನ್ಯೆಯನ್ನು |
| ೩೦ | ೧೩ | ಬೆಳಿಹತ್ತಿತು | ಬಳೆಯು ಹತ್ತಿತು |
| ೩೧ | ೧೯ | ಆತಹತ್ಯವನ್ನು | ಆತ್ಮಹತ್ಯವನ್ನು |
| ೨ ಪ್ರ. | ೨೦ | ನೆನವಾಗಿ | ನೆನಪಾಗಿ |
| ೩೪ | ೨೧ | ಕಣ್ಣುಗಣನ್ನು | ಕಣ್ಣುಗಳನ್ನು |
| ೩೫ | ೨೦ | ಮಾತಾಡಕಕ್ಕ | ಮಾಡಕಕ್ಕ |
| ೩೬ | ೩ | ಇದರಿಂದರೇ | ಇದರಿಂದಲೇ |
| | | ಚಳಿಗಾಲದ ಚಂದವಾದ ನೋಟವು | |
| ೩೭ | ೯ | ಈವೇಳೆ | ಈವೇಳೆಗೆ |
| ೩೯ | ೫ | ಇಲ್ಲ | ಇಲ್ಲವೆ |
| | | ಆಲಸ್ಯರಾಯನ ಆಳುವಿಕೆ | |
| ೪೧ | ೪ | ಮನೋಥವು | ಮನೋರಥವು |
| | | ಸುಮುಲೆಯ ವೀರತನ | |
| ೪೮ | ೭ | ಧರ್ಯಶಾಲಳು | ಧೈರ್ಯಶಾಲಳು |
| ೪೮ | ೯ | ಹೆಂಗೆಯಳುರೇ | ಹೆಂಗೆಳೆಯರೇ |
| ೫೪ | ೧೧ | ಅದರಮೇಲೆಯೆ | ಅದರಮೇಲೆಯೋ |
| ೫೪ | ೧೫ | ಸ್ವಪ್ನಸದಲ್ಲಿ | ಸ್ವಪ್ನದಲ್ಲಿ |
| ೫೫ | ೧೦ | ಈನ್ಯಾಯುದಲ್ಲಿ ಎನು | ಈನ್ಯಾಯದಲ್ಲಿ ಏನು |
| ೫೫ | ೧೦ | ನಿರ್ಣಯ್ನು | ನಿರ್ಣಯ |
| ೫೬ | ೩ | ಕುಣ್ಣು ಕಿತ್ತಿಸಿ | ಕಣ್ಣು ಕಿತ್ತಿಸಿ |
| ೫೬ | ೧೨ | ಕೇಳಿವಿಯಲ್ಲವೇ | ಕೇಳದಿಯಲ್ಲವೇ |
| ೫೬ | ೨೦ | ನರಾಧನಾನ ಎದುರಿಸೆ | ನರಾಧಮನ ಎದುರಿಸಿ |

| ಪುಟ | ವಳಿ | ತಪ್ಪಿದುದು | ದುರಸ್ತಿ |
|---|---|---|---|
| | | **ಪರನಿಂದೆಯು ಪಾತಕದ ಮಡುವು** | |
| ೬೦ | ೮ | ಈ ನರಾಃಧಮ | ಈ ನರಾಧಮರ |
| ೬೧ | ೬ | ಮಾಡುವವರ | ಮಾಡುವರ |
| ೬೧ | ೨೧ | ಗಿವಿಃಗಿವಿ | ಗಿವಿಗಿವಿ |
| ೬೩ | ೧೪ | ಒಬ್ಬ | ಒಬ್ಬನು |
| ೬೪ | ೯ | ಈಗಿನಿಂದಾ ದೇವಿಯು | ಈನಿಂದಾ ದೇವಿಯು |
| | | **ಸ್ವಾವಲಂಬಿಯಾದ ಸದಾಶಿವನು** | |
| ೬೬ | ೨೫ | ತಾಯೇ ದುಃಖಿಸಬೇಳ | ತಾಯೀ ದುಃಖಿಸಬೇಡ |
| ೭೦ | ೮ | ಹೋಗಿಕಾಸ | ಹೋಗಿಕ್ಯಾಸ |
| ೭೦ | ೬ | ಚೆಣ್ಣವ | ಚೊಣ್ಣವ |
| ೮೯ | ೮ | ವರ್ತಿಸುತ್ತಾ | ವರ್ತಿಸುತ್ತಾ ಹೋದಲ್ಲಿ |
| | | **ವಿನೋದ ಸಾಗರ** | |
| ೨ನೇದು | ೧೩ | ನನಿಂದ | ನನ್ನಿಂದ |
| | ೧೪ ನೇ ವಳಿ | ಇಟ | ಇಡ |
| ೯೩ | ೩ | ಕನುಡಲೆ | ಕನ್ನಡಲೆ |
| ೯೬ | ೧೫ | ನೊಡಲಿಕ್ಕೆ | ನೋಡಲಿಕ್ಕೆ |
| ೯೮ | ೪ | ಕಲಸಲೋ | ಕಲಸಲ್ಯೊ |
| | | ಕಲಸಲೋ | ಕಲಸಲ್ಯೋ |

ತ್ವರೆಮಾಡಿರಿ! ತ್ವರೆಮಾಡಿರಿ!

## ಶ್ರೀ ಗಜಾನನ ಮಿಲ್ಲದ ಸಾಂಗಲಿಯ

# ಸುಂದರವಾದ ಪತ್ತಲಗಳು.

**ಒಂದೇ ದರ.** **ಖಾತ್ರಿ ರುಮಾಲು.**

ಹೆಣ್ಣುಮಕ್ಕಳ ಸಲುವಾಗಿ ಬೇಕಾಗುವ, ಎಲ್ಲತರದ ರೇಶಿಮೆಯು, ಮತ್ತು ನೂಲಿನ ತರತರಿ ಮಾಲು ನಮ್ಮ ವನಿತಾವಸ್ತ್ರ ಭಾಂಡಾರದಲ್ಲಿ ಯೋಗ್ಯ ಕ್ರಯದಿಂದ ದೊರೆಯುತ್ತವೆ. ಒಂದೇ ದರದಿಂದ ಯೋಗ್ಯಬೆಲೆಗೆ ಸಿಗುವ ಠಿಕಾಣ ನಮ್ಮದೊಂದೇ ಅದೆ. ಮತ್ತು ಬಪ್ರವುಜ, ಪಿಸೆಸ್ ಮತ್ತು ಸುಂದರವಾದ ಅರಿವೆಗಳು, ದೊರೆಯುತ್ತವೆ ಒಮ್ಮೆ ಖರೀದಿಮಾಡಿ ಖಾತ್ರಿಮಾಡಿಕೊಳ್ಳಿರಿ.

**ಪ್ರೊ. ಕೆ. ಎಸ್. ಪಾಟೀಲ ಅಥಣಿ.**

**ಪತ್ತೆ:—ಗೋವಿಂದರಾವ ಕುಲಕರ್ಣಿ**

ಸಪ್ತಸಾಗರ ಇವರ ಅಂಗಡಿಯಲ್ಲಿ ದೊರೆಯುತ್ತವೆ